ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 30

ಜುಲೈ 20-26, 1998 ರೂ. 2.00



"ನಾವು ಮಹಿಳೆಯರು ಒಂದು, ನಮಗೆ ಜಾತಿ-ಧರ್ಮಗಳ ಹೆಸರಲ್ಲಿ ಮೀಸಲಾತಿ ಬೇಡ"

ಮಹಿಳಾ ಮೀಸಲಾತಿಯ ವಿಷಯದಲ್ಲಿ ಮತ್ತೆ ವಂಚನೆ

ಇದು ಬಿ.ಜೆ.ಪಿ. ಸರಕಾರದ ಅಸಮರ್ಥತೆಯೇ ಅಥವಾ ಗೋಸುಂಬೆತನವೇ?

ಬಜೆಟ್ ಅಧಿವೇಶನದ ಮೊದಲ ದಿನವೇ ಮಹಿಳಾ ಮೀಸಲಾತಿಯ ಮಸೂದೆಯನ್ನು ಮಂಡಿಸಿ ಅಂಗೀಕರಿಸಲಾಗುವುದೆಂಬ ಪ್ರಧಾನ ಮಂತ್ರಿಗಳ ಮಾತು ಭಾರೀ ಬಡಾಯಿಯೆಂದು ಮತ್ತೊಮ್ಮೆ ಸಾಬೀತಾಯಿತು. ಮೊದಲಿಗೆ ಈ ವಿಷಯದಲ್ಲಿ 'ಒಮ್ಮತ' ಸಾಧ್ಯವಿಲ್ಲವೆಂದು ಗೊತ್ತಿದ್ದೂ ಆ ನೆವದಲ್ಲಿ ಮುಲಾಯಂ ಸಿಂಗ್ ಯಾದವ್, ಲಾಲೂ ಪ್ರಸಾದ್ ಯಾದವ್‌ರವರ ಒತ್ತಾಯಕ್ಕೆ ತಲೆಬಾಗಲಾಯಿತು. ಕೊನೆಗೆ ಜುಲೈ ೧೩ರಂದು ಮಸೂದೆಯನ್ನು ಮಂಡಿಸುವಾಗ ಈ ಇಬ್ಬರು ಮುಖಂಡರ ಪಕ್ಷಗಳವರ ಧಾಂಧಲೆಯನ್ನೇ ನೆಪ ಮಾಡಿಕೊಂಡು ಅದನ್ನೀಗ ಮುಂದೂಡಲಾಗಿದೆ.... ಎಂದಿನವರೆಗೆ ಎಂದು ಸ್ವತಃ ಪ್ರಧಾನಮಂತ್ರಿಗಳಿಗೇ ತಿಳಿದಿಲ್ಲ. (ಈ ಅಧಿವೇಶನದಲ್ಲಿ ಈ ಮಸೂದೆಯ ಮಂಡನೆಯಾಗಲಿಕ್ಕಿಲ್ಲ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ತಿಳಿದುಬಂದಿದೆ) ಇದು ಅಸಮರ್ಥ ನಾಯಕತ್ವದ ಲಕ್ಷಣವೋ ಅಥವಾ ಮಹಿಳಾ ಮೀಸಲಾತಿ ಕುರಿತಂತೆ ಸೋಗಲಾಡಿತನದ ಇನ್ನೊಂದು ಪ್ರದರ್ಶನವೋ ಎಂದು ಬಿ.ಜೆ.ಪಿ. ಬೆಂಬಲಿಗರೂ ಯೋಚಿಸುವಂತೆ ಮಾಡಿದೆ. ಕೆಲವು ಸದಸ್ಯರ ದಾಂಧಲೆಗಳೇ ತಮಗೆ ತಪ್ಪಿಸಿಕೊಳ್ಳಲು ಸದವಕಾಶ ಎಂದು ಬಿಜೆಪಿ ಮುಖಂಡರು ಬಗೆದಿದ್ದಾರೆಯೇ ಎಂಬ ಪ್ರಾಮಾಣಿಕ ಸಂದೇಹ ಹಲವರಲ್ಲಿ ಮೂಡಿದೆ.

ಮಹಿಳೆಯರ ಪ್ರಜಾಪ್ರಭುತ್ವವಾದಿಗಳ ಪ್ರಶ್ನೆ

ಮಹಿಳಾ ಮೀಸಲಾತಿ ಮಸೂದೆಯ ಮಂಡನೆಯನ್ನು ಜುಲೈ 13 ರಂದು ಸದನದಲ್ಲಿ ಸಭಾಧ್ಯಕ್ಷರಿಂದ, ಮಂತ್ರಿಗಳಿಂದ ಕಿತ್ತುಕೊಂಡು ಹರಿದುಹಾಕಿ ತಡೆದವರ ಆಕ್ಷೇಪದಲ್ಲಿ ಹೊಸದೇನೂ ಇರಲಿಲ್ಲ. ಇವನ್ನೆಲ್ಲಾ ಈ ಮೊದಲೇ ಹಲವು ವೇದಿಕೆಗಳಲ್ಲಿ, ಜಂಟಿ ಆಯ್ಕೆ ಸಮಿತಿಯಲ್ಲಿ, ಸರ್ವಪಕ್ಷ ಸಭೆಗಳಲ್ಲಿ ಹಲವು ಬಾರಿ ಚರ್ಚಿಸಲಾಗಿತ್ತು. ಈ ಬಗ್ಗೆ 'ಒಮ್ಮತ' ಅರ್ಥಹೀನ, ಮುಕ್ಕಾಲುಪಾಲಿಗಿಂತಲೂ ಹೆಚ್ಚು ಬೆಂಬಲವಿರುವ ಈ ಮಸೂದೆ ಮೊದಲು ಶಾಸನವಾಗಲಿ, ನಂತರ ಬೇರೆ ಪ್ರಶ್ನೆಗಳನ್ನು ಪರಿಶೀಲಿಸಬಹುದೆಂಬ ಅಭಿಪ್ರಾಯ ಮೂಡಿಬಂದಿದ್ದರೂ ಈಗ ಮತ್ತೆ ಅದೇ 'ಒಮ್ಮತ' ದ ಮಾತು ಬಿಜೆಪಿ ಮುಖಂಡರಿಂದ, ಕಾಂಗ್ರೆಸ್ ಮುಖಂಡರಿಂದ ಕೇಳಿಬರುತ್ತಿದೆ.

ಮರುದಿನ ಕಾನೂನು ಮಂತ್ರಿಗಳು ಮಸೂದೆ ಮಂಡಿಸಲು ಸಭಾಧ್ಯಕ್ಷರ ಅನುಮತಿಗೆ ಎದ್ದು ನಿಂತಾಗ ಸದಸ್ಯರು 'ಆಯ್ತು' ಎನ್ನುವ ಮೊದಲೇ ಸಭಾಧ್ಯಕ್ಷರು 'ಸದ್ಯಕ್ಕೆ ಸದನದ ಒಪ್ಪಿಗೆಯಿಂದ ಮಸೂದೆ ಮಂಡನೆಯನ್ನು ಮುಂದೂಡಲಾಗಿದೆ ಎಂದರು. ಅಂದರೆ ಸಭಾಧ್ಯಕ್ಷರು ಮೊದಲೇ ಈ ಬಗ್ಗೆ ನಿರ್ಧಾರ ಮಾಡಿಕೊಂಡಿದ್ದರೇ ಅಥವಾ ಸರಕಾರದ ಆಶಯದ ಪ್ರಕಾರ ನಡೆದುಕೊಂಡರೇ ಎಂಬ ಬಲವಾದ ಸಂದೇಹ ಎದ್ದಿತು. ಜುಲೈ 13 ರ ಘಟನೆಯ ನಂತರ ಸರಕಾರದ ನಿಲುವಂತೂ ವಿಚಿತ್ರವಾಗಿದೆ. ಒಮ್ಮೆ ಈಗಿರುವ ಸ್ವರೂಪದಲ್ಲೇ ಅದನ್ನು ಮಂಡಿಸಲಾಗುವುದು ಎಂದರೆ, ಇನ್ನೊಮ್ಮೆ 'ಒಮ್ಮತ' ದ ಮಾತೆತ್ತಲಾಗುತ್ತಿದೆ, ಮತ್ತೊಮ್ಮೆ ಅದೀಗ ಸಭಾಧ್ಯಕ್ಷರ ಜವಾಬ್ದಾರಿಯೆನ್ನಲಾಗುತ್ತಿದೆ. ಮಗದೊಮ್ಮೆ ಕಾಂಗ್ರೆಸ್ಸಿನವರು ಕೈಕೊಟ್ಟರು ಎಂದು ಅಳುಮೋರೆ ಮಾಡುತ್ತಿದ್ದಾರೆ. ಒಟ್ಟಾರೆ ಯಾಗಿ ಹೊಣೆಜಾರಿಸಿಕೊಳ್ಳುವ ನಿಲುವು ಎದ್ದು ಕಾಣುತ್ತಿದೆ.

ಕಾಂಗ್ರೆಸ್ಸಿನ ನಿಲುವು ಕೂಡಾ ಇದೇ ರೀತಿಯದ್ದು. ಅದುವರೆಗೂ ಕಾಂಗ್ರೆಸ್ ಅಧ್ಯಕ್ಷರಿಂದ ಹಿಡಿದು ಎಲ್ಲರೂ ಈ ಮಸೂದೆಯ ಅಂಗೀಕಾರಕ್ಕೆ ನಾವು ಬದ್ಧರು ಎಂದು ಹೇಳುತ್ತಿದ್ದವರು ಮುಲಾಯಂ ಸಿಂಗ್ ಯಾದವ್ ಮತ್ತು ಲಾಲೂ ಪ್ರಸಾದ್ ಯಾದವ ತಮ್ಮಹಳೆಯ ಆಕ್ಷೇಪ ಎತ್ತಿದಾಗ ತಮ್ಮದನಿ ಬದಲಿಸಿದರು.

"ಮೊಸಳೆ ಕಣ್ಣೀರು ನಮಗೆ ಬೇಕಿಲ್ಲ"

ವಾಸ್ತವವಾಗಿ ಈ ಆಕ್ಷೇಪಗಳೆಲ್ಲಾ ಈ ಮಸೂದೆ ಶಾಸನವಾಗದಂತೆ ತಡೆಯುವ ಹತಾಶ ತಂತ್ರಗಳು ಎಂದು ಪ್ರಮುಖ ಮಹಿಳಾ ಸಂಸತ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲೋಕಸಭೆಯಲ್ಲಿ ಒ.ಬಿ.ಸಿ. ಪ್ರಾತಿನಿಧ್ಯ ಸಾಕಷ್ಟು ಇದ್ದರೂ, ಈ ವಿಭಾಗದ ಮಹಿಳೆಯರಿಗೆ ಇವರು ಎಷ್ಟು ಸ್ಥಾನ ನೀಡಿದ್ದಾರೆ, ಅದೇ ರೀತಿ ಮುಸ್ಲಿಂ ಮಹಿಳೆಯರಿಗೆ ಎಷ್ಟು ಸ್ಥಾನ ನೀಡಿದ್ದಾರೆ ಎಂಬ ಇವರ ಪ್ರಶ್ನೆಗೆ ಮಸೂದೆ-ವಿರೋಧಿಗಳಲ್ಲಿ ಪ್ರಾಮಾಣಿಕ ಉತ್ತರವಿದೆಯೇ?

"ನಮಗೆ ನಿಮ್ಮ ಮೊಸಳೆ ಕಣ್ಣೀರು ಬೇಕಿಲ್ಲ. ನಿಮ್ಮ ತಂತ್ರ ನಮಗೆ ಅರ್ಥವಾಗುತ್ತದೆ. ನಮಗೆ ಮೀಸಲಾತಿಯೇ ಸಿಗಬಾರದೆಂದು ನಿಮ್ಮ ಬಯಕೆ. ನಮಗೆ ಧರ್ಮದ ಹೆಸರಿನಲ್ಲಿ ಮೀಸಲಾತಿ ಬೇಕಿಲ್ಲ. ಏಕೆಂದರೆ ನಾವು ಕೇಳಿದರೆ, ಬೇರೆ ಅಲ್ಪಸಂಖ್ಯಾತರೂ ಹೇಳುತ್ತಾರೆ. ಕೊನೆಗೆ ನಮಗೆ 33% ಮೀಸಲಾತಿಯೇ ಸಿಗುವುದಿಲ್ಲ. ಇನ್ನೂ ಅದರೊಳಗಿನ ಕೋಟಾ ಎಲ್ಲಿಂದ ಬಂತು. ಅವರು ವಿರೋಧಿಸುವುದಾದರೆ ವಿರೋಧಿಸಲಿ, ನಮ್ಮ ಹೆಗಲ ಮೇಲೆ ಬಂದೂಕು ಇಟ್ಟು ವಿರೋಧಿಸುವುದು ಬೇಡ" ಎಂದು ಹಲವು ಮುಸ್ಲಿಂ ಮಹಿಳೆಯರು ಈ ವಿರೋಧಿಗಳ ಗೋಸುಂಬೆತನವನ್ನು ಬಯಲಿಗೆಳೆದಿದ್ದಾರೆ.

"ನಾವು ಮಹಿಳೆಯರು ಒಂದು, ನಮಗೆ ಜಾತಿ-ಧರ್ಮಗಳ ಹೆಸರಲ್ಲಿ ಮೀಸಲಾತಿ ಬೇಡ" ಎಂದು ಅವರು ಸ್ಪಷ್ಟವಾಗಿ ಸಾರಿದ್ದಾರೆ.

ಬಿಜೆಪಿ ಸರಕಾರ ತಾನು ಹೇಳುವಂತೆ ಈ ಮೀಸಲಾತಿಗೆ ನಿಜವಾಗಿ ಬದ್ಧವಾಗಿದ್ದರೆ ಎಡಪಕ್ಷಗಳ ಅಚಲ ಬೆಂಬಲವಂತೂ ಇದ್ದೇ ಇತ್ತಾದ್ದರಿಂದ ಮಸೂದೆ ಮಂಡಿಸಲು ಹಿಂಜರಿಯುವ ಅವಶ್ಯಕತೆಯಿರಲಿಲ್ಲ ಎಂದೂ ಮಹಿಳಾ ಮುಖಂಡರು ಬೊಟ್ಟು ಮಾಡಿ ತೋರಿಸಿದ್ದಾರೆ. ಈಗ ಅವರ ಬದ್ಧತೆಯ ಮೇಲೆಯೇ ದೊಡ್ಡ ಪ್ರಶ್ನೆ ಚಿಹ್ನೆಯಿದೆ.

ಎಡಪಕ್ಷಗಳ ದೃಢ ನಿಲುವು

ಮಹಿಳಾ ಸಮಾನತೆ ಕುರಿತಂತೆ ಭಾರತದ ರಾಜಕಾರಣದಲ್ಲಿ ಈಗ ರಾರಾಜಿಸುತ್ತಿರುವ ಗೋಸುಂಬೆತನದ ನಡುವೆ ಎಡಪಕ್ಷಗಳು ಮಾತ್ರವೇ ಒಂದು ದೃಢ ಪ್ರಾಮಾಣಿಕ ನಿಲುವು ತಳೆದಿರುವುದು ಇಡೀ ದೇಶದ ಗಮನ ಸೆಳೆದಿದೆ, ಹಿಂದೊಮ್ಮೆ ಭ್ರಷ್ಟಾಚಾರದ ಹಗರಣಗಳ ಪ್ರಕರಣದಲ್ಲಾದಂತೆ. ಈ ಮೀಸಲಾತಿ ಮಸೂದೆಯನ್ನು ತಕ್ಷಣವೇ ಮಂಡಿಸಬೇಕೆಂದು ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಹಾಗೂ ಫಾರ್ವರ್ಡ್ ಬ್ಲಾಕ್ ಸಂಸತ್ ಸದಸ್ಯರು ಮತ್ತೊಮ್ಮೆ ಆಗ್ರಹಿಸಿದ್ದಾರೆ.

"ನಾವು 50% ಮಹಿಳೆಯರಿಗಾಗಿ ಹೋರಾಡುತ್ತಿದ್ದೇವೆ. ಏಕೆಂದರೆ ಅವರು ಒಂದು ವರ್ಗವಾಗಿ ದಮನಕ್ಕೊಳಗಾಗಿದ್ದಾರೆ. ನ್ಯಾಯದಿಂದ ವಂಚಿತರಾಗಿದ್ದಾರೆ" ಎಂದು ಲೋಕಸಭೆಯಲ್ಲಿ ಸಿಪಿಐ(ಎಂ) ಮುಖಂಡರಾದ ಸೋಮನಾಥ್ ಚಟರ್ಜಿ ಎಡಪಕ್ಷಗಳ ಜಂಟಿ ಪತ್ರಿಕಾ ಸಮ್ಮೇಳನದಲ್ಲಿ ಸ್ಪಷ್ಟಪಡಿಸಿದ್ದಾರೆ.

"ಸಭಾಧ್ಯಕ್ಷರ ಕೊಠಡಿಯಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ ನಾವು ಈ ಮಸೂದೆಯನ್ನು ತಕ್ಷಣವೇ ಮಂಡಿಸಬೇಕೆಂದು ದೃಢವಾಗಿ ಹೇಳಿದ್ದೆವು. ಆದರೆ ಅದನ್ನು ಮುಂದೂಡುವ ಬಗ್ಗೆ ತಮ್ಮೊಡನೆ ಸಮಾಲೋಚನೆ ನಡೆಸಿಲ್ಲ. ಸರಕಾರ ಈ ಮುಂದೂಡಿಕೆಯಿಂದ ಹೊಣೆ ಜಾರಿಸಿಕೊಳ್ಳಲು ಸಾಧ್ಯವಿಲ್ಲ" ಎಂದು ಎಡಪಕ್ಷಗಳ ಸಂಸದೀಯ ಮುಖಂಡರು ಹೇಳಿದ್ದಾರೆ.

"ಪ್ರಧಾನ ಮಂತ್ರಿಗಳು ನಾಯಕತ್ವವನ್ನು ತೋರಿಸಿಲ್ಲ. ಬಿಜೆಪಿ ಸದನದಲ್ಲಿ ಆದ ಘಟನೆಯ ಪ್ರಯೋಜನ ಪಡೆಯಲು ಪ್ರಯತ್ನಿಸಿದೆಯಷ್ಟೆ. ಏಕೆಂದರೆ ಅವರ ಪಕ್ಷದೊಳಗೇ ಈ ಮಸೂದೆಗೆ ಪ್ರಬಲ ವಿರೋಧವಿದೆ" ಎಂದು ಸೋಮನಾಥ ಚಟರ್ಜಿಯವರು ಹೇಳಿದರೆ ಸಿಪಿಐ ಮುಖಂಡ ಇಂದ್ರಜಿತ್ ಗುಪ್ತರವರು "ಕೆಲವು ಎಂ.ಪಿ.ಗಳು ನಾವು ಸದನ ಮಸೂದೆಯನ್ನು ಕೈಗೆತ್ತಿಕೊಳ್ಳಲು ಬಿಡುವುದಿಲ್ಲ ಎನ್ನುವಾಗ ಈ ಸರಕಾರ ಏನು ಮಾಡುತ್ತಿದೆ?" ಎಂದು ಖಾರವಾಗಿ ಪ್ರಶ್ನಿಸಿದರು. ಇತರ ಎಲ್ಲರ ಬೆಂಬಲವಿರುವ ಒಂದು ಮಸೂದೆಯನ್ನು ಕೇವಲ 30-40 ಜನ ಎಂ.ಪಿ.ಗಳು ತಡೆಯಲು ಸರಕಾರ ಅವಕಾಶ ಮಾಡಿಕೊಟ್ಟಿದೆ ಎಂದು ಅವರು ಆಪಾದಿಸಿದ್ದಾರೆ.

ಗಾಯದ ಮೇಲೆ ಬರೆ - ಮತ್ತೆ ವಿದ್ಯುತ್ ದರ ಏರಿಕೆ

ಜುಲೈ 22ರಂದು ರಾಜ್ಯಾದ್ಯಂತ ಚಳುವಳಿಗೆ ಸಿ.ಪಿ.ಐ.(ಎಂ) ನಿರ್ಧಾರ

ವಿದ್ಯುತ್ ದರಗಳನ್ನು ಈ ವರ್ಷವೂ ಶೇ. 11ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸಿರುವುದನ್ನು ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಉಗ್ರವಾಗಿ ಟೀಕಿಸಿದೆ.

ಜುಲೈ 15ರಿಂದಲೇ ಜ್ಯಾರಿಗೆ ಬರುವಂತೆ ಗೃಹ ಬಳಕೆಯ ವಿದ್ಯುತ್ತಿಗೆ ಯೂನಿಟಿಗೆ 15 ರಿಂದ 45 ಪೈಸೆಯಷ್ಟು ಹಾಗೂ ಇತರರಿಗೆ 15 ರಿಂದ 55 ಪೈಸೆ ಹೆಚ್ಚಿಸಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಹೊರಡಿಸಿರುವ ಪ್ರಕಟಣೆ ಜನತೆಯಲ್ಲಿ ಭಾರೀ ಆಕ್ರೋಶವನ್ನುಂಟು ಮಾಡಿದೆ. ಕಳೆದ ವರ್ಷ ಶೇ. 13ರಷ್ಟು, 1991ರಲ್ಲಿ ಶೇ. 36 ರಷ್ಟು ದರ ಏರಿಕೆಯಾಗಿತ್ತು. ಈಗಾಗಲೇ ಬೆಲೆ ಯೇರಿಕೆಯ ಬಾಧೆಯಿಂದ ತತ್ತರಿಸುತ್ತಿರುವ ಜನತೆಯ ಮೇಲೆ ಎಳೆದ ಬರೆಯಿದೆಂದು ಟೀಕಿಸಿರುವ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಜುಲೈ 22ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಕೆ.ಇ.ಬಿ. ಕಛೇರಿಗಳೆದುರು ಪ್ರತಿಭಟನಾ ಪ್ರದರ್ಶನ ನಡೆಸಲು ಕರೆ ನೀಡಿದೆ.

ಜುಲೈ 17ರಂದೇ ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕೆ.ಇ.ಬಿ.ಯ ಮುಖ್ಯ ಕಛೇರಿಯೆದುರು ಪ್ರತಿಭಟನಾ ಪ್ರದರ್ಶನ ನಡೆದಿದೆ. ಆಳುವ ಪಕ್ಷದ ಶಾಸಕರೂ ಈ ಬೆಲೆಯೇರಿಕೆಯನ್ನು ವಿರೋಧಿಸಿದ್ದಾರೆ.

ಎರಡು ನಾಲಗೆಯ ಬಿಜೆಪಿ

ಬಿಜೆಪಿ ಮುಖಂಡರೂ ಈ ಬೆಲೆಯೇರಿಕೆಯನ್ನು ವಿರೋಧಿಸಿದ್ದಾರೆ. ಆದರೆ ಕೇಂದ್ರದಲ್ಲಿನ ಇವರ ಸರಕಾರವೇ 'ವಿದ್ಯುತ್ ದರ ಹತೋಟಿ ಪ್ರಾಧಿಕಾರ'ವನ್ನು ರಚಿಸಿ ಇಂತಹ ಬೆಲೆಯೇರಿಕೆಗಳಿಗೆ ಹಾದಿ ಮಾಡಿಕೊಟ್ಟಿದೆಯೆಂಬುದನ್ನು ಅವರು ಏಕೆ ಮರೆಮಾಚುತ್ತಿದ್ದಾರೆ? ಈ ಬೆಲೆ ಏರಿಕೆ ಉದಾರೀಕರಣದ, ಹೊಸ ಆರ್ಥಿಕ ನೀತಿಗಳ ಜಾರಿಯ ಭಾಗ. ಈ ನೀತಿಗಳನ್ನು ಇನ್ನಷ್ಟು ತೀವ್ರಗೊಳಿಸುತ್ತಿರುವುದರ ಜೊತೆಗೆ ವಿದ್ಯುತ್ ವಲಯದಲ್ಲಿ ನಿರ್ದಿಷ್ಟವಾಗಿ ಖಾಸಗಿ, ಬಹುರಾಷ್ಟ್ರೀಯ ವಿದ್ಯುತ್ ತಯಾರಿಕಾ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಸ್ವತಃ ಬಿಜೆಪಿ ವಿದ್ಯುತ್ ಮಂತ್ರಿ ರಂಗರಾಜನ್ ಕುಮಾರಮಂಗಲಂ ಈ 'ಹತೋಟಿ ಪ್ರಾಧಿಕಾರ ಮಸೂದೆ'ಯನ್ನು ಮಂಡಿಸುತ್ತಾ "ವಿದ್ಯುತ್ತಿನ ಬೆಲೆಯೊಡನೆ ಆಟವಾಡಿದ್ದು ಸಾಕು. ಇನ್ನಾದರೂ ವಿದ್ಯುತ್ತಿನ ಬೆಲೆ ಏನೆಂದು ಎಲ್ಲರಿಗೂ ತಿಳಿಯಬೇಕು" ಎಂದಿದ್ದರು. ವಿದ್ಯುತ್ ದರ ಏರಿಕೆಗೆ ಇದಕ್ಕಿಂತ ದೊಡ್ಡ ಸಮರ್ಥನೆ ಬೇರೆ ಬೇಕೆ? ಈ ಶಾಸನದ ವಿಭಾಗ 29(f) ಹೀಗೆ ಹೇಳಿದೆ - 'ವಿದ್ಯುತ್ ಉತ್ಪಾದನೆ, ರವಾನೆ, ವಿತರಣೆ ಮತ್ತು ಪೂರೈಕೆಯನ್ನು ವಾಣಿಜ್ಯ ನೀತಿಗಳ ಪ್ರಕಾರ ನಡೆಸ ಬೇಕು'. ವಿಭಾಗ 29(3) ಹೀಗನ್ನುತ್ತದೆ - "ಈ ಶಾಸನದ ಪ್ರಕಾರ ವಿದ್ಯುತ್ ದರ ನಿರ್ಧರಿಸುವಾಗ ಯಾವುದೇ ವಿದ್ಯುತ್ ಬಳಕೆದಾರರಿಗೆ ಅನಗತ್ಯ ಆದ್ಯತೆ ತೋರಿಸಬಾರದು....." ಅಂದರೆ ನಿಷ್ಕರುಣೆಯಿಂದ ವಿದ್ಯುತ್ ದರ ಏರಿಸುತ್ತಾ ಹೋಗಿ ಎಂದೇ ಇದರರ್ಥವಲ್ಲವೇ? ಆದ್ದರಿಂದ "ಕೇಂದ್ರದಲ್ಲಿ ಇಂತಹ ನೀತಿಗಳನ್ನು ಅನುಸರಿಸುತ್ತಾ ರಾಜ್ಯದಲ್ಲಿ ವಿರೋಧಿಸುವ ಎರಡು ನಾಲಗೆಯ ನೀತಿಯನ್ನು ಬಿಜೆಪಿ ಅನುಸರಿಸುತ್ತಿದೆ" ಎಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಟೀಕಿಸಿದೆ.

ಏರಿಸಿದ ದರಗಳನ್ನು ಕೂಡಲೇ ಇಳಿಸಬೇಕು, ರೈತರಿಗೆ ಪಂಪ್‌ಸೆಟ್‌ಗಳಿಗೆ ಈಗಾಗಲೇ ವಿಧಿಸಿರುವ ಅಶ್ವ ಶಕ್ತಿಗೆ ರೂ.300 ಎಂಬ ದರವನ್ನು ರೂ. 100ಕ್ಕೆ ಇಳಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಬಾಗೂರು-ನವಿಲೆ-
ರೈತರ ಹೋರಾಟಕ್ಕೆ ಬೆಂಬಲ

ಬಾಗೂರು-ನವಿಲೆ ಪ್ರದೇಶದ ರೈತರ ಬೇಡಿಕೆಗಳು ನ್ಯಾಯಸಮ್ಮತವಾಗಿದ್ದು ಈ ಹೋರಾಟವನ್ನು ಬೆಂಬಲಿಸಿರುವ ಸಿಪಿಐ(ಎಂ) ಸಮಸ್ಯೆ ಪರಿಹರಿಸಲು ಮುಖ್ಯಮಂತ್ರಿಗಳ ತುರ್ತು ಮಧ್ಯಪ್ರವೇಶಕ್ಕೆ ಒತ್ತಾಯಿಸಿದೆ. ರೈತ ಚಳುವಳಿಯನ್ನು ದಮನಮಾಡಲು ಅತ್ಯಧಿಕ ಪೋಲೀಸ್ ಬಲವನ್ನು ಜಮಾಯಿಸಿ ಧಾಳಿ ನಡೆಸಲು ಯೋಚಿಸಿರುವ ಸರ್ಕಾರದ ಕ್ರಮವನ್ನು ಉಗ್ರವಾಗಿ ಖಂಡಿಸಿದ ಸಿಪಿಐ(ಎಂ) ಅಂತಹ ಕೆಲಸಕ್ಕೆ ಕೈ ಹಾಕಬಾರದೆಂದು ಆಗ್ರಹಿಸಿದೆ.

ಈ ನಡುವೆ ಹಾಸನ ಮತ್ತು ತುಮಕೂರು ಜಿಲ್ಲೆಗಳ ರೈತರ ನಡುವೆ ವೈಷಮ್ಯ ಹುಟ್ಟು ಹಾಕಲು ಕೆಲವು ಸ್ಥಾಪಿತ ಹಿತಾಸಕ್ತಿಗಳು ಪ್ರಯತ್ನಿಸುತ್ತಿವೆ ಹಾಗೂ ಇದಕ್ಕೆ ಸರ್ಕಾರದ ಕುಮ್ಮಕ್ಕೂ ಇದೆ, ಈ ಸಂಚುಗಳನ್ನು ಎರಡೂ ಪ್ರದೇಶಗಳ ರೈತರು ಅರಿತುಕೊಂಡು ಒಗ್ಗಟ್ಟನ್ನು ಕಾಪಾಡಿಕೊಳ್ಳಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ವಿನಂತಿಸಿದೆ. ಈ ಪರಿಸ್ಥಿತಿಯ ಗಂಭೀರತೆಗೆ ಸರ್ಕಾರವೇ ಹೊಣೆಯೆಂದು ಆರೋಪಿಸಿದ ಸಿಪಿಐ(ಎಂ) ರೈತರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದೆ.

ಇತಿಹಾಸದ ಪುಟಗಳಿಂದ



ರಾಬಿನ್ ದ್ವೀಪ

ಕತ್ತಲು ಕವಿದ ವರ್ಷಗಳು

ವರ್ಣಭೇದದ ವಿರುದ್ಧ, ಕರಿಯರ ವಿಮೋಚನೆಯ ಹೋರಾಟಕ್ಕಾಗಿ 27 ವರ್ಷಗಳಷ್ಟು ದೀರ್ಘಕಾಲ ರಾಬಿನ್ ದ್ವೀಪದಲ್ಲಿ 'ಜೀವಾವಧಿ ಶಿಕ್ಷೆ' ಅನುಭವಿಸಿದ ನೆಲ್ಸನ್ ಮಂಡೇಲಾರ ಅದಮ್ಯ ಚೇತನದ ಕಥೆ ಕೇಳುವುದೆಂದರೆ ರೋಮಾಂಚನ ಉಂಟು ಮಾಡುವಂತಹುದು, ಅದರಲ್ಲೂ ಅವರದೇ ಮಾತುಗಳಲ್ಲಿ. ಸ್ವಾತಂತ್ರ್ಯದತ್ತ ದೀರ್ಘ ಪಯಣ (Long Walk to Freedom)ನೆಲ್ಸನ್ ಮಂಡೇಲಾರ ಆತ್ಮ ಕಥನ. 'ರಾಬಿನ್ ದ್ವೀಪ - ಕತ್ತಲು ಕವಿದ ವರ್ಷಗಳು' ಆ ಆತ್ಮ ಕಥನದ ಪ್ರಕರಣ. ಇಲ್ಲಿ ಆಯ್ದ ಆ ಪ್ರಕರಣದ ಭಾಗ ರಾಬಿನ್ ದ್ವೀಪದಲ್ಲಿ ಅವರ ಕರಾಳ ಬದುಕು ಆರಂಭವಾದ ಬಗ್ಗೆ ಹೇಳುತ್ತದೆ. ಕಳೆದ ಸಂಚಿಕೆಯಿಂದ ಮುಂದುವರೆದುದು

ದ್ವೀಪದ ಒಂದು ಕೊನೆಯಲ್ಲಿರುವ ವಿಮಾನ ತಾಣದಲ್ಲಿ ಇಳಿದೆವು. ಅದು ಒಂದು ಮೋಡಕವಿದ ದುಗುಡ ತುಂಬಿದ ದಿನವಾಗಿತ್ತು. ವಿಮಾನದಿಂದ ಇಳಿಯುತ್ತಿದ್ದಂತೆ ಚಳಿಗಾಳಿಯ ಕೊರೆತ, ನಮ್ಮ ತೆಳ್ಳಗಿನ ಜೈಲಿನ ಸಮವಸ್ತ್ರವನ್ನು ತಿವಿದುಕೊಂಡು ಬಂದಂತಿತ್ತು. ಸ್ವಯಂ ಚಾಲಿತ ಗನ್ನುಗಳನ್ನು ಹಿಡಿದ ಸೈನಿಕರು ನಮ್ಮನ್ನು ಎದುರುಗೊಂಡರು. ವಾತಾವರಣದಲ್ಲಿ ಬಿಗುವು ಇತ್ತು. ಮೌನ ಆವರಿಸಿತ್ತು. ಎರಡು ವರ್ಷದ ಹಿಂದೆ ಬಂದಾಗ ಇದ್ದಂತೆ ಗದ್ದಲದ ಸ್ವಾಗತ ಇರಲಿಲ್ಲ. ಒಂಟಿಯಾಗಿ ನಿಂತಿರುವ ಕಲ್ಲಿನ ಕಟ್ಟಡದಲ್ಲಿರುವ ಹಳೆಯ ಜೈಲಿಗೆ ನಮ್ಮನ್ನು ಒಯ್ದರು. ಅಲ್ಲಿ ಹೊರಗೇನೇ ನಮಗೆ ಬಟ್ಟೆ ಕಳಚಲು ಹೇಳಿದರು. ಜೈಲಿನ ಜೀವನ ವ್ಯಕ್ತಿಯ ಘನತೆಯ ಮೇಲೆ ಆಘಾತ ಮಾಡುತ್ತಿರುತ್ತದೆ. ಅವುಗಳಲ್ಲಿ ಒಂದು ಜೈಲು ಬದಲಾದಾಗ ಜೈಲಿನ ಸಮವಸ್ತ್ರವೂ ಬದಲಾಗುವುದು. ಇದು ಜೈಲಿನ ಕಂದಾಚಾರಗಳಲ್ಲಿ ಒಂದು. ನಾವು ಬಟ್ಟೆ ಕಳಚಿ ನಿಂತಾಗ ರಾಬಿನ್ ದ್ವೀಪದ ಖಾಕಿ ಸಮವಸ್ತ್ರಗಳನ್ನು ನಮ್ಮತ್ತ ಎಸೆದರು.

ವರ್ಣಭೇದದ ನೀತಿ ಜೈಲಿನ ಸಮವಸ್ತ್ರದ ವರೆಗೆ ಹರಡಿತ್ತು. ಕ್ಯಾಥಿ ಬಿಟ್ಟು ಉಳಿದವರಿಗೆಲ್ಲಾ ಸಣ್ಣ ಚಡ್ಡಿ, ಅಂಗಿ ಮತ್ತು ಕ್ಯಾನ್‌ವಾಸ್ ಜಾಕೆಟ್ ಕೊಟ್ಟರು. ಕ್ಯಾಥಿ ಒಬ್ಬನೇ ನಮ್ಮಲ್ಲಿ ಕರಿಯ ಅಲ್ಲದವನು. ಭಾರತೀಯ ಮೂಲದವನು. ಕ್ಯಾಥಿಗೆ ಪ್ಯಾಂಟುಗಳನ್ನು ಕೊಟ್ಟರು. ಸಾಮಾನ್ಯವಾಗಿ ಕರಿಯರಿಗೆ ಕಾರ್ ಟೈರ್‌ಗಳಿಂದ ಮಾಡಿದ ಚಪ್ಪಲಿ ಕೊಡುತ್ತಾರೆ. ಆದರೆ ಯಾಕೋ ನಮಗೆ ಚರ್ಮದ ಶೂ ಕೊಟ್ಟಿದ್ದರು. ಕ್ಯಾಥಿಗೆ ಮಾತ್ರ ಶೂಗೆ ಸಾಕ್ಸ್ ಕೊಟ್ಟರು. ಕರಿಯರಿಗೆ ಚಡ್ಡಿ ಕೊಡುವ ಉದ್ದೇಶ ನಾವು ಹುಡುಗರು ಎಂದು ನೆನಪಿಸಿ ಅವಮಾನ ಮಾಡುವುದಾಗಿತ್ತು. ಆದಿನ ನಾನು ಚಡ್ಡಿಯನ್ನು ಪ್ರತಿಭಟಿಸದೆ ಹಾಕಿಕೊಂಡೆ. ಆದರೆ ಇದನ್ನು ಬಹಳ ದಿನ ಸಹಿಸುವುದಿಲ್ಲ ಎಂದು ಶಪಥ ಮಾಡಿದೆ.

ವಾರ್ಡನ್‌ಗಳು ಗನ್ ಮೂಲಕ ಯಾವ ಕಡೆಗೆ ಹೋಗಬೇಕೆಂದು ತೋರಿಸುತ್ತಿದ್ದರು. ಅವರ ಆಜ್ಞೆಗಳನ್ನು ಒಂದು ಶಬ್ದದಲ್ಲಿ ಒದರುತ್ತಿದ್ದರು 'ನಡೆ' 'ಮೌನ' 'ನಿಲ್ಲಿ' - ಅಂತ. ಹಿಂದೆ ಇಲ್ಲಿದ್ದಾಗಿನಂತೆ ಒರಟಾಗಿ ನಮ್ಮನ್ನು ಬೆದರಿಸುತ್ತಿರಲಿಲ್ಲ. ತಮ್ಮ ಭಾವನೆಗಳನ್ನು ತೋರಗೊಡುತ್ತಿರಲಿಲ್ಲ.

ಹಳೆ ಜೈಲು ನಮ್ಮ ತಾತ್ಕಾಲಿಕ ತಾಣವಾಗಿತ್ತು. ಅಧಿಕಾರಿಗಳು ರಾಜಕೀಯ ಕೈದಿಗಳಿಗೆ ಪ್ರತ್ಯೇಕ ಅತ್ಯಂತ ಹೆಚ್ಚಿನ ಭದ್ರತೆಯ ಜೈಲು ಕಟ್ಟುತ್ತಿದ್ದರು. ಅಲ್ಲಿ ಎಲ್ಲೂ ಹೊರಗೆ ಹೋಗುವಂತಿರಲಿಲ್ಲ. ಇತರ ಕೈದಿಗಳ ಜೊತೆ ಯಾವುದೇ ರೀತಿಯ ಸಂಪರ್ಕ ಮಾಡುವಂತಿರಲಿಲ್ಲ. ನಾಲ್ಕನೇಯ ದಿನ ಬೆಳಗ್ಗೆ ನಮಗೆ ಕೊಳ ತೊಡಿಸಿ ಮುಚ್ಚಿದ ಟ್ರಕ್ ಒಂದರಲ್ಲಿ ಜೈಲಿನೊಳಗಿನ ಜೈಲಿಗೆ ಒಯ್ದರು. ಹೊಸ ಕಟ್ಟಡ ಒಂದು ಮಾಳಿಗೆಯ ಆಯತಾಕಾರದ ಕಲ್ಲಿನ ಕೋಟೆಯಂತಿತ್ತು. ನೂರಡಿ ಉದ್ದ ಮೂವತ್ತಡಿ ಅಗಲ. ಮಧ್ಯೆ ಸಿಮೆಂಟಿನ ದೊಡ್ಡ ಅಂಗಳ. ಕಟ್ಟಡದ ಮೂರು ಕಡೆ ಸೆಲ್‌ಗಳಿದ್ದವು. ನಾಲ್ಕನೇ ಕಡೆ ಇಪ್ಪತ್ತು ಅಡಿ ಎತ್ತರದ ಗೋಡೆ. ಜರ್ಮನ್ ಶೆಪರ್ಡ್ ನಾಯಿಗಳನ್ನು ಹಿಡಿದ ಕಾವಲುಗಾರರು ಇದರ ಮೇಲೆ ಓಡಾಡುತ್ತಿದ್ದರು.

ಮೂರು ಕಡೆ ಸೆಲ್ ಇರುವ ಭಾಗಗಳನ್ನು ಸೆಕ್ಷನ್ ಎ,ಬಿ,ಐ, ಅನ್ನುತ್ತಿದ್ದರು. ನಮ್ಮನ್ನು ಸೆಕ್ಷನ್ 'ಬಿ' ನಲ್ಲಿ ಹಾಕಿದರು. ಇದು ಸಿಮೆಂಟ್ ಅಂಗಳದ ಪೂರ್ವಕ್ಕಿತ್ತು. ನಮ್ಮಲ್ಲಿ ಪ್ರತಿಯೊಬ್ಬರನ್ನೂ ಒಂಟಿ ಸೆಲ್‌ನಲ್ಲಿ ಹಾಕಿದ್ದರು. ನಮ್ಮ ಸೆಲ್‌ಗಳು ಒಂದು ಉದ್ದವಾದ ಓಣಿಯಂತಿರುವ ಎಡ-ಬಲದಲ್ಲಿದ್ದವು. ಒಂದು ಸೆಲ್‌ಗಳ ಸಾಲು ಅಂಗಳಕ್ಕೆ ಮುಖಮಾಡಿತ್ತು. ಸುಮಾರು ಮೂವತ್ತು ಇಂತಹ ಸೆಲ್‌ಗಳಿದ್ದವು. ಪ್ರತಿ ಸೆಲ್‌ಗೆ ಒಂದು ಕಿಟಕಿ ಒಂದು ಬಾಗಿಲು ಇದ್ದವು. ಕಿಟಕಿಗೆ ಕಬ್ಬಿಣದ ಸಲಾಕೆ ಒಂದು ಅಡಿ ಉದ್ದ ಅಗಲ ಇತ್ತು. ಬಾಗಿಲು ಕಬ್ಬಿಣದ ಸಲಾಕೆಯ ಬಾಗಿಲು. ಒಳಗೆ ಮತ್ತು ದಪ್ಪವಾದ ಮರದ ಬಾಗಿಲು. ಹೊರಗಿಂದ ಹಗಲಲ್ಲಿ ಕಬ್ಬಿಣದ ಒಳಬಾಗಿಲು ಮಾತ್ರ ಮುಚ್ಚಿರುತ್ತಿತ್ತು. ರಾತ್ರಿ ಹೊರಗಿನ ಮರದ ಬಾಗಿಲು ಮುಚ್ಚಿರುತ್ತಿತ್ತು.

ಸೆಲ್‌ಗಳನ್ನು ಅವಸರದಲ್ಲಿ ಕಟ್ಟಲಾಗಿತ್ತು. ಆದ್ದರಿಂದ ಗೋಡೆಗಳು ಯಾವಾಗಲೂ ಒದ್ದೆಯಾಗಿರುತ್ತಿದ್ದವು. ನಾನು ಈ ಬಗ್ಗೆ ಜೈಲಿನ ಕಮಾಂಡಿಂಗ್ ಆಫೀಸರ್ ಬಳಿ ದೂರಿದಾಗ, ಕೈದಿಗಳ ದೇಹಗಳು ಎಲ್ಲಾ ತೇವವನ್ನು ಹೀರಿಕೊಳ್ಳುತ್ತವೆ ಎಂದು ಮೂದಲಿಸಿದ. ನಮಗೆ ಮೂರು ಹೊದಿಕೆಗಳನ್ನು ಕೊಡಲಾಗುತ್ತಿತ್ತು. ಅವು ಎಷ್ಟು ಸವೆದು ಹೋದವು ಮತ್ತು ಹರಕಲಾಗಿದ್ದವು ಎಂದರೆ ಹೆಚ್ಚು ಕಡಿಮೆ ಹೆಸರಿಗೆ ಹೊದಿಕೆಗಳಾಗಿದ್ದವು. ಹುಲ್ಲಿನ ಚಾಪೆಯೇ ನಮ್ಮ ಹಾಸಿಗೆಯಾಗಿತ್ತು. ಆ ಮೇಲೆ ಫೆಲ್ಟ್ ಚಾಪೆ ಕೊಟ್ಟರು. ಅದನ್ನು ಹುಲ್ಲಿನ ಚಾಪೆ ಮೇಲೆ ಹಾಕಿದಾಗ ಸ್ವಲ್ಪವಾದರೂ ಮೆತ್ತನೆ ಕೊಡುತಿತ್ತು. ಅದು ಚಳಿಗಾಲವಾದ್ದರಿಂದ ಮತ್ತು ಹೊದಿಕೆ ಯಾವುದೇ ಬೆಚ್ಚನೆ ಕೊಡುತ್ತಿಲ್ಲವಾದ್ದರಿಂದ ನಾವು ಎಲ್ಲಾ ಬಟ್ಟೆಗಳನ್ನು ಹಾಕಿಕೊಂಡು ಮಲಗಿಯೂ ನಡುಗುತ್ತಿದ್ದೆವು. ನನ್ನ ಸೆಲ್ ಓಣಿಯ ಕೊನೆಯಲ್ಲಿತ್ತು. ಅದು ಅಂಗಳಕ್ಕೆ ಎದುರಾಗಿತ್ತು. ಸೆಲ್ ಎಷ್ಟು ಚಿಕ್ಕದಾಗಿತ್ತೆಂದರೆ ಮೂರು ಹೆಜ್ಜೆ ನಡೆದರೆ ಸೆಲ್ ಗೋಡೆಗೆ ಹೊಡೆಯುತ್ತಿದ್ದೆ. ನಾನು ಸೆಲ್‌ನಲ್ಲಿ ಬಿದ್ದುಕೊಂಡರೆ ನನ್ನ ತಲೆ ಒಂದು ಗೋಡೆಗೆ ಹೊಡೆದರೆ ಕಾಲು ಎದುರಿನ ಗೋಡೆ ಮುಟ್ಟುತ್ತಿತ್ತು. ಸೆಲ್ ನ ಅಗಲ ಕೇವಲ ಆರು ಅಡಿ ಇತ್ತು. ಆದರೆ ಗೋಡೆಗಳು ಕನಿಷ್ಟ ಎರಡು ಅಡಿ ದಪ್ಪವಿದ್ದವು.

ಪ್ರತಿ ಸೆಲ್ ನ ಹೊರಗೆ ಒಂದು ಬಿಳಿ ಕಾರ್ಡ್ ಇತ್ತು. ಕೈದಿಯ ಹೆಸರು, ಜೈಲು ಸರ್ವಿಸ್ ನಂಬರ್ ಅದರಲ್ಲಿ ಇರುತ್ತಿತ್ತು. ನನ್ನ ಕಾರ್ಡ್‌ನಲ್ಲಿ ಎನ್. ಮಂಡೇಲಾ 466/64, ಅಂದರೆ ನಾನು 1964 ರಲ್ಲಿ ರಾಬಿನ್ ದ್ವೀಪಕ್ಕೆ ದಾಖಲಾದ 466ನೇ ಕೈದಿಯಾಗಿದ್ದೆ. ನಾನು ನಲ್ವತ್ತಾರು ವರ್ಷದ ಆಜೀವ ಶಿಕ್ಷೆಗೊಳಗಾದ ರಾಜಕೀಯ ಕೈದಿಯಾಗಿದ್ದೆ. ಆ ಗೂಡು ಎಷ್ಟು ವರ್ಷ ನನ್ನ ಮನೆಯಾಗಿರುತ್ತದೆ ಎಂದು ನನಗೆ ಗೊತ್ತಿರಲಿಲ್ಲ.

(ಪುಟ 7 ಕ್ಕೆ)

ಬಂಡವಾಳಶಾಹಿ ಪದ್ಧತಿ ತರುವ ಸೌಭಾಗ್ಯ



ಜಿ.ಎಸ್.ಮಣಿ

ಬಂಡವಾಳಶಾಹಿ ಪದ್ಧತಿ ಅತ್ಯಂತ. ಒಳ್ಳೆಯ ಪದ್ಧತಿ ಎಂದು ಈ ಪದ್ಧತಿಯ ಪ್ರತಿಪಾದಕರು ಹೇಳಬಹುದು. ಇದು ಬದುಕುವುದಕ್ಕಲ್ಲದಿದ್ದರೂ ಸಾಯುವುದಕ್ಕೆ ಸ್ವಾತಂತ್ರ್ಯ ನೀಡುತ್ತದಲ್ಲವೆ?

ಬಂಡವಾಳಶಾಹಿ ಪದ್ಧತಿ ಮನುಷ್ಯನಿಗೆ ಸೌಭಾಗ್ಯ ತರುತ್ತದೆ, ಈ ಪದ್ಧತಿ ಅತ್ಯಂತ ಒಳ್ಳೆಯ ಪದ್ಧತಿ, ಬಂಡವಾಳಶಾಹಿ ಪದ್ಧತಿ ಶಾಶ್ವತವಾದದ್ದು ಎಂದೆಲ್ಲಾ ಬಂಡವಾಳ ಶಾಹಿ ಪದ್ಧತಿಯ ಪ್ರತಿಪಾದಕರು ಹೇಳುತ್ತಾರೆ. ಬಂಡವಾಳಶಾಹಿ ಪದ್ಧತಿ ಮಾನವಕೋಟಿಗೆ ನೋವನ್ನು ತರುತ್ತದೆ. ಮತ್ತು ಅದು ಅದರೊಳಗಿನ ಬಿಕ್ಕಟ್ಟುಗಳನ್ನು ಪರಿಹರಿಸಲಾರದು ಎಂಬುದು ಇತಿಹಾಸ ದಿಂದ ಗೊತ್ತಾಗುತ್ತದೆ. ತೀರ ಇತ್ತೀಚಿನ ಉದಾಹರಣೆ ಏಶಿಯನ್ ಕರೆನ್ಸಿ ಬಿಕ್ಕಟ್ಟಿನದು.

ಆಗ್ನೇಯ ಏಶಿಯಾದ ದೇಶಗಳನ್ನು ಏಶಿಯಾದ ಹುಲಿಗಳೆಂದು ಹೇಳಲಾಗು ತ್ತಿತ್ತು. ಆರ್ಥಿಕವಾಗಿ ಅವು ಅಷ್ಟು ವೇಗವಾಗಿ ಅಭಿವೃದ್ಧಿ ಹೊಂದಿದ್ದು ಬಲಿಷ್ಟವಾಗಿದೆ ಎಂದೆಲ್ಲಾ ಹೇಳಲಾಗುತ್ತಿತ್ತು. ಇದಲ್ಲದೆ ಮುಕ್ತ ಮಾರುಕಟ್ಟೆ ಮತ್ತು ಉದಾರೀಕರಣಗಳ ಯಶಸ್ಸಿನ ಪ್ರತೀಕವೆಂದು ಕರೆಯಲಾಗುತ್ತಿತ್ತು. ಆದರೆ ಈ ಆರ್ಥಿಕಗಳು ಸೂಜಿ ಚುಚ್ಚಿದ ಬಲೂನಿನಂತೆ ಠುಸ್ಸೆಂದದ್ದು ಈಗ ಎಲ್ಲರಿಗೂ ಗೊತ್ತಿರುವ ವಿಷಯ.

ಈ ಬಿಕ್ಕಟ್ಟು ಮನುಷ್ಯರಿಗೆ ಎಂತೆಂತಹ ನೋವನ್ನು ತಂದು ಒಡ್ಡುತ್ತದೆಂಬುದಕ್ಕೆ ಕೆಲವು ಉದಾಹರಣೆಗಳು ಕೆಳಗಿವೆ.

-ಮಾಜಿ ಕೋಟ್ಯಾಧಿಪತಿಯೊಬ್ಬ ಬ್ಯಾಂಕಾಕಿನ ಬೀದಿಗಳಲ್ಲಿ ಸ್ಯಾಂಡ್‌ವಿಚ್‌ಗಳನ್ನು ಮಾರುತ್ತಿದ್ದಾನಂತೆ.

- ಅಂಗಡಿಗಳಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳು ಜೀವನ ನಿರ್ವಹಿಸಲಾಗದೆ ಸೂಳೆಗಾರಿಕೆಗೆ ಇಳಿಯುತ್ತಿದ್ದರಂತೆ. ದಕ್ಷಿಣ ಕೊರಿಯಾದಲ್ಲಿ ಪ್ರತಿದಿನ ಸುಮಾರು 25 ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರಂತೆ.

ಆರ್ಥಿಕ ತಜ್ಞರು ಮತ್ತು ವಿಶ್ಲೇಷಕರ ಪ್ರಕಾರ ಮಾನವ ದುರಂತ ಈಗಷ್ಟೇ ತೆರೆದುಕೊಳ್ಳುತ್ತಿದೆ. ಮುಂಬರುವ ದಿನಗಳಲ್ಲಿ ಲಕ್ಷ ಲಕ್ಷ ಜನ ಈ ಬಿಕ್ಕಟ್ಟು ತರುವ ದುರಂತಗಳಲ್ಲಿ ಮುಳುಗಿ ಹೋಗುತ್ತಾರೆ.

ಜಕಾರ್ತದಲ್ಲಿ ಸಾವಿರಕ್ಕೂ ಹೆಚ್ಚು ಜನ ಹಿಂಸೆಗಳಲ್ಲಿ ಸತ್ತಿದ್ದಾರೆ. ಎಲ್ಲಾಕಡೆ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿಗೆ ಬರುತ್ತಿದ್ದಾರೆ. ಇಂಡೋನೇಶಿಯಾ ಮಲೇಶಿಯಾ ಥಾಯ್ಲ್ಯಾಂಡ್ ದಕ್ಷಿಣ ಕೊರಿಯಾ ದೇಶಗಳು ಈ ಬಿಕ್ಕಟ್ಟಿನಿಂದ ಅತಿ ಹೆಚ್ಚು ನಲುಗಿದ ದೇಶಗಳು. ಕಳೆದ 12 ತಿಂಗಳುಗಳಲ್ಲಿ ಪಾಶ್ಚಿಮಾತ್ಯ ಬಂಡವಾಳ ಹೊರ ಹರಿದು ಹೋಗುತ್ತಲೇ ಇದೆ ಈ ಪ್ರದೇಶದಿಂದ. ಈ ಹೊರ ಸೆಳವು ಇಲ್ಲಿನ ದೇಶಗಳ ಆರ್ಥಿಕಗಳಿಗೆ ದೊಡ್ಡ ಹೊಡೆತ ನೀಡಿದೆ.

ಪ್ರತಿಕೂಲ ಪರಿಸ್ಥಿತಿಯಲ್ಲೂ ಲಾಭ ಮಾಡಿದ ಸಾರ್ವಜನಿಕ ವಲಯದ ಬ್ಯಾಂಕುಗಳು

ಸರ್ಕಾರದ ಉದಾರೀಕರಣದ ನೀತಿಗಳು ತಂದೊಡ್ಡಿರುವ ಪ್ರತಿಕೂಲ ಪರಿಸ್ಥಿತಿಯಲ್ಲೂ ಸಾರ್ವಜನಿಕ ವಲಯದ ಬ್ಯಾಂಕುಗಳು ತಮ್ಮ ನಿವ್ವಳ ಲಾಭವನ್ನು ಹೆಚ್ಚಿಸಿಕೊಂಡಿವೆ. 1997-98 ರ ಹಣಕಾಸು ವರ್ಷದಲ್ಲಿ ಬ್ಯಾಂಕುಗಳ ಲಾಭ ಶೇ 59 ರಷ್ಟು ಹೆಚ್ಚಾಗಿರುವುದು ಕಡಿಮೆಯೇನಲ್ಲ. ಇಂದು ದೇಶದಲ್ಲಿ ಔದ್ಯಮಿಕ ಹಿಂಜರಿತ ಉಂಟಾಗಿದ್ದು, ಆರ್ಥಿಕವೇ ಕುಂಠಿತವಾಗಿ ರುವ ಸಮಯದಲ್ಲಿ ಈ ಬ್ಯಾಂಕುಗಳ ಒಟ್ಟುಲಾಭ 1996-97 ರಲ್ಲಿ 7641 ಕೋಟಿ ರೂಪಾಯಿಗಳಿದ್ದದ್ದು 1997-98 ರಲ್ಲಿ 8720 ಕೋಟಿ ರೂಪಾಯಿಗಳಿಗೇರಿದೆ. ಇದರಲ್ಲಿ ಕೆನರಾ ಬ್ಯಾಕ್ ಮತ್ತು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾದ ಲಾಭಗಳು ಸೇರಿಲ್ಲ. ಖಾಸಗಿ ಮತ್ತು ವಿದೇಶೀ ಬ್ಯಾಂಕುಗಳು ನೀಡುತ್ತಿರುವ ಸ್ಪರ್ಧೆಯ ಮಧ್ಯೆಯೂ ಈ ಸರ್ಕಾರಿ ಬ್ಯಾಂಕುಗಳು ಮಾಡಿರುವ ಸಾಧನೆ ಶ್ಲಾಘನೀಯ. ಸಾಮಾಜಿಕ ವಲಯಗಳಿಗೆ ಈ ಬ್ಯಾಂಕುಗಳು ಹಣಕಾಸು ನೆರವು ನೀಡುತ್ತವೆಂಬುದನ್ನು ನಾವು ಮನಸ್ಸಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ಮುಂಬರುವ ದಿನಗಳಲ್ಲಿ ಉದಾರೀಕರಣದ ನೀತಿಗಳು ಮುಂದುವರೆದಲ್ಲಿ ಈ ಬ್ಯಾಂಕುಗಳ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಹೇಳಲಾಗದು. ಖಾಸಗಿ ಬಂಡವಾಳಿಗರು ಈ ಬ್ಯಾಂಕುಗಳನ್ನು ನುಂಗಿ ಹಾಕಲು ಕಾದು ಕುಳಿತಿರುವುದರಿಂದ ಸರ್ಕಾರೀ ನೀತಿಗಳ ಪರಿಣಾಮ ಈ ಬ್ಯಾಂಕುಗಳ ಮೇಲೆ ಖಂಡಿತವಾಗಿಯೂ ಆಗಲಿದೆ.

ಹೆಚ್ಚು ಅಧಿಕಾರ ಕೇಳುತ್ತಿರುವ ಮಾರಾಟ ಕಮಿಷನ್

ಸಾರ್ವಜನಿಕ ವಲಯದ ಘಟಕಗಳನ್ನು ಮಾರಾಟಮಾಡಲು ಕಮಿಷನ್ ಒಂದನ್ನು ರಚಿಸಲಾಗಿದೆ. ಇದು ಬಹಳ ಹಿಂದೆಯೇ ಆದದ್ದು. ಉದಾರೀಕರಣದ ನೀತಿಗಳ ಜಾರಿಗೆ ಬಂದ ನಂತರ ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ಮೂರುಕಾಸಿಗೆ ಈ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟದಲ್ಲಿ ಅಪರಾ-ತಪರಾಗಳು ನಡೆದು ನಂತರದಲ್ಲಿ ಈ ಕಮಿಷನ್ನನ್ನು ನೇಮಿಸಲಾಯಿತು.

ಈ ಕಮಿಷನ್ನು ಈಗ ತನಗೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ಕೇಳಿದೆ.

ಸಾರ್ವಜನಿಕ ವಲಯದ ಘಟಕಗಳ ಸರ್ಕಾರಿ ಪಾಲನ್ನು ಮಾರುವ ತೀರ್ಮಾನ ವನ್ನು ಸಂಸತ್ತಿನ ಸ್ಥಾಯಿ ಸಮಿತಿ ತೀವ್ರವಾಗಿ ಟೀಕಿಸಿದೆ. ಯಾಕೆಂದರೆ ಸರಕಾರ ಘಟಕಗಳ ಪಾಲನ್ನು ಮಾರಲು ಹವಣಿಸುತ್ತಿದೆ. ಸಮಿತಿ ಸರ್ಕಾರ ತನ್ನ ಪಾಲನ್ನು ಶೇ 49ಕ್ಕಿಂತ ಹೆಚ್ಚಿಗೆ ಮಾರಾಟ ಮಾಡಕೂಡದು ಎಂದು ಹೇಳಿದೆ.

ಸರ್ಕಾರ ಲಾಭದಾಯಕ ಘಟಕಗಳ ಶೇರುಗಳಲ್ಲಿ ಶೇ 74 ರಷ್ಟನ್ನು ಮಾರಾಟ ಮಾಡಲು ಹವಣಿಸುತ್ತಿದ್ದು, ಸ್ಥಾಯಿ ಸಮಿತಿ ಇದು ದೇಶದ ಹಿತಾಸಕ್ತಿಗಳನ್ನು ಕಡೆಗಣಿಸುವ ನಿರ್ಧಾರ ಎಂದಿದೆ.

ಸರ್ಕಾರ ಈ ಶೇರು ಮಾರಾಟದ ವಿಷಯದಲ್ಲಿ ನಡೆದುಕೊಳ್ಳುತ್ತಿರುವ ರೀತಿಯನ್ನು ಅದು ಟೀಕಿಸಿದೆ.

ಹೀಗೆ ಮಾಡುವ ಶೇರು ಮಾರಾಟದಿಂದ ಬರುವ ಹಣವನ್ನು ಹೇಗೆ ವಿನಿಯೋಗಿಸುವುದು ಎಂಬ ಬಗ್ಗೆ ಸರ್ಕಾರ ಸ್ಪಷ್ಟ ನಿಲುವು ತೆಗೆದು ಕೊಳ್ಳಬೇಕೆಂದು ಅದು ಹೇಳಿದೆ. ಈ ಹಣದಿಂದ ಹಣಕಾಸು ಕೊರತೆ ನೀಗಿಸಲಾಗುವುದೆಂದು ಸರ್ಕಾರ ಹೇಳುತ್ತಿದೆ. ಆದರೆ ಈ ಹಣವನ್ನು ದೇಶದ ಔದ್ಯಮಿಕ ಬೆಳವಣಿಗೆಗೆ ಬಳಸಬೇಕೆಂದು ಸಮಿತಿ ಹೇಳಿದೆ. ಅದಕ್ಕಾಗಿ ಶೇರು ಮಾರಾಟ ನಿಧಿಯೊಂದನ್ನು ಸ್ಥಾಪಿಸಿ ಈ ಹಣವನ್ನು ಆ ನಿಧಿಗೆ ಸೇರಿಸಬೇಕೆಂದು ಅದು ಹೇಳಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದ ವಿಷಯದಲ್ಲಿ ಸರ್ಕಾರದ ತರಾತುರಿ ಮತ್ತು ವಿಷಯಗಳನ್ನು ಬಚ್ಚಿಡುವ ಪ್ರಯತ್ನ ಇವೆರಡೂ ಇಲ್ಲ; ಖಾಸಗಿ ಬಂಡವಾಳಿಗರ ಹಿತಾಸಕ್ತಿಗಳಿಗಾಗಿ ಕೆಲಸ ಮಾಡುತ್ತಿವೆ ಎನ್ನುವುದನ್ನು ಎತ್ತಿ ತೋರಿಸುತ್ತದೆ ಅಲ್ಲವೇ?

ರಫ್ತಿಗೆ ಬಡಿದ ಗರ

ಉದಾರೀಕರಣದ ಯಶಸ್ಸಿಗೆ ರಫ್ತು ಬಹಳ ಮುಖ್ಯವಾದದ್ದು. 1991 ರಿಂದ ಬಂದ ಉದಾರೀಕರಣದ ಕ್ರಮಗಳೆಲ್ಲ ರಫ್ತು ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡೇ ಬಂದಂತಹವು: ಆದರೆ ರಫ್ತು ಬೆಳವಣಿಗೆ ಮುಗ್ಗರಿಸುತ್ತಲೇ ಇವೆ.ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ನಮ್ಮ ಕರ್ನಾಟಕದವರಾದ ಕೇಂದ್ರ ವಾಣಿಜ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಹೊಸ ಆಮದು ರಫ್ತು ನೀತಿ ಘೋಷಿಸಿ ಈ ನೀತಿ ದೇಶದ ರಫ್ತನ್ನು ಬೆಳೆಸುತ್ತದೆ ಎಂದು ಪ್ರಚಾರ ಗಿಟ್ಟಿಸಿಕೊಂಡರು.

ಈಗ ರಫ್ತು ನಿಜದಲ್ಲಿ ಕುಸಿಯುತ್ತಿ ರುವುದನ್ನು ಕಂಡು ಈ ಮಹಾಶಯರು ಗೋಳಾಡುತ್ತಿದ್ದಾರೆ. ಹಣಕಾಸು ಮಂತ್ರಿಗಳನ್ನು ಭೇಟಿ ಮಾಡಿ ಈ ವಿಷಯವನ್ನು ಚರ್ಚಿಸುತ್ತೇನೆಂದು ಹೇಳುತ್ತಿದ್ದಾರೆ.

ಸರ್ಕಾರೀ ಗುಪ್ತಚಾರ ವರದಿಗಳ ಪ್ರಕಾರ ರಫ್ತಿನ ಬೆಳವಣಿಗೆ ನಕಾರಾತ್ಮಕವಾಗಿರುತ್ತದಂತೆ. ಅಂದರೆ ಹಿಂದೆ ಇದ್ದದ್ದಕ್ಕಿಂತ ಶೇ 12-15 ರಷ್ಟು ಕಡಿಮೆ ಆಗಲಿದೆಯಂತೆ. ಇಂತಹ ಬೆಳವಣಿಗೆಗೆ ಬಹಳ ಅರ್ಥಗಳಿರುತ್ತವೆ. ರಫ್ತನ್ನು ಹೆಚ್ಚಿಸುವ ಮೂಲಕ ದೇಶದ ಔದ್ಯಮಿಕ ಬೆಳವಣಿಗೆ ಸಾಧಿತವಾಗುತ್ತದೆ ಎನ್ನಲಾಗಿತ್ತು. ಆದರೆ ದೇಶದ ಔದ್ಯಮಿಕ ಕ್ಷೇತ್ರದಲ್ಲಿ ಯಾವುದೇ ತರಹದ ಸಕಾರಾತ್ಮಕ ಬೆಳವಣಿಗೆ ಆಗುತ್ತಿಲ್ಲ ಎಂಬುದಕ್ಕೂ ಇದು ಸೂಚಿಯಾಗಿದೆ.

ಹಣಕಾಸು ಮಂತ್ರಾಲಯು ರಫ್ತು ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ. ಎಂಬುದು ರಫ್ತುದಾರರ ನಿಲುವು ಮುಂಬಯಿ ಮತ್ತು ದೇಹಲಿ ಪ್ರದೇಶಗಳಲ್ಲಿ ರಫ್ತು ಅತಿ ಹೆಚ್ಚು ದೊಡ್ಡ ಹೊಡೆತ ಅನುಭವಿಸಿದೆ. ಜೂನ್. ತಿಂಗಳ ನಂತರದಲ್ಲಿ ರಫ್ತು ಪ್ರಮಾಣ ಇನ್ನೂ ಕುಸಿದರೆ ಆಶ್ಚರ್ಯವಿಲ್ಲವೆಂಬುದು ತಜ್ಞರ ಅಭಿಪ್ರಾಯವಂತೆ.

ಉದಾರೀಕರಿಸಿದ ಆರ್ಥಿಕ ಎಷ್ಟು ಸೂಕ್ಷ್ಮ ಮತ್ತು ಬಲಹೀನ ಎನ್ನುವದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ. ಉದಾರೀಕರಣದಿಂದ ಆರ್ಥಿಕ ಸುಭದ್ರವಾಗುತ್ತದೆ. ಬೆಳವಣಿಗೆ ಉತ್ತಮವಾಗಿ ಜನರಿಗೆ ಸುಖಸಮೃದ್ಧಿ ತರುತ್ತದೆ ಎಂದು ಹೇಳಿದವರು ಈಗ ದಿನ ನಿತ್ಯ ಆರ್ಥಿಕ ಬಿಕ್ಕಟ್ಟುಗಳಿಂದ ಬಿಕ್ಕಟ್ಟುಗಳಿಗೆ ಜಾರುತ್ತಿರುವುದನ್ನು ಹೇಗೆ ವಿವರಿಸುತ್ತಾರೊ ತಿಳಿಯದು.

ಗುರಿತಲುಪದ ಆಹಾರ ಧಾನ್ಯ ಉತ್ಪಾದನೆ

ಕಳೆದ ಹತ್ತು ವಷಗಳಲ್ಲಿ ಉತ್ತಮ ಮಳೆ ಆಗುತ್ತಲಿದೆ. ಆದರೆ ಕೃಷಿ ಕ್ಷೇತ್ರದಲ್ಲಿನ ಬೆಳವಣಿಗೆ ಅಂತಹ ಆಶಾದಾಯಕ ವಾಗೇನೂ ಇಲ್ಲ. ಬೆಳೆ ಪದ್ಧತಿಗಳಲ್ಲಿ ತೀವ್ರ ಏರು ಪೇರಾಗಿದೆ. ಭೂಮಿಯ ಸಾರದ ಮಟ್ಟ ತೀವ್ರವಾಗಿ ಕುಸಿದಿದೆ.

ಈ ಸಾರಿ ಅಂದರೆ 1997-98 ರ ಆಹಾರ ಧಾನ್ಯಗಳ ಉತ್ಪಾದನೆಯೂ ಗುರಿಗಿಂತ ಕಡಿಮೆ ಆಗಿದೆ ಎಂದು ಈಗ ಗೊತ್ತಾಗುತ್ತಿದೆ. ಸುಮಾರು 50 ಲಕ್ಷಟನ್ನುಗಳಷ್ಟು ಕಡಿಮೆ ಉತ್ಪಾದನೆ ಆಗಿದೆಯಂತೆ.

ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ 199.32 ದಶಲಕ್ಷ ಟನ್ನುಗಳಷ್ಟಾಗಬೇಕೆಂದು ಗುರಿಯಿಟ್ಟುಕೊಳ್ಳಲಾಗಿತ್ತು. ಆಗಿರುವ ಉತ್ಪಾದನೆ 194.13 ದಶಲಕ್ಷ ಟನ್ನುಗಳಷ್ಟು. ದ್ವಿದಳ ಧಾನ್ಯಗಳು ಮತ್ತು ಎಣ್ಣೆಗಾಳುಗಳ ಉತ್ಪಾದನೆ ಶೇ 9.58 ಮತ್ತು ಶೇ.5.09 ರಷ್ಟು ಕಡಿಮೆಯಾಗಿದೆಯಂತೆ.

ಕೃಷಿ ವಲಯು ತೀವ್ರ ಏರು ಪೇರನ್ನು ಕಾಣುತ್ತಿದೆ ಮತ್ತು ಕೃಷಿಯನ್ನು ಅವಲಂಬಿಸಿಕೊಂಡಿರುವಂತಹ ಜನ ನೋವನ್ನು ಅನುಭವಿಸುತ್ತಿದ್ದಾರೆ ಎಂಬುದು ಕರ್ನಾಟಕ, ಆಂದ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ರೈತರ ಆತ್ಮಹತ್ಯೆಗಳಿಂದ ಗೊತ್ತಾಗುತ್ತದೆ.

ಉದಾರೀಕರಣ ಕೃಷಿ ಕ್ಷೇತ್ರದಲ್ಲಿ ಎಂತಹ ಬದಲಾವಣೆಗಳನ್ನು ತಂದಿದೆ ಎಂಬುದು ಇದರಿಂದ ಬಹಳ ಸ್ಪಷ್ಟವಾಗಿ ಗೊತ್ತಾಗಿ ಬಿಡುತ್ತದೆ. ಬರೀ ಅಭಿವೃದ್ಧಿ ಹೊಂದಿದ ದೇಶಗಳ ಅವಶ್ಯಕತೆಗಳನ್ನು ಪೂರೈಸುವ ಸಾಧನವಾಗಿ ನಮ್ಮ ಕೃಷಿ ವಲಯು ಮಾರ್ಪಡುತ್ತಿದೆ ಅಷ್ಟೇ.

ಕರ್ನಾಟಕದಲ್ಲಿ ಕಳೆದವಾರ

ಜುಲೈ 10

- ಸುಪಾರಿ ಕೊಲೆಗಳ ತನಿಖೆಯ ಸಂದರ್ಭದಲ್ಲಿ ಕಲ್ಬುರ್ಗಿಗೆ ಹಿರಿಯ ಪೋಲೀಸ್ ಅಧಿಕಾರಿಗಳ ತುರ್ತು ಭೇಟಿ. ಮತ್ತೆ ಮೂವರ ಬಂಧನ.
- ಕರ್ನಾಟಕದಲ್ಲಿ ಅಂಚೆ-ತಂತಿ ನೌಕರರ ಮುಷ್ಕರದಿಂದ ಅಂಚೆ ಸೇವೆ ಸಂಪೂರ್ಣ ಅಸ್ತವ್ಯಸ್ತ.

ಜುಲೈ 11

- ಆಲಮಟ್ಟಿ ಜಲಾಶಯದ ನೀರಿನ ಮಟ್ಟ ಏರಿಕೆ. 26 ಗ್ರಾಮ ಜಲಾವೃತ.
- ಕರ್ನಾಟಕ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜ್ (ಕೆ.ಆರ್.ಇ.ಸಿ.)ಗೆ 'ರಾಷ್ಟ್ರೀಯ ಮಾನ್ಯತೆ ಮಂಡಲಿ'ಯ ಮಾನ್ಯತೆ.

ಜುಲೈ 12

- ಬೆಂಗಳೂರಿನಲ್ಲಿ ಹಬ್ಬದ ಧ್ವಜವಿವಾದದಿಂದ ಗಲಭೆ, ಲಾಠೀ ಪ್ರಹಾರ, ಅಶ್ರುವಾಯು, 20 ಜನರಿಗೆ ಗಾಯ, ನಿಷೇಧಾಜ್ಞೆ.

ಜುಲೈ 13

- ಬೆಂಗಳೂರಿನ ಗಲಭೆಗಳಲ್ಲಿ ಗಾಯಗೊಂಡ ವ್ಯಕ್ತಿಯ ಸಾವು. ಬಿಗುವಿನ ವಾತಾವರಣ.
- ಸಚಿವರು, ಶಾಸಕರು ತಮ್ಮ ಆಸ್ತಿ-ಪಾಸ್ತಿ ಬಗ್ಗೆ ಪ್ರತಿವರ್ಷ ಜೂನ್ 30 ರೊಳಗೆ ಕಡ್ಡಾಯ ಘೋಷಣೆ ಮಾಡಬೇಕು ಎಂದು ಹೈಕೋರ್ಟ್ ಆದೇಶ.
- ಖ್ಯಾತ ಸಣ್ಣ ಕತೆಗಾರ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಡಾ. ಬೆಸಗರಹಳ್ಳಿ ರಾಮಣ್ಣ ನಿಧನ.

ಜುಲೈ 14

- ಮೂವರು ಕುಖ್ಯಾತ ಸುಪಾರಿ ಕೊಲೆಗಡುಕರು ಕರ್ನಾಟಕ ಪೋಲೀಸರ ವಶಕ್ಕೆ - ಕಲ್ಬುರ್ಗಿ ಜೈಲಿನಲ್ಲಿ.

ಜುಲೈ 15

- ಮತ್ತೆ ರಾಜ್ಯದಲ್ಲಿ ವಿದ್ಯುತ್ ದರಗಳ ಭಾರೀ ಏರಿಕೆ- 11% ಹೆಚ್ಚಳ ಎಂದು ಕೆಇಬಿ.
- ಅಳಂದ ಶಾಸಕ ಸುಭಾಶ್ ಗುತ್ತೇದಾರ ಬಂಧನಕ್ಕೆ ರಾಜ್ಯ ಡಿಜಿಪಿ ಆದೇಶ.

ಜುಲೈ 16

- ದೇವನಹಳ್ಳಿ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣದ 1200 ಕೋಟಿ ರೂ. ಗುತ್ತಿಗೆ ಪ್ರಸ್ತಾವವನ್ನು ಕೈ ಬಿಟ್ಟಿರುವುದಾಗಿ ಟಾಟಾ ಕನ್ಸೋರ್ಷಿಯಂ ಪ್ರಕಟಣೆ.
- ಹೇಮಾವತಿ ನೀರಿಗಾಗಿ ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ವಾಹನ ಸಂಚಾರ ಸ್ಥಗಿತ.

ರಾಜ್ಯಾದ್ಯಂತ ಸಾಮೂಹಿಕ ಸಂಘಟನೆಗಳ ಪ್ರತಿಭಟನಾ ದಿನಾಚರಣೆ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ಜುಲೈ 14 ರಂದು ರಾಜ್ಯದಲ್ಲೂ ಹಲವೆಡೆ ಪ್ರತಿಭಟನಾ ದಿನಾಚರಣೆ ನಡೆಸಲಾಯಿತು. ಕಾರ್ಮಿಕರ, ನೌಕರರ, ರೈತರ, ಕೃಷಿಕೂಲಿಕಾರರ, ವಿದ್ಯಾರ್ಥಿ-ಯುವಜನರ, ಮಹಿಳೆಯರ ಸಂಘಟನೆಗಳು ಸೇರಿರುವ ರಾಷ್ಟ್ರೀಯ ವೇದಿಕೆ ಜನ-ವಿರೋಧಿ ಬಜೆಟ್ ಹಾಗೂ ಆರ್ಥಿಕ ನೀತಿಗಳ ವಿರುದ್ಧ ಆರಂಭಿಸಿರುವ ಆಂದೋಲನದ ಭಾಗವಾಗಿ ಈ ಪ್ರತಿಭಟನೆ ನಡೆದಿದೆ.

ಬೆಂಗಳೂರಿನಲ್ಲಿ ರಾಷ್ಟ್ರೀಯ ವೇದಿಕೆಯ ಸ್ಥಳೀಯ ಶಾಖೆಯ ನೇತೃತ್ವದಲ್ಲಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಒಂದು ರ‍್ಯಾಲಿ ನಡೆಯಿತು. ಸಿಐಟಿಯು ಮತ್ತಿತರ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಮುಷ್ಕರ ನಿರತ ಅಂಚೆ-ತಂತಿ ನೌಕರರ ಮುಖಂಡರು, ಬ್ಯಾಂಕ್, ವಿಮೆ ಮತ್ತಿತರ ನೌಕರರ ಸಂಘಟನೆಗಳ ಮುಖಂಡರು, ಎಸ್.ಎಫ್.ಐ., ಡಿವೈಎಫ್ಐ, ಜನವಾದಿ ಮಹಿಳಾ ಸಂಘಟನೆಗಳ ಮುಖಂಡರು ಮಾತನಾಡಿ ಬಿಜೆಪಿಯ ಸ್ವದೇಶಿ ಸೋಗಿನ ಆರ್ಥಿಕ ನೀತಿಗಳ ನಿಜರೂಪವನ್ನು ಬಯಲಿಗೆಳೆದರು. ಸಾಮ್ರಾಜ್ಯಶಾಹಿಗಳ ಒತ್ತಡವನ್ನು ಎದುರಿಸಲಾರದೆ ಸರಕಾರ ಅವರನ್ನು ತೃಪ್ತಪಡಿಸಲು ಉದಾರೀಕರಣ, ಜಾಗತೀಕರಣ ಜಾರಿಗೆ ತರಲು ಹೊರಟಿದೆ ಎಂದು ಸಿಐಟಿಯು ರಾಜ್ಯ ಅಧ್ಯಕ್ಷ ಸೂರ್ಯನಾರಾಯಣ ರಾವ್ ಟೀಕಿಸಿದರೆ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಒಂದು ರಾಷ್ಟ್ರವಿರೋಧಿ ನೀತಿ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ಹೇಳಿದರು.

ಮೈಸೂರು: ಸಾಮೂಹಿಕ ಸಂಘಟನೆಗಳ ವೇದಿಕೆ ಮೈಸೂರು ಘಟಕದ ವತಿಯಿಂದ ಮೈಸೂರು ನಗರದ ಕೆ.ಆರ್ ಸರ್ಕಲ್‌ನಲ್ಲಿ ಪ್ರತಿಭಟನಾ ಸಭೆ ನಡೆಯಲಾಯಿತು. ಕೇಂದ್ರ ಸರಕಾರದ ಜನ ವಿರೋಧಿ ಬಜೆಟ್ ಖಾಸಗೀಕರಣನೀತಿ, ಸಾರ್ವಜನಿಕ ಕ್ಷೇತ್ರದ ಬಂಡವಾಳ ಹಿಂತೆಗೆತ, ಅಗತ್ಯವಸ್ತುಗಳ ಬೆಲೆ ಏರಿಕೆ ವಿರುದ್ಧ ರಾಷ್ಟ್ರಾದ್ಯಂತ ನಡೆದ ಪ್ರತಿಭಟನೆಯ ಅಂಗವಾಗಿ ನಡೆದ ಸಭೆಯಲ್ಲಿ ಸಿಐಟಿಯು, ಕೈಗಾರಿಕಾ ಕಾರ್ಮಿಕರ ಒಕ್ಕೂಟ, ವಿಮಾ ನೌಕರರ ಸಂಘ, ಅಂಚೆ ನೌಕರರ ಸಂಘಗಳ ಜಂಟಿ ಕ್ರಿಯಾ ಸಮಿತಿ, ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಕಾಂ ಜಿ.ಜಯರಾಂ ವಹಿಸಿದ್ದರು. ಸಿಐಟಿಯು ಕಾರ್ಯದರ್ಶಿ ಮೋಹನ್ ಕುಮಾರ್, ವಿಕ್ರಾಂತ್ ಕಾರ್ಮಿಕರ ಸಂಘದ ಕಾಂ|| ಈರೇಗೌಡ, ಅಂಚೆ ನೌಕರರ ಪ್ರತಿನಿಧಿ ಕಾಂ|| ಪ್ರಭಾಶಂಕರರಾವ್, ಜಿ. ಕೆ.ಲಕ್ಷ್ಮಿನಾರಾಯಣ, ವಿಮಾ ನೌಕರರ ಸಂಘದ ಕಾಂ|| ನಾಗೇಶ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ.ಎಂ.ಎನ್. ಉಗ್ರಪ್ಪನವರು ಸಭೆಯಲ್ಲಿ ಭಾಷಣ ಮಾಡಿ ಕೇಂದ್ರ ಸರಕಾರದ ನೀತಿಗಳನ್ನು ಖಂಡಿಸಿದರು. ಸಿಐಟಿಯು ಜಂಟಿ ಕಾರ್ಯದರ್ಶಿ ಕಾಂ|| ಹೆಚ್.ಎಸ್. ಜಗದೀಶ್ ರವರು ವಂದನಾರ್ಪಣೆಮಾಡಿದರು.



ಅಂಗನವಾಡಿ ನೌಕರರ ಉ.ಕ. ಜಿಲ್ಲಾ ಸಮ್ಮೇಳನ

ಬೇಡಿಕೆಗಳ ಈಡೇರಿಕೆಗಾಗಿ ಸಂಘಟಿತ ಹೋರಾಟಕ್ಕೆ ಕರೆ

ಕಾರವಾರ (ಉ.ಕನ್ನಡ): ಅಂಗನವಾಡಿ ನೌಕರರು ರಾಷ್ಟ್ರ ಮಟ್ಟದ ಸಂಘಟನೆಯಡಿಯಲ್ಲಿ ಸಂಘಟಿತರಾಗಿ ರಾಷ್ಟ್ರವ್ಯಾಪ್ತಿ ಹೋರಾಟ ನಡೆಸಬೇಕು. ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಈ ನಿಟ್ಟಿನಲ್ಲಿ ಉಗ್ರ ಹೋರಾಟ ರೂಪಿಸಲು ಮುಂದಾಗಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಕರೆ ನೀಡಿದರು.

ಅವರು ಕಾರವಾರದಲ್ಲಿ ಗುರುಭವನದಲ್ಲಿ ಪ್ರಾರಂಭವಾದ 2 ದಿನದ ಅಂಗನವಾಡಿ ನೌಕರರ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತ ಅಂಗನವಾಡಿ ನೌಕರರಿಗೆ ಸಮರ್ಪಕವಾದ ಯಾವುದೇ ಕನಿಷ್ಟ ಸೌಲಭ್ಯಗಳು ಹಾಗೂ ಕನಿಷ್ಟ ಕೂಲಿ ಜಾರಿಯಿಲ್ಲ. ಮಹಾರಾಷ್ಟ್ರ, ತಮಿಳುನಾಡು, ಪಾಂಡಿಚೇರಿ ಮುಂತಾದ ರಾಜ್ಯಗಳಲ್ಲಿ ಅಂಗನವಾಡಿ ನೌಕರರ ಬಹುತೇಕ ಸಮಸ್ಯೆಗಳನ್ನು ಈಡೇರಿಸಲಾಗಿದೆ. ನಮ್ಮರಾಜ್ಯದಲ್ಲಿ ಅಂಗನವಾಡಿ ನೌಕರರ ಐಕ್ಯತೆಯ ಕೊರತೆ ಇದೆ. ಸಂಘಟಿತ ಹೋರಾಟದಿಂದ ಮಾತ್ರ ಬೇಡಿಕೆ ಈಡೇರಿಸಿಕೊಳ್ಳಲು ಸಾಧ್ಯ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಕಾರವಾರ ಕ್ಷೇತ್ರದ ಶಾಸಕ ವಸಂತ ಅಸ್ನೋಟಿಕರ ಅವರು ಮಾತನಾಡಿ ತಾಯಿಯ ನಂತರದ ಸ್ಥಾನದಲ್ಲಿ ನಿಲ್ಲುವವರು ಅಂಗನವಾಡಿ ಕಾರ್ಯಕರ್ತೆಯರು, ಆದರೆ ಇವರಿಗೆ ನೀಡುತ್ತಿರುವ ಸಂಭಾವನೆ ಸಾಲುತ್ತಿಲ್ಲ, ಅವರು ಅತಿ ಕಷ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ, ಅತಿ ಹಿಂದುಳಿದ ಪ್ರದೇಶದಲ್ಲೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ, ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ನೀಡುತ್ತಿದ್ದಾರೆ, ಅವರ ಸಮಸ್ಯೆಗಳಿಗೆ ಸರಕಾರದಿಂದ ಪರಿಹಾರ ದೊರಕಬೇಕಾಗಿದೆ ಎಂದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ಮಾತನಾಡಿ ನೌಕರರ ಮೇಲೆ ಹಲವಾರು ರೀತಿಯ ದಬ್ಬಾಳಿಕೆಗಳು ನಡೆಯುತ್ತಿದ್ದು, ಸಮಾಜದಲ್ಲಿ ಕೆಟ್ಟ ಮಟ್ಟದಲ್ಲಿ ನೋಡುವ ಪ್ರವೃತ್ತಿ ಇದೆ ಎಂದು ಖೇದ ವ್ಯಕ್ತಪಡಿಸಿದರು. ಅಂಗನವಾಡಿ ನೌಕರರು ತೀವ್ರ ಅಭದ್ರತೆಯಲ್ಲಿ ಬದುಕುತ್ತಿದ್ದಾರೆ. ಇವರಿಗೆ ಸೇವಾ ಭದ್ರತೆ ನೀಡಬೇಕೆಂದು ಕರ್ನಾಟಕ ಸರಕಾರ ರಾಜ್ಯ ಶ್ರೇಷ್ಟ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ ನೌಕರರ ಬದುಕು ಹಾಗೂ ಕಾರ್ಯವನ್ನು ನಿಕೃಷ್ಟವಾಗಿ ಕಾಣುತ್ತಿದೆ ಎಂದು ವರಲಕ್ಷ್ಮಿ ಆರೋಪಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಭಾಗೀರಥಿ ಭಟ್‌ರವರು ಮಾತನಾಡಿ ನೌಕರರು ತಮ್ಮ ಮೇಲೆ ದೌರ್ಜನ್ಯಗಳು ನಡೆದಾಗ ಪ್ರತಿಭಟಿಸುವ ಧೈರ್ಯ ತೋರಬೇಕೆಂದ ಅವರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಬೇಡಿಕೆಗಳಿಗೆ ಶೀಘ್ರವಾಗಿ ಸ್ಪಂದಿಸಲಾಗುವುದೆಂಬ ಭರವಸೆ ನೀಡಿದರು.

ಅತಿಥಿಗಳಾಗಿದ್ದ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹ ನಿರ್ದೇಶಕರು ಶಿವಮೂರ್ತಿ, ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್. ನಾಯ್ಕ ಮಾತನಾಡಿದರು. ಸಮ್ಮೇಳನಕ್ಕೆ ಶುಭ ಕೋರಿ ಬ್ಯಾಂಕ್ ನೌಕರರ ಸಂಘಟನೆಯ ವಿನೋದ ಮೈತ್ರಿ, ಅಂಚೆ ನೌಕರರ ಸಂಘದ ಎಸ್. ಎಲ್. ನಾಯ್ಕ, ನಿವೃತ್ತ ಸರಕಾರಿ ನೌಕರರ ಸಂಘದ ಎಂ. ವಾಯ್. ಪ್ರಭು ಮುಂತಾದವರು ಮಾತನಾಡಿದರು.

ಪ್ರಾರಂಭದಲ್ಲಿ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಶಾಂತಾರಾಮ್ ನಾಯಕ್ ಸ್ವಾಗತಿಸಿದರು. ರಜನಿ ಹಬ್ಬು ಕಾರ್ಯಕ್ರಮ ನಿರ್ವಹಿಸಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಶ್ಯಾಮಲಾ ಹೆಗಡೆ ವಂದಿಸಿದರು.

ನೂತನ ಸಮಿತಿ:

ಅಧ್ಯಕ್ಷರಾಗಿ ನಾಗರತ್ನ ಪಡಿಯಾರ ಹಾಗೂ ಕಾರ್ಯದರ್ಶಿಯಾಗಿ ರಜನಿ ಹಬ್ಬು ಅವರನ್ನು ಸಮ್ಮೇಳನ ಆಯ್ಕೆ ಮಾಡಿತು. ಉಪಾಧ್ಯಕ್ಷರಾಗಿ ಗಂಗಾ ಭಟ್, ರಾಜೇಶ್ವರಿ ತಾರಿಮನೆ, ಸಾವಿತ್ರಿ ಶೆಟ್ಟಿ, ಸಹ ಕಾರ್ಯದರ್ಶಿಗಳಾಗಿ ಲಲಿತಾ ಶೆಡಗೇರಿ, ಲಕ್ಷ್ಮೀ ಸಿದ್ದಿ, ಉಷಾ ಸಿರ್ಸಿಕರ, ಯಮುನಾ ಗಾಂವಕರ ಖಜಾಂಚಿಯಾಗಿ- ಸುಮಿತಾ ತನ್ನಡಗಿ ಜೊತೆಗೆ ಸಮಿತಿ ಸದಸ್ಯರಾಗಿ 12 ಜನ ಆಯ್ಕೆಗೊಂಡರು. ಗೌರವಾಧ್ಯಕ್ಷರಾಗಿ ಸುಭಾಷ್ ಕೂಪ್ಪಿಕರ ಆಯ್ಕೆಗೊಂಡರು.



ಶ್ರೀರಾಮರೆಡ್ಡಿಯವರ ರಿಟ್‌ಗೆ ಪುರಸ್ಕಾರ

ಜೆಮ್ ಗ್ರ್ಯಾನೈಟ್ ಕಂಪನಿಗೆ ಅನುಮತಿ ರದ್ದು

ಬಿಜಾಪುರ ಜಿಲ್ಲಾ ಹುನಗುಂದ ತಾಲೂಕು ಬಾಳೆಕುಂದಿ ಗ್ರಾಮದಲ್ಲಿ 266 ಎಕರೆ ಪ್ರದೇಶದಲ್ಲಿ ಕಲ್ಲುಗಣಿ ನಡೆಸಲು ಜೆಮ್ ಗ್ರ್ಯಾನೈಟ್ ಕಂಪನಿಗೆ ಸರಕಾರವು ನೀಡಿದ್ದ ಆಜ್ಞೆಯನ್ನು ರಾಜ್ಯ ಹೈಕೋರ್ಟ್ ಜುಲೈ 10ರಂದು ಅನೂರ್ಜಿತಗೊಳಿಸಿತು.

ಸರ್ಕಾರದ ಆಜ್ಞೆಯ ಔಚಿತ್ಯವನ್ನು ಪ್ರಶ್ನಿಸಿ 97ರ ಮಾರ್ಚ್ 27ರಂದು ಬಾಗೇಪಲ್ಲಿಯ ಸಿಪಿಐ(ಎಂ)ನ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿಯವರು ಸಲ್ಲಿಸಿದ ರಿಟ್ ಅರ್ಜಿಯನ್ನು ಪುರಸ್ಕರಿಸಿ ಮುಖ್ಯ ನ್ಯಾಯಾಧೀಶ ಆರ್.ಪಿ.ಸೇಠಿ ಮತ್ತು ನ್ಯಾಯಾಧೀಶ ವಿ.ಗೋಪಾಲಗೌಡ ಈ ತೀರ್ಪು ನೀಡಿದರು.

ಈ ಭೂಮಿಯಲ್ಲಿ ಕಲ್ಲುಗಣಿ ಚಟುವಟಿಕೆಯನ್ನು ಕೂಡಲೇ ನಿಲ್ಲಿಸಬೇಕೆಂದು ನ್ಯಾಯಾಲಯವು ನಿರ್ದೇಶಿಸಿದೆ. ಗಣಿ ಪ್ರದೇಶದ ಭೂಮಿಯು ತಮ್ಮ ಖಾಸಗಿ ಸ್ವತ್ತೆಂದು ವಿಜಯ ಮಹಂತೇಶ ವಿದ್ಯಾವರ್ಧಕ ಸಂಘವು ಜೆಮ್ ಗ್ರ್ಯಾನೈಟ್ ಕಂಪನಿಗೆ ಕಲ್ಲುಗಣಿ ನಡೆಸಲು ಅನುಮತಿ ನೀಡಿತ್ತೆಂದೂ, ಆದರೆ ಈ ಭೂಮಿಯು ಸರ್ಕಾರಕ್ಕೆ ಸೇರಿದೆಯೆಂದು ರಿಟ್ ಅರ್ಜಿಯನ್ನು ಜಿ.ವಿ. ಶ್ರೀರಾಮರೆಡ್ಡಿ ಸಲ್ಲಿಸಿದ್ದರು. ಕಂಪನಿಗೆ ನೀಡಿರುವ ಅನುಮತಿ ಕಾನೂನುಬಾಹಿರ ಎಂದು ಆರೋಪಿಸಿ ಅನುಮತಿ ಅನೂರ್ಜಿತಗೊಳಿಸುವಂತೆ ನ್ಯಾಯಾಲಯವನ್ನು ಕೋರಲಾಗಿತ್ತು.

ಇದೇ ತೀರ್ಪಿನಲ್ಲಿ ರಾಜ್ಯದಲ್ಲಿ ಜಲ್ಲಿ ಕಲ್ಲು ತಯಾರಿಸುವ ಸ್ಟೋನ್ ಕ್ರಷರ್ಸ್, ಉದ್ದಿಮೆಗಳಿಗೆ ಪರವಾನಿಗೆ ಕೋರುವ ಸಂಬಂಧದಲ್ಲಿ ಶ್ರೀಘ್ರವೇ ನೀತಿ ನಿರೂಪಣೆ ಮಾಡಬೇಕೆಂದು ಹೈಕೋರ್ಟ್ ಸರ್ಕಾರಕ್ಕೆ ಆದೇಶಿಸಿತು. ನಿಯಮ ರಚಿಸುವವರೆಗೆ ಹೊಸ ಉದ್ಯಮಕ್ಕೆ ಪರವಾನಿಗೆ ಮತ್ತು ಆಕ್ಷೇಪಣಾ ರಹಿತ ಪತ್ರ ನೀಡಬಾರದೆಂದೂ ಹೈಕೋರ್ಟ್ ಸೂಚಿಸಿತು.

ಮುಖ್ಯ ನ್ಯಾಯಮೂರ್ತಿ ಆರ್.ಪಿ. ಸೇಠಿ ಹಾಗೂ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಕಲ್ಲು ಉದ್ದಿಮೆ ನಿರ್ವಹಣೆಗೆ ಕುರಿತಂತೆ ಮಾರ್ಗದರ್ಶನ ನೀಡಿತು-

- ಸುರಕ್ಷಿತ ಸ್ಥಳಗಳು, ರಾಷ್ಟ್ರೀಯ ಹೆದ್ದಾರಿ, ಜನವಸತಿ ಸ್ಥಳ, ದೇವಸ್ಥಾನ, ಶಾಲೆ ಮತ್ತು ನದಿ ಇವುಗಳಿಂದ 2 ಕಿ.ಮಿ. ದೂರದಲ್ಲಿರಬೇಕು; ರಾಜ್ಯ ಹೆದ್ದಾರಿಯಿಂದ ಒಂದೂವರೆ ಕಿ.ಮಿ., ಸಂಪರ್ಕ ರಸ್ತೆಯಿಂದ 500 ಮೀಟರ್, ಪುರಸಭೆಗಳ ಸರಹದ್ದಿನಿಂದ 8 ಕಿ.ಮಿ., ಜಿಲ್ಲಾ ಪ್ರಧಾನ ಸ್ಥಳಗಳಿಂದ 4 ಕಿ.ಮಿ., ಗ್ರಾಮ ಮತ್ತು ಸಾಗುವಳಿ ಭೂಮಿಯಿಂದ 1 ಕಿ.ಮಿ. ದೂರದಲ್ಲಿರಬೇಕು.
- ಉದ್ದಿಮೆ ಸ್ಥಾಪನೆಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯು ಅನುಮೋದಿಸುವ 'ಸುರಕ್ಷಿತ' ಸ್ಥಳವನ್ನು 6 ತಿಂಗಳಲ್ಲಿ ಗುರುತಿಸಬೇಕು. ಆ ಸ್ಥಳಗಳಲ್ಲೆ ಉದ್ದಿಮ ಸ್ಥಾಪನೆಯಾಗಬೇಕು. ಹಾಗೂ ಈಗಿರುವ ಜಲ್ಲಿಕಲ್ಲು ತಯಾರಕ ಯಂತ್ರಗಳನ್ನು ಒಂದು ವರ್ಷದಲ್ಲಿ ಅಲ್ಲಿಗೆ ಸ್ಥಳಾಂತರಿಸಬೇಕು. 50 ಕಿ.ಮಿ. ಸುತ್ತಳತೆಯಲ್ಲಿ ಎರಡು ಘಟಕಗಳಿರಬಾರದೆಂದು ನ್ಯಾಯಾಲಯದ ತೀರ್ಪು ಆದೇಶಿಸಿದೆ.

ಸರ್ಕಾರವು ಪರವಾನಗಿ ಶುಲ್ಕ ನಿಗದಿ ಮಾಡಬೇಕು. ಪರವಾನಗಿಗಳನ್ನು ಒಂದು ವರ್ಷದ ಅವಧಿಗೆ ಮಾತ್ರ ನೀಡಿ, ನಂತರ ವರ್ಷ ವರ್ಷ ನಿಗದಿತ ಶುಲ್ಕ ವಸೂಲಿ ಮಾಡಿಕೊಂಡು ನವೀಕರಣ ಮಾಡಬೇಕು. ಈಗಿರುವ ಘಟಕಗಳು ಸೂಚಿತ ನಿಯಮಗಳಿಗೆ ಒಳಪಡದಿದ್ದಲ್ಲಿ ಅವು ಒಂದು ವರ್ಷದ ನಂತರ ಕೆಲಸ ಮಾಡಲು ಯಾವುದೇ ಕಾರಣಕ್ಕೂ ಅನುಮತಿ ಕೊಡಬಾರದು. ಸರ್ಕಾರ ಈ ಬಗ್ಗೆ ಡಿಸೆಂಬರ್ 31ರೊಳಗೆ ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ವರದಿ ಸಲ್ಲಿಸುವಂತೆ ಆಜ್ಞೆ ಇತ್ತಿದೆ.

ಶುಲ್ಕ ರೂಪದಲ್ಲಿ ವಸೂಲಿ ಮಾಡುವ ಹಣದಲ್ಲಿ ನಿಧಿಸ್ಥಾಪಿಸಿ ಅದನ್ನು ಕೆಲಸಗಾರರ ಮತ್ತು ಅವರ ಮಕ್ಕಳ ಹಾಗೂ ಅವಲಂಬಿತರ ಆರೋಗ್ಯ ರಕ್ಷಣೆ, ಶಿಕ್ಷಣ, ಸುರಕ್ಷತೆಗೆ ಬಳಸಬೇಕೆಂದು ಆದೇಶಿಸಿದೆ.

ಶಾಸಕರಾದ ಶ್ರೀರಾಮರೆಡ್ಡಿಯವರ ಜೊತೆ ದ.ಕನ್ನಡ ಜಿಲ್ಲೆ ಕಾರ್ಕಳ ತಾಲೂಕು ಮಂತ್ರಾಡಿ ಗ್ರಾಮದ ಓಬಯ್ಯ ಪೂಜಾರಿ ತಮ್ಮೂರು ಬಳಿಯ ಕಲ್ಲು ಪುಡಿಯಿಂದ ಶಬ್ದ ಮಾಲಿನ್ಯ ಹಾಗೂ ವಾಯು ಮಾಲಿನ್ಯ ಉಂಟಾಗುವುದೆಂದು 'ರಿಟ್' ಅರ್ಜಿ ಸಲ್ಲಿಸಿದರು.

ಚರ್ಚುಗಳಲ್ಲಿ ಪವಿತ್ರ ವೈನ್‌ನ ಹೆಸರಲ್ಲಿ ಮದ್ಯದ 'ವಿತರಣೆ'ಯಾಗುವುದರಿಂದ ಚರ್ಚುಗಳನ್ನು ಪುಣ್ಯ ಸ್ಥಳಗಳ ಪಟ್ಟಿಯಿಂದ ತೆಗೆಯುವ ದಿಲ್ಲಿಯ ಬಿ.ಜೆ.ಪಿ. ಸರಕಾರದ ಪ್ರಯತ್ನ ಕಳೆದವಾರ ಇಡೀ ದೇಶವನ್ನು ಸೆಳೆಯಿತು. ಇದು ಕೇವಲ ೨.೬ ಅ ರಷ್ಟಿರುವ ಈ ಅಲ್ಪಸಂಖ್ಯಾತ ಕೋಮಿನ ಜನರನ್ನು ಬೆದರಿಸುವ ಕಾವಿಪಡೆಗಳ ಕೃತ್ಯಗಳ ಇತ್ತೀಚಿನ ಉದಾಹರಣೆಯಷ್ಟೆ. ಕಳೆದ ಕೆಲವು ವರ್ಷಗಳಲ್ಲಿ ಅದರಲ್ಲೂ ಕಳೆದ ಮೂರು ತಿಂಗಳಲ್ಲಿ ವಿಶೇಷವಾಗಿ ಬಿ.ಜೆ.ಪಿ. ಆಳ್ವಿಕೆಯ ರಾಜ್ಯಗಳಲ್ಲಿ ಇಂತಹ ಕಿರುಕುಳ ಭಯೋತ್ಪಾದಕ ಕೃತ್ಯಗಳ ಸಂಖ್ಯೆ ಹೆಚ್ಚಿದೆ ಎನ್ನುತ್ತಾರೆ ಪತ್ರಕರ್ತೆ ಐ.ಎನ್.ಎಸ್.ನ ಮಾನಿನಿ ಚಟರ್ಜಿ.

ಈಗ ಕಾವಿಪಡೆಗಳ ಕೆಂಗಣ್ಣು ಕ್ರಿಶ್ಚಿಯನ್ನರ ಮೇಲೆ

ಅಖಿಲ ಭಾರತ ಕ್ಯಾಥೋಲಿಕ್ ಯೂನಿಯನ್‌ನ ರಾಷ್ಟ್ರೀಯ ಕಾರ್ಯದರ್ಶಿ - ಜಾನ್ ದಯಾಲ್ ಪ್ರಕಾರ ಕ್ರಿಶ್ಚಿಯನ್ನರ ಮೇಲೆ ಮೂರು ಭಿನ್ನ ರಂಗಗಳಲ್ಲಿ ಧಾಳಿ ಆರಂಭವಾಗಿದೆ.

● ಮೊದಲನೆಯದಾಗಿ, ಧಾರ್ಮಿಕ ವ್ಯಕ್ತಿಗಳು ಅಂದರೆ ಫಾದರ್‌ಗಳು ಹಾಗೂ ನನ್‌ಗಳ ಮೇಲೆ ನೇರ ಹಿಂಸಾಚಾರ, 1996-97ರಲ್ಲಿ ಬಿಹಾರದಲ್ಲಿ ಫಾದರ್ ಕ್ರಿಸ್ತುದಾಸ್‌ಗೆ ತೀವ್ರ ಹಿಂಸೆ, ಫಾದರ್ ಎ.ಟಿ. ಥಾಮಸ್ ಹತ್ಯೆ, ಮಣಿಪುರದಲ್ಲಿ ಫಾದರ್ ಎನ್.ವಿ. ಜೋಸ್‌ಗೆ ಗುಂಡೇಟು, ಅಸ್ಸಾಂನಲ್ಲಿ ಸಿಸ್ಟರ್ ಅಗಸ್ಟಾ ಹತ್ಯೆ, ಮಧ್ಯಪ್ರದೇಶದಲ್ಲಿ ಸಿಸ್ಟರ್ ಮರಿಯಾ ಮೇಲೆ, 1998ರಲ್ಲಿ ರಾಂಚಿಯಲ್ಲಿ ಬ್ರದರ್ ಟರ್ಕಿ ಮತ್ತು ಒರಿಸ್ಸಾದಲ್ಲಿ ಜಖಿಯ ದಿಗಲ್ ಮೇಲೆ ಭಾರೀ ಹಲ್ಲೆ.

● ಎರಡನೆಯದಾಗಿ, ಧಾರ್ಮಿಕ ಶಿಕ್ಷಕರು (ಇವೆಂಜಾಲಿಸ್ಟ್)ಗಳ ಮೇಲೆ ಧಾಳಿ ಹಾಗೂ ಪ್ರಾರ್ಥನಾ ಸಭೆಗಳನ್ನು ಅಸ್ತವ್ಯಸ್ತಗೊಳಿಸುವ ಪ್ರಯತ್ನ. ಬಿ.ಜೆ.ಪಿ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಇಂತಹ ಪ್ರಕರಣಗಳ ಸಂಖ್ಯೆ ವಿಪರೀತ ಹೆಚ್ಚಿದೆ. ಇಂತಹ ಹಲ್ಲೆಗಳ ವರದಿಗಳು ಮುಖ್ಯವಾಗಿ ಗುಜರಾತ್, ಮಹಾರಾಷ್ಟ್ರ, ಪಂಜಾಬ್, ರಾಜಸ್ಥಾನ, ಉತ್ತರಪ್ರದೇಶಗಳಿಂದ ಬರುತ್ತಿವೆ.

● ಮೂರನೇಯದಾಗಿ, ಕ್ರಿಶ್ಚಿಯನ್ ಶಾಲೆ, ಕಾಲೇಜುಗಳು, ಆಸ್ಪತ್ರೆಗಳು, ಚರ್ಚ್‌ಗಳ ಮೇಲೆ ಕಿರುಕುಳ. ಮುಖ್ಯವಾಗಿ ಇವುಗಳ ಕಟ್ಟಡಗಳು, ಭೂಮಿಯ ಬಗ್ಗೆ ಮುನಿಸಿಪಾಲಿಟಿಗಳಿಂದ ಭೂವಿವಾದಗಳ ಹೆಸರಲ್ಲಿ ಕಿರುಕುಳ. ಕೆಲವೆಡೆ ಈ ವಿವಾದಗಳ ಹೆಸರಲ್ಲಿ ಚರ್ಚುಗಳನ್ನು ಕೆಡವಿ ಕೂಡಾ ಹಾಕಲಾಗಿದೆ.

ಸುಯೋಜಿತ ಕೃತ್ಯಗಳೇ?

ಈ ಹಲ್ಲೆಗಳು ನಡೆಯುತ್ತಿರುವ ರೀತಿಯನ್ನು ನೋಡಿದರೆ ಇವೆಲ್ಲವೂ ಒಂದು ಸುಯೋಜಿತ ರೀತಿಯಲ್ಲಿ ನಡೆಯುತ್ತಿರುವಂತೆ ಕಾಣುತ್ತದೆ. ಆರ್.ಎಸ್.ಎಸ್. ಮತ್ತು ವಿ.ಹೆಚ್.ಪಿ.ಯ ಕೇಂದ್ರ ಮುಖಂಡತ್ವದಿಂದ ಇದಕ್ಕೆ ಮಾರ್ಗದರ್ಶನ, ಸಂಯೋಜನೆ ಇರುವಂತೆ ಕಾಣುತ್ತದೆ.

ಇಂತಹ ಹಲ್ಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಿರುವುದು ಗುಜರಾತಿನಲ್ಲಿ. ಇದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ವಿ.ಹೆಚ್.ಪಿ.ಯ ಅತ್ಯಂತ ವ್ಯಾಪಕ ಜಾಲ ಇರುವುದು ಈ ರಾಜ್ಯದಲ್ಲೇ. ಇಲ್ಲಿ ಬಿ.ಜೆ.ಪಿ. ಬೆಳವಣಿಗೆಯ ಆಧಾರವೇ ಇದು. ಗುಜರಾತಿನಲ್ಲಿ ನಡೆದ ಹಲ್ಲೆಗಳ ಪಟ್ಟಿಯನ್ನು ನೋಡಿ -

● ಮಾರ್ಚ್ 2 - ಬರೋಡಾ ಜಿಲ್ಲೆಯ ಪಾದ್ರಾ ಗ್ರಾಮ್ಮದಲ್ಲಿ ಸ್ಥಳೀಯ ಹಾಗೂ ವಿದೇಶೀ ಮಿಶನರಿಗಳ ಒಂದು ಸಭೆಯ ಮೇಲೆ ಯುವಪಡೆಯೊಂದರ ಧಾಳಿ.

● ಮಾರ್ಚ್ 4 - ಬರೋಡಾ ನಗರದಲ್ಲಿ ಪೆಂಟೆಕೋಸ್ಟಲ್ ಚರ್ಚ್ ಏರ್ಪಡಿಸಿದ್ದ 'ಈಸ್ಟರ್ ಮಹೋತ್ಸವ' ಸಭೆಯ ಮೇಲೆ 'ಗರ್ವ್ ಸೆ ಕಹೋ ಹಂ ಹಿಂದೂ ಹೈಂ' ಎಂದು ಕಿರುಚುತ್ತಿದ್ದ ಸುಮಾರು 200 ವಿ.ಹೆಚ್.ಪಿ., ಎ.ಬಿ.ವಿ.ಪಿ. ಕಾರ್ಯಕರ್ತರಿಂದ ಹಿಂಸಾಚಾರ

● ಏಪ್ರಿಲ್ 11 - ಪಾಲನ್‌ಪುರ ಮುನಿಸಿಪಲ್ ಹಾಲ್‌ನಲ್ಲಿನ ಕ್ರಿಶ್ಚಿಯನ್ ಸಭೆಯ ಮೇಲೆ ಧಾಳಿ - ಮಹಿಳೆಯರ ವಿಶೇಷ ಅಧಿವೇಶನದಲ್ಲಿ ಹಲ್ಲೆ.

● ಏಪ್ರಿಲ್ 15 - ಅಹ್ಮದಾಬಾದಿನಿಂದ 25 ಕಿ.ಮಿ. ದೂರದ ನರೋರಾದಲ್ಲಿ ಗ್ರಾಮ ಸರಪಂಚನ ನೇತೃತ್ವದಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚಿನ ನೆಲಸಮ - ಅದಕ್ಕೆ ಅನುಮತಿ ಪಡೆದಿರಲಿಲ್ಲ ಎಂಬ ನೆವದ ಮೇಲೆ.

● ಮೇ 28 - ಅಹಮದಾಬಾದಿನ ಬಳಿ 'ಸ್ವದೇಶಿ ಪ್ರಚಾರ'ದ ನಡುವೆ ಸ್ಟೆಂಟ್ ಮೇರೀಸ್ ಶಾಲೆಯ ಮೇಲೆ ಧಾಳಿ, ಲೂಟಿ.

ಮಹಾರಾಷ್ಟ್ರದಲ್ಲೂ

ಇಲ್ಲಿ ಶಿವಸೇನೆ ಮತ್ತು ಆರ್.ಎಸ್.ಎಸ್‌ನ 'ಜನಕಲ್ಯಾಣ ಸಮಿತಿ' ಕಾರ್ಯಕರ್ತರಿಂದ ಇಂತಹುದೇ ಹಲ್ಲೆಗಳು ಲೂರೂರ್, ಅಮರನಾಥ್, ಮುಂಬೈ ಮತ್ತಿತರ ಕಡೆಗಳಲ್ಲಿ ನಡೆದಿವೆ. ಇತ್ತೀಚೆಗೆ ಮುಂಬೈಯ ಉಪನಗರ ಮಲಾಡ್ ಎಂಬಲ್ಲಿ ಜೂನ್ 16ರಂದು ಶತಮಾನದಷ್ಟು ಹಳೆಯದಾದ ಆರ್ಲೆಂ ಚರ್ಚಿನ ಆಶ್ರಯದಲ್ಲಿದ್ದ ಇತ್ತೀಚೆಗೆ ನಿರ್ಮಿತಗೊಂಡ ಆರಾಧನಾ ಮಂದಿರವನ್ನು ಯಾವುದೇ ಪೂರ್ವ ಸೂಚನೆಯಿಲ್ಲದೆ ನೆಲಸಮ ಮಾಡಲಾಯಿತು.

ಇದೇ ರೀತಿ ಪಂಜಾಬಿನ ಲೂಧಿಯಾನದಲ್ಲೂ ಹಲ್ಲೆಗಳು ನಡೆದ ವರದಿಗಳು ಬಂದಿವೆ. ರಾಜಸ್ಥಾನದಲ್ಲೂ ಇನ್ನಷ್ಟು ವ್ಯವಸ್ಥಿತವಾಗಿ ನಡೆಯುತ್ತಿದೆ. ಉತ್ತರ ಪ್ರದೇಶದಲ್ಲಿ ಭಜರಂಗದಳದ ಮಂದಿ ಮಾರ್ಚ್ 16ರಂದು ಕಾನಪುರದಲ್ಲಿ ಕಲ್ಲು ತೂರಾಟ ಮಾಡಿ, ವೇದಿಕೆಯ ಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಗಲಭೆ ಎಬ್ಬಿಸಿದರು.

ಈ ಎಲ್ಲಾ ಹಲ್ಲೆಗಳಲ್ಲಿ ಒಂದು ಸಮಾನ ಅಂಶ ಕಾಣಬಹುದು.

● ಈ ಹಲ್ಲೆಗಳು ಕ್ರಿಶ್ಚಿಯನ್ನರು ಅತ್ಯಂತ ಕಮ್ಮಿ ಸಂಖ್ಯೆಯಲ್ಲಿರುವ ರಾಜ್ಯಗಳಲ್ಲಿ ಯಾವುದೇ ರಕ್ಷಣೆಯಿಲ್ಲದ ಸಣ್ಣ ಕ್ರಿಶ್ಚಿಯನ್ನರ ಗುಂಪುಗಳ ಮೇಲೇ ನಡೆದಿದೆ. ಸಾಕಷ್ಟು ಗಣನೀಯ ಸಂಖ್ಯೆಯಲ್ಲಿ ಕ್ರಿಶ್ಚಿಯನ್ನರಿರುವ ಕೇರಳ, ಗೋವಾಗಳಲ್ಲಿ ವಿ.ಹೆಚ್.ಪಿ. ಇಂತಹ ಧೈರ್ಯ ಮಾಡಿಲ್ಲ.

● ಎಲ್ಲಾ ಕ್ರಿಶ್ಚಿಯನ್ ಸಂಸ್ಥೆಗಳು ಮತಾಂತರ ಮಾಡುತ್ತವೆ ಎಂದು ಸುಳ್ಳು ಆಪಾದನೆ, ಅವರು ವಿದೇಶಿಯರು ಎಂಬು ದೂಷಣೆ ಹಾಗೂ ಭೂವಿವಾದಗಳನ್ನು ಎಬ್ಬಿಸುವುದು. ಈ ನೆವದಲ್ಲಿ ಇಡೀ ಕ್ರಿಶ್ಚಿಯನ್ ಸಮುದಾಯವನ್ನು ಬೆದರಿಸುವುದು.

ಈ ಭಯೋತ್ಪಾದನೆಯಲ್ಲಿ ಆಡಳಿತದ ಶಾಮೀಲು-ಕೆಲವೆಡೆ ಪರೋಕ್ಷವಾಗಿ ಇನ್ನೂ ಕೆಲವೆಡೆ ಸಕ್ರಿಯವಾಗಿ. ಬಿ.ಜೆ.ಪಿ. ಆಳ್ವಿಕೆಯ ರಾಜ್ಯಗಳಲ್ಲಿ ಹಲ್ಲೆಗಳಲ್ಲಿ ವಿಪರೀತ ಹೆಚ್ಚಳಕ್ಕೆ ಕಾರಣವನ್ನು ಇಲ್ಲಿ ಕಾಣಬಹುದು.

ದುರುದ್ದೇಶಪೂರಿತ ಹಲ್ಲೆಗಳು

ಇವೆಲ್ಲಾ ಸ್ವಯಂ ಸ್ಫೂರ್ತಿಯಿಂದ ನಡೆದಿರುವ ಹಲ್ಲೆಗಳಲ್ಲ ಎಂಬುದು ಸ್ಪಷ್ಟ. ಭಾರತ ಕೇವಲ ಹಿಂದೂಗಳ ದೇಶ, ಬೇರೆ ಮತದವರೆಲ್ಲಾ ವಿದೇಶೀಯರು, ಅವರಿಗೆ ಇಲ್ಲಿರಲು ಅರ್ಹತೆಯಿಲ್ಲ ಎಂಬ 'ಹಿಂದುತ್ವ' ಸಿದ್ಧಾಂತದ ಭಾಗವಾಗಿಯೇ ಇವೆಲ್ಲಾ ನಡೆಯುತ್ತಿವೆ, ಬರೋಡಾದಲ್ಲಿ, ಲಾತೂರಿನಲ್ಲಿ, ಜಾಲಂಧರ್‌ನಲ್ಲಿ, ಕಾನಪುರದಲ್ಲಿ ಕ್ರಿಶ್ಚಿಯನ್ ಸಭೆಗಳ ಮೇಲೆ ಧಾಳಿ ಮಾಡಿ ಹಿಂಸಾಚಾರ ನಡೆಸುವ ಗೂಂಡಾ ಪಡೆಗಳಿಂದ ಹಿಡಿದು ವಾಜಪೇಯಿ, ಅಡ್ವಾಣಿ ಮುಂತಾದವರವರೆಗೆ ಎಲ್ಲರೂ ಸಮಾನವಾಗಿ ಹಂಚಿಕೊಂಡಿರುವ ಸಿದ್ಧಾಂತವಿದು. ಹಲವು ದಶಕಗಳ ಹಿಂದೆ ಆರ್.ಎಸ್.ಎಸ್. ಸರಸಂಘಚಾಲಕ ಗೋಲ್ವಾಲ್ಕರ್ ಹೇಳಿದ್ದನ್ನು ಅಕ್ಷರಶಃ ಜ್ಯಾರಿಗೆ ತರುವ ಪ್ರಯತ್ನದ ಫಲಗಳಿವು. 1939ರಲ್ಲಿ ಪ್ರಕಟವಾದ ತಮ್ಮ ಪುಸ್ತಕ 'ನಮ್ಮ ರಾಷ್ಟ್ರೀಯತ್ವದ ನಿರ್ವಚನೆ'ಯಲ್ಲಿ ಗೋಲ್ವಾಲ್ಕರ್ ಬರೆದಿದ್ದ "..... ಹಿಂದೂಸ್ತಾನದಲ್ಲಿ ... ಅಸ್ತಿತ್ವದಲ್ಲಿ ಇರಬೇಕಾದ್ದು ಪ್ರಾಚೀನ ಹಿಂದೂ ರಾಷ್ಟ್ರ ಮಾತ್ರ. ಅದು ಬಿಟ್ಟು ಬೇರಾವುದೂ ಇರಕೂಡದು... ಈ ರಾಷ್ಟ್ರೀಯತ್ವಕ್ಕೆ, ಅಂದರೆ ಹಿಂದೂ ಜನಾಂಗ, ಧರ್ಮ, ಸಂಸ್ಕೃತಿ ಮತ್ತು ಭಾಷೆಗೆ ಸೇರದ್ದಲ್ಲಾ ನಿಜವಾದ ರಾಷ್ಟ್ರೀಯ ಜೀವನದ ಪರಿಧಿಯ ಹೊರಗೆ ಬೀಳುತ್ತವೆ.... ವಿದೇಶಿಯರಿಗೆ ಇರುವುದು ಎರಡೇ ದಾರಿ, ರಾಷ್ಟ್ರೀಯ ಜನಾಂಗದೊಡನೆ ಬೆರೆತು ಹೋಗುವುದು ಅಥವಾ ರಾಷ್ಟ್ರೀಯ ಜನಾಂಗ ಬಿಡುವವರೆಗೆ ಅದರ ಮರ್ಜಿಯ ಪ್ರಕಾರ ಇರುವುದು, ಅದು ಬೇಡವೆಂದರ ದೇಶವನ್ನು ಬಿಡುವುದು......"

ಬಿ.ಜೆ.ಪಿ. ಮುಖಂಡತ್ವ ಈ ಪುಸ್ತಿಕೆಗೂ ತಮಗೂ ಸಂಬಂಧವಿಲ್ಲ ಎಂದು ತೋರಿಸಿಕೊಳ್ಳಲು ಆಗಾಗ ಪ್ರಯತ್ನಿಸಿವೆ. ಅದರೂ ಅದು ಆರ್.ಎಸ್.ಎಸ್.ನ ಬೈಬಲಾಗಿಯೇ ಉಳಿದಿದೆ. ಈಗ ಬನ್ನಿವಾರಾದಿಂದ ಬರೋಡಾದವರೆಗೆ, ಲೂಧಿಯಾನದಿಂದ ಲಾತೂರ್‌ವರೆಗೆ ನಡೆಯುತ್ತಿರುವ ಹಲ್ಲೆಗಳನ್ನು ನೋಡಿದರೆ ಗೋಲ್ವಾಲ್ಕರ್‌ರ ಈ ಸಿದ್ಧಾಂತ 20ನೇ ಶತಮಾನದ ಅಂತ್ಯದ ವೇಳೆಗೂ ಅವರ ಯುವ ಕಾರ್ಯಕರ್ತರ ತಲೆಯಲ್ಲಿ ಹೇಗೆ ಆಳವಾಗಿ ಇಳಿದಿದೆ ಎಂಬುದು ತಿಳಿಯುತ್ತದೆ.

ಅಜ್ಞಾನ-ಅಹಂಕಾರದ ಮುದ್ದೆಗಳು

ಹಿಂದುತ್ವ ಸಿದ್ಧಾಂತ ನಿಂತಿರುವುದೇ ಸುಳ್ಳುಗಳ ಮೇಲೆ, ಮತ್ತು ಇತಿಹಾಸದ ವಿಕೃತ ನಿರೂಪಣೆಗಳ ಮೇಲೆ. ಅದರಲ್ಲೂ ಕ್ರಿಶ್ಚಿಯನ್ ಕೋಮಿನ ಮೇಲೆ ಹಲ್ಲೆಗಳ ವಿಷಯದಲ್ಲಿಯೂ ಅದರ ಅಜ್ಞಾನ ಮತ್ತು ಅಹಂಕಾರ ನಿಜಕ್ಕೂ ಆಶ್ಚರ್ಯಕಾರಿ. ಕ್ರಿಶ್ಚಿಯನ್ನರು ನಮ್ಮ 'ಆತಿಥ್ಯ'ದ ದುರುಪಯೋಗ ಪಡೆಯುತ್ತಿದ್ದಾರೆ ಎಂಬುದು ಆರ್.ಎಸ್.ಎಸ್. ವಿಚಾರಧಾರೆ ಸದಾ ಹೇಳುವ ಅಂಶ. ಅಂದರೆ ಭಾರತ ಇವರ ಸ್ವಂತ ಆಸ್ತಿಯೇನು? ಕ್ರಿಶ್ಚಿಯನ್ನರನ್ನು 'ಹೊರಗಿನವರು' ಎಂದು ಹೇಳುವಾಗ ಇವರಿಗೆ ಕ್ರಿಶ್ಚಿಯನ್ ಧರ್ಮ ಭಾರತಕ್ಕೆ ಯುರೋಪಿಯನ್ ವಸಾಹತುಶಾಹಿ ಬರುವ ಎಷ್ಟೋ ಮೊದಲೇ ಕ್ರಿ.ಶ. ಮೊದಲನೇ ಶತಮಾನದಲ್ಲೇ ಬಂದಿತ್ತು ಎಂಬುದು ಗೊತ್ತೇ ಇದ್ದಂತಿಲ್ಲ. ಪಾಶ್ಚಿಮಾತ್ಯ ದೇಶಗಳ ಥಳಕು-ಬಳುಕಿಗೆ ಮರುಳಾಗಿ ತಾಯ್ನಾಡನ್ನ ಬಿಟ್ಟ ಅನಿವಾಸಿ ಭಾರತೀಯರ (ಎನ್.ಆರ್.ಐ.) ಹಣದಿಂದ ಕೊಬ್ಬುತ್ತಿರುವ ವಿ.ಹೆಚ್.ಪಿ.ಗಳು ಎರಡು ಸಾವಿರ ವರ್ಷಗಳಿಂದ ದೇಶದಲ್ಲಿ ಸಾಮರಸ್ಯದಿಂದ ಬದುಕಿರುವವರ ದೇಶ ಪ್ರೇಮವನ್ನು ಪ್ರಶ್ನಿಸುತ್ತಿರುವುದು ಅಹಂಭಾವದ ಅತಿರೇಕವಲ್ಲದಿದ್ದರೆ ಬೇರೇನು?

ಇನ್ನು ಅವರು ಮತಾಂತರ ಮಾಡುತ್ತಾರೆ ಎಂಬ ಮಾತ್ತಿನ ಬಗ್ಗೆ ಹೇಳುವುದಾದರೆ, ಈ ಎರಡು ಸಾವಿರ ವರ್ಷಗಳಲ್ಲಿ, ಅದರಲ್ಲೂ 200 ವರ್ಷಗಳ ಬ್ರಿಟಿಶ್ ರಾಜ್ಯಭಾರದ ನಂತರವೂ ಕ್ರಿಶ್ಚಿಯನ್ನರು ಈಗಲೂ ಒಂದು ಅತಿ ಸಣ್ಣ ಕೋಮು. ನಿಜವಾಗಿಯೂ ಎಲ್ಲರನ್ನೂ ಧರ್ಮಾಂತರ ಮಾಡುವುದೇ ಅವರ ಕೆಲಸವಾಗಿದ್ದರೆ ಅವರ ಸಂಖ್ಯೆ ಕೇವಲ 3% ವಷ್ಟೇ ಉಳಿದಿರಲು ಸಾಧ್ಯವೇ?

ಈಗೇಕೆ ಕ್ರಿಶ್ಚಿಯನ್ನರ ಮೇಲೆ ಕಣ್ಣು?

"ನಲ್ವತ್ತು ವರ್ಷಗಳ ಕಾಲ ಮುಸ್ಲಿಂ ಕೋಮಿನ ಮೇಲೆ ರಾಜಕೀಯ, ದೈಹಿಕ ಆಕ್ರಮಣಗಳ ನಂತರ ಈಗ ತನ್ನ ವ್ಯಾಪ್ತಿಯನ್ನು ವಿಸ್ತರಿಸಿ ಸಂಘ ಪರಿವಾರ ಕ್ರಿಶ್ಚಿಯನ್ನರ ಮೇಲೂ ಧಾಳಿ ಆರಂಭಿಸಿವೆ' ಎಂದಿದೆ ಅಖಿಲ ಭಾರತ ಕ್ಯಾಥೋಲಿಕ್ ಯೂನಿಯನ್‌ನ ಪತ್ರಿಕೆ.

ಬಾಬ್ರಿ ಮಸೀದಿಯ ಧ್ವಂಸದಿಂದ ಚುನಾವಣಾ ಲಾಭ ಪಡೆದ ನಂತರ ಈಗ ಅಯೋಧ್ಯೆಯಿನ್ನು ಕಾಮಧೇನುವಲ್ಲ, ತನ್ನ ಮಂದಗಾಮಿ ಮಿತ್ರರ ವಿಶ್ವಾಸ ಪಡೆಯಲು ಹಾಗೂ ಚುನಾವಣಾ ದೃಷ್ಟಿಯಿಂದ ಕೂಡಾ ಅಲ್ಪಸಂಖ್ಯಾತರಲ್ಲಿ ದೊಡ್ಡ ಕೋಮಾದ ಮುಸ್ಲಿಂ ಕೋಮಿನೊಡನೆ ಒಂದು ಗೋಸುಂಬೆ ಶಾಂತಿಯನ್ನು ಏರ್ಪಡಿಸಿಕೊಳ್ಳಬೇಕು. ಅದೇ ವೇಳೆಗೆ ಸಂಕುಚಿತ ಹಿರಿಮೆಯ ಭಾವನೆಯ ಮೇಲೆ ನಿಂತ ಹಿಂದುತ್ವ ಸಿದ್ಧಾಂತದ ಆಕರ್ಷಣೆ ಉಳಿಯಬೇಕಾದರೆ, ತನ್ನ ಹಿರಿಮೆಯ ಪ್ರದರ್ಶನ ಮಾಡಲು ನಿರಂತರವಾಗಿ ಏನಾದರೂ ಅಗತ್ಯ ತಾನೆ? ಈಗ ಕ್ರಿಶ್ಚಿಯನ್ನರು ಅಂತಹ ಪ್ರದರ್ಶನದ ಗುರಿಗಳಾಗುತ್ತಿರುವಂತೆ ಕಾಣುತ್ತದೆ. ಮುಸಲ್ಮಾನರಿಗೆ 'ಪಾಠ ಕಲಿಸಿಯಾಯಿತು' ಈಗ ಕ್ರಿಶ್ಚಿಯನ್ನರ ಬಾರಿ!

ದಿಲ್ಲಿ ಸರಕಾರದ ಕ್ರಮದ ಬಗ್ಗೆ ದೇಶಾದ್ಯಂತ ಪ್ರತಿಭಟನೆಯೆದ್ದಾಗ ಪ್ರಧಾನ ಮಂತ್ರಿಗಳು ಎಂದಿನಂತೆ ತನ್ನ ಕೈ ಹಿಸುಕಿಕೊಳ್ಳುತ್ತಾ ತನಗೇನೂ ಗೊತ್ತೇ ಇಲ್ಲದ ಹಾಗೆ ನಟಿಸಿದರು. ಬಾಬ್ರಿ ಮಸೀದಿ ಧ್ವಂಸದ ವೇಳೆಗೆ ಪ್ರದರ್ಶಿಸಿದ ಖೇದವನ್ನೇ ಪ್ರಕಟಿಸಿದರು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ 'ಮಂದಗಾಮಿ'ಯಾಗಿಲ್ಲ, ಅದರ ರಕ್ತ ಪಿಪಾಸೆ ಕುಗ್ಗಿಲ್ಲ, ಹೆಚ್ಚಿದೆ. ಕಾವಿಪಡೆಗಳ ಈ ಹೊಸತಂತ್ರದ ವಿರುದ್ಧ ಹೋರಾಟ ಈಗ ಅಗತ್ಯ.

❑❑❑

ಬಾಬ್ರಿ ಮಸೀದಿಯ ಧ್ವಂಸದಿಂದ ಚುನಾವಣಾ ಲಾಭ ಪಡೆದ ನಂತರ ಈಗ ಅಯೋಧ್ಯೆಯಿನ್ನು ಕಾಮಧೇನುವಲ್ಲ, ತನ್ನ ಮಂದಗಾಮಿ ಮಿತ್ರರ ವಿಶ್ವಾಸ ಪಡೆಯಲು ಹಾಗೂ ಚುನಾವಣಾ ದೃಷ್ಟಿಯಿಂದ ಕೂಡಾ ಅಲ್ಪಸಂಖ್ಯಾತರಲ್ಲಿ ದೊಡ್ಡ ಕೋಮಾದ ಮುಸ್ಲಿಂ ಕೋಮಿನೊಡನೆ ಒಂದು ಗೋಸುಂಬೆ ಶಾಂತಿಯನ್ನು ಏರ್ಪಡಿಸಿಕೊಳ್ಳಬೇಕು. ಅದೇ ವೇಳೆಗೆ ಸಂಕುಚಿತ ಹಿರಿಮೆಯ ಭಾವನೆಯ ಮೇಲೆ ನಿಂತ ಹಿಂದುತ್ವ ಸಿದ್ಧಾಂತದ ಆಕರ್ಷಣೆ ಉಳಿಯಬೇಕಾದರೆ ತನ್ನ ಹಿರಿಮೆಯ ಪ್ರದರ್ಶನ ಮಾಡಲು ನಿರಂತರವಾಗಿ ಏನಾದರೂ ಅಗತ್ಯ ತಾನೆ? ಈಗ ಕ್ರಿಶ್ಚಿಯನ್ನರು ಅಂತಹ ಪ್ರದರ್ಶನದ ಗುರಿಗಳಾಗುತ್ತಿರುವಂತೆ ಕಾಣುತ್ತದೆ. ಮುಸಲ್ಮಾನರಿಗೆ 'ಪಾಠ ಕಲಿಸಿಯಾಯಿತು' ಈಗ ಕ್ರಿಶ್ಚಿಯನ್ನರ ಬಾರಿ!

ಬಿ.ಜೆ.ಪಿ. ಬಂದಾಗುವುದೇನು?

ಅಮೆರಿಕಾದ ಬಿ.ಜೆ.ಪಿ.ಯದ್ದಿ ಪ್ರಾದೇಶಿಕ ಹವಾಲ್ದಾರತನವೇ?

ಪರಮಾಣು ಶಸ್ತ್ರಾಸ್ತ್ರವಿಲ್ಲದ ದೇಶಗಳ ಮೇಲೆ ತಾನು ಅಣ್ವಸ್ತ್ರ ಪ್ರಯೋಗಿಸುವುದಿಲ್ಲ ಎಂದು ಘೋಷಿಸಿದ ದೇಶ ಚೀನಾ ನಮ್ಮ ದೇಶದ ಭದ್ರತೆಗೆ ಅಪಾಯಕಾರಿಯೆಂದು ಕಾಣುವವರಿಗೆ ಈ ರೀತಿಯ ಘೋಷಣೆ ಮಾಡಲು ಸದಾ ನಿರಾಕರಿಸಿಕೊಂಡು ಬಂದ, 1971ರಲ್ಲಿ ಭಾರತ ಮೇಲೆಯೇ ಇಂತಹ ಬೆದರಿಕೆ ಹಾಕಿದ ದೇಶ ಅಮೇರಿಕಾದಿಂದ ಏನೇನೂ ಅಪಾಯ ಕಾಣುತ್ತಿಲ್ಲ. ಆಶ್ಚರ್ಯವಲ್ಲವೇ?

ಅಮೇರಿಕಾದ ಆರ್ಥಿಕ ದಿಗ್ಬಂಧನವನ್ನು ನಾವು ಹೆಚ್ಚು ಜಾಗತೀಕರಣದ ಮೂಲಕ ಎದುರಿಸುತ್ತೇವೆಂದು ಹಾರಾಡಿದ ವಾಜಪೇಯಿ ಸರಕಾರ ಇದು ಆಗಲೇ ರಕ್ಷಣಾ ವಲಯದಲ್ಲಿ ಉಂಟು ಮಾಡಿರುವ ಪರಿಣಾಮವನ್ನು ಜನಗಳಿಂದ ಮರೆಮಾಡಿದೆ.

ಅಮೇರಿಕಾದ ನಿರ್ಬಂಧಗಳು ಮುಖ್ಯವಾಗಿ ಮಿಲಿಟರಿ ಅಥವಾ ಮಿಲಿಟರಿ ಮತ್ತು ಸಾಮರಿಕ ತಂತ್ರಜ್ಞಾನದ ವರ್ಗಾವಣೆಯ ಮೇಲೆ ಗುರಿಯಿಟ್ಟ ನಿರ್ಬಂಧಗಳು. ಆದ್ದರಿಂದ ಇದರ ಮೊದಲ ದುಷ್ಪರಿಣಾಮ ಆಗಲೇ ರಕ್ಷಣಾ ವಲಯದಲ್ಲಿ ಕಂಡುಬಂದಿದೆ.

★ ಭಾರತೀಯ ವೈಮಾನಿಕ ಪಡೆಯ ಒಂದು ತಂಡ ಅಮೇರಿಕಾದಲ್ಲಿ ತರಬೇತಿ ಪಡೆಯುತ್ತಿತ್ತು. ಅದು ಭಾರತಕ್ಕೆ ಹಿಂದಿರುಗಲು ಆದೇಶ ನೀಡಲಾಯಿತು.

★ ಪ್ರತಿಷ್ಠೆಯ ಹಗುರ ಯುದ್ಧ ವಿಮಾನ (ಎಲ್.ಸಿ.ಎ) ಯೋಜನೆಗೆ ಅಮೇರಿಕನ್ ಸರಕಾರ ನಿರ್ಬಂಧದಿಂದ ಭಾರೀ ಏಟು ಬಿದ್ದಿದೆ. ಇದಕ್ಕೆ ಅಮೇರಿಕಾದ ಜನರಲ್ ಇಲೆಕ್ಟ್ರಿಕ್ ಕಂಪನಿಯ ಇಂಜಿನುಗಳನ್ನು ಅಳವಡಿಸಿ ಪರೀಕ್ಷಣೆಗೊಳಪಡಿಸಿಬೇಕಿದ್ದು, ನಂತರ ಗ್ಯಾಸ್ ಟರ್ಬೈನ್ ಸಂಶೋಧನಾ ಸಂಸ್ಥೆ ರೂಪಿಸುವ ಇಂಜನನ್ನು ಅಳವಡಿಸಬೇಕಾಗಿತ್ತು. ಈ ಇಂಜಿನು ಇನ್ನೂ ಸಿದ್ಧವಾಗಿಲ್ಲವಾದ್ದರಿಂದ ಈ ಯೋಜನೆಗೆ ಮೇಲೆ ಪ್ರಶ್ನೆ ಚಿಹ್ನೆ ಬಿದ್ದಿದೆ.

★ ಮುಂದುವರಿದ ಹಗುರ ಹೆಲಿಕಾಪ್ಟರ್ (ಎ.ಎಲ್.ಹೆಚ್.) ಯೋಜನೆಗೂ ಹೊಡೆತ ಬಿದ್ದಿದೆ. ಹೆಚ್.ಎ.ಎಲ್. ಇದನ್ನು ಯಶಸ್ವಿಯಾಗಿ ತಯಾರಿಸಿ ದಕ್ಷಿಣ-ಪೂರ್ವ ಏಶ್ಯಾದಲ್ಲಿ ಮಾರಾಟ ಮಾಡುತ್ತಿತ್ತು. ಆದರೆ ಈ ಗ್ರಾಹಕರು ಇದರಲ್ಲಿ ಅಮೇರಿಕನ್ ಇಂಜಿನ್ ಬೇಕೆಂದು ಬಯಸುತ್ತಾರೆ. ಆದರೆ ಅಮೇರಿಕನ್ ನಿರ್ಬಂಧದಿಂದ ಈಗ ಅದು ಸಾಧ್ಯವಾಗುತ್ತಿಲ್ಲ.

ಈ ಬೆಳವಣಿಗೆಗಳಿಂದ ದೇಶದ ಭದ್ರತೆ ಕುರಿತಂತೆ ಹಲವಾರು ಪರಿಣತರು ಹಲವಾರು ವರ್ಷಗಳಿಂದ ನೀಡುತ್ತಿದ್ದ ಎಚ್ಚರಿಕೆಯ ಮಾತು ನಿಜವಾಗಿದೆ. ಅಮೇರಿಕಾ ಭಾರತದ ಬಗ್ಗೆ ಹೊಂದಿರುವ ನಿಲುವು ಹೊಸದೇನಲ್ಲ. ಹೀಗಿರುವಾಗ ಇಂತಹ ದೇಶಗಳೊಂದಿಗೆ ರಕ್ಷಣಾ ವಲಯದಂತಹ ನಿರ್ಣಾಯಕ ಕ್ಷೇತ್ರದಲ್ಲಿ ಸಹಯೋಗವೆಂಬುದು ತಿಳಿಗೇಡಿತನದ ಕೆಲಸ, ಯಾವ ಗಳಿಗೆಯಲ್ಲಾದರೂ ದೇಶದ ಭದ್ರತೆಗೆ, ಸ್ವಾವಲಂಬನಗೆ ಸಂಚಕಾರ ತರುತ್ತದೆಂಬ ಎಚ್ಚರಿಕೆಯನ್ನು ಮತ್ತೆ - ಮತ್ತೆ ನೀಡಲಾಗಿತ್ತು. ರಕ್ಷಣಾ ಒಪ್ಪಂದಗಳನ್ನು ಮಾಡುವಾಗ ಬೇರೆ ದೇಶಗಳೊಡನೆ ಇಂತಹ ಒಪ್ಪಂದಗಳನ್ನು ಮಾಡಿಕೊಳ್ಳುವ ಆಯ್ಕೆಯಿತ್ತು. ಆಗಿದ್ದ ಸೋವಿಯತ್ ಒಕ್ಕೂಟ ಹಾಗೂ ಫ್ರಾನ್ಸ್ ಮುಂದೆ ಬಂದಿದ್ದವು. ಆದರೆ ಕೇವಲ ರಾಜಕೀಯ ಕಾರಣಗಳಿಂದಾಗಿ ಅಮೇರಿಕಾದಂತಹ ವಿಶ್ವಾಸಾರ್ಹವಲ್ಲದ ದೇಶದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಯಿತು.

ಈಗ ಪರಮಾಣು ಶಸ್ತ್ರೀಕರಣವನ್ನು ಹಾಡಿ ಹೊಗಳುವ 'ಸಾಮರಿಕ ತಜ್ಞ'ರೇ ಆಗ ಈ ಒಪ್ಪಂದ ಮಾಡಿಕೊಳ್ಳಬೇಕು ಎಂದು ಸಲಹೆ ಮಾಡಿದವರು!

ಹಿಂದಿನ ಕಾಂಗ್ರೆಸ್ ಸರಕಾರಗಳು ಇಂತಹ ಒಪ್ಪಂದಗಳನ್ನು ಏಕೆ ಮಾಡಿಕೊಂಡರು? ವಿಶ್ವದಲ್ಲೆಲ್ಲಾ ತಮ್ಮ ಪ್ರಾಬಲ್ಯ ಮೆರೆಸುತ್ತಿರುವ ಅಮೇರಿಕಾದ ಪ್ರಧಾನ ಜೊತೆಗಾರರಾಗಿ ಈ ದಕ್ಷಿಣ ಏಶ್ಯಾ ಪ್ರದೇಶದಲ್ಲಿ ಮೂಡಿಬರಬಹುದೆಂಬ ಆಸೆ ಈ ಕಾಂಗ್ರೆಸ್ ಆಳರಸರದ್ದಿತ್ತು. ಅವರ ಈ ಆಸೆಗೆ ಅಮೇರಿಕಾದ ಆಳರಸರು 'ಸಾಮರಿಕ ಮಾತುಕತೆ', ರಕ್ಷಣಾ ತಂತ್ರಜ್ಞಾನಗಳ ಕೊಡುಗೆಯ ಮೂಲಕ ನೀರೆರೆದರು. ಆದರೆ ಅಮೇರಿಕಾದ ರಾಜತಾಂತ್ರಿಕ ತಂತ್ರದ ಬಗ್ಗೆ ತುಸುವಾದರೂ ಅರಿತಿರುವವರು ಇಂತಹ ಭೋಳೆತನದ ಆಸೆ ಇಟ್ಟುಕೊಳ್ಳಲು ಸಾಧ್ಯವಿರಲಿಲ್ಲ, ಅಮೇರಿಕಾ ಭಾರತವನ್ನು ಕಿರಿಯ ಜೊತೆಗಾರ ಎಂದು ಪರಿಗಣಿಸಬಹುದಷ್ಟೆ, ವಾಸ್ತವವಾಗಿ ಅಮೇರಿಕಾ ವಿಶ್ವ ಪೋಲೀಸ್ ಮುಖ್ಯಸ್ಥನಾದರೆ.ಭಾರತ ದಕ್ಷಿಣ ಏಶ್ಯಾದಲ್ಲಿ ಅದರ ಪ್ರಾದೇಶಿಕ ಕಾನ್‌ಸ್ಟೇಬಲ್ ಆಗಬಹುದಷ್ಟೆ. ಇದೇ ಇವೆಲ್ಲದರ ಅರ್ಥ ಎನ್ನುತ್ತಾರೆ ಈ ವಿಷಯಗಳ ಆಳವಾದ ಅಧ್ಯಯನ ಮಾಡಿರುವ ಶ್ರೀ ರಘು ಅವರು.

ದೊಡ್ಡ ಬಾಯಿಯ ನಮ್ಮ ಈಗಿನ ರಕ್ಷಣಾ ಮಂತ್ರಿಗಳು ಈ ಯಾವುದರ ಬಗ್ಗೆಯೂ ತುಟಿಪಿಟಕ್ಕೆನ್ನುವುದಿಲ್ಲ. ತನ್ನದು ಹಿಂದಿನ ಸರಕಾರಗಳಂತಲ್ಲ, ಸ್ವಾವಲಂಬನೆ, ಸ್ವದೇಶಿಯ ಸಿದ್ಧಾಂತದ ಮೇಲೆ ನಿಂತ ಸರಕಾರ ನಮ್ಮದು ಎನ್ನುವ ಬಿ.ಜೆ.ಪಿ. ಅಮೇರಿಕಾದೊಡನೆ ಇಂತಹ ಸಂಬಂಧಗಳನ್ನು ಪರಾಮರ್ಶಿಸಿದೆಯೇ? ಇಲ್ಲ, ಅದು ಕಾಂಗ್ರೆಸ್ ಆಳರಸರ ನೀತಿಯನ್ನೇ ಮುಂದುವರೆಸುತ್ತಿದೆ. ಬಹುಶಃ ಈಗ ಅಮೇರಿಕ ಎಂಬ ವಿಶ್ವ ಪೋಲಿಸ್ ಮುಖ್ಯಸ್ಥನ ಕೈಕೆಳಗೆ ದಕ್ಷಿಣ ಏಶ್ಯಾದಲ್ಲಿ ಸಾಧಾರಣ ಪೋಲೀಸ್ ಪೇದೆಯ ಬದಲು ಹವಾಲ್ದಾರ್‌ನ ಪಾತ್ರ ಮಾಡಬಯಸುತ್ತದೆ. ಆ ವಿಶ್ವ ಪೋಲೀಸ್ ಮುಖ್ಯಸ್ಥನ ಅಡಿಯಾಳ್ತನವಂತೂ ಮುಂದುವರೆಯುತ್ತದೆ.

ಅಮೇರಿಕಾದ ಅಧ್ಯಕ್ಷರಿಗೆ ಮತ್ತಿತರ ಕೆಲವು ಆಯ್ದ ಪಾಶ್ಚಿಮಾತ್ಯ ದೇಶಗಳ ಮುಖಂಡರಿಗೆ ಪ್ರಧಾನ ಮಂತ್ರಿ ವಾಜಪೇಯಿಯವರು ಬರೆದ ಪತ್ರ ಇದನ್ನು ಸಾಬೀತು ಮಾಡುತ್ತದೆ ಎನ್ನುತ್ತಾರೆ ಶ್ರೀ ರಘು.

ಈ ಪತ್ರದಲ್ಲಿ ಪರಮಾಣು ಶಸ್ತ್ರಾಸ್ತ್ರ ಹೊಂದಿರುವ 'ಕಮ್ಯುನಿಸ್ಟ್ ಚೀಣಾ'ದ ನೆರೆದೇಶವಾದ 'ಪ್ರಜಾಸತ್ತಾತ್ಮಕ ಭಾರತ'ದೊಡನೆ ಸಹಾನುಭೂತಿ ತೋರಿಸಿ ಎಂಬ 'ಮನವಿ'ಯ ಧಾಟಿಯಿತ್ತು. ಆದರೆ ಚೀನಾ ಭಾರತದೊಡನೆ ತನ್ನ ಸಂಬಂಧಗಳನ್ನು ಸುಧಾರಿಸಲು ಉತ್ಸುಕವಾಗಿದೆ, ಪರಮಾಣು ಅಸ್ತ್ರಗಳಿಲ್ಲದ ವರ ಮೇಲೆ ಪರಮಾಣು ಅಸ್ತ್ರಗಳನ್ನು ಬಳಸುವುದಿಲ್ಲ ಎಂದು ಘಂಟಾಘೋಷವಾಗಿ ಸಾರಿದೆ ಎಂಬ ಅಂಶವನ್ನು ವಾಜಪೇಯಿಯವರು ಮರೆ ಮಾಡಿದ್ದರು. ತದ್ವಿರುದ್ಧವಾಗಿ ಅಮೇರಿಕಾ ಭಾರತದ ಮೇಲೆ ಪರಮಾಣು ಶಸ್ತ್ರಾಸ್ತ್ರಗಳ ಬೆದರಿಕೆ ಹಾಕಿರುವ ಏಕೈಕ ದೇಶ ಎಂಬುದನ್ನು ಅವರು ಭಾರತ ಜನತೆಯಿಂದ ಮರೆಮಾಡಿದ್ದಾರೆ. 1971ರ ಪಾಕಿಸ್ತಾನದ ಯುದ್ಧದಲ್ಲಿ ಅದರ ಪರಮಾಣು ಶಸ್ತ್ರಸಜ್ಜಿತ ಏಳನೇ ನಾವಿಕ ಪಡೆಯ ಯುದ್ಧ ಹಡಗು ಬಂಗಾಳಕೊಲ್ಲಿಯತ್ತ ಹೊರಟಿತ್ತು. ಸೋವಿಯತ್ ಒಕ್ಕೂಟದ ಬೆದರಿಕೆಯಿಂದ ಅದಕ್ಕೆ ಹಾಗೆ ಮಾಡಲಾಗಲಿಲ್ಲ. ಹಿಂದೂ ಮಹಾಸಾಗರದಲ್ಲಿ ಪರಮಾಣು ಸಜ್ಜಿತ ನೆಲೆ ಹೊಂದಿರುವ, ಪರ್ಶಿಯನ್ ಕೊಲ್ಲಿಯಲ್ಲಿ ತನ್ನ ಶಾಶ್ವತ ಐದನೇ ನಾವಿಕ ಪಡೆ ಹೊಂದಿರುವ ಅಮೇರಿಕಾ ಹಾಗೂ ಪರಮಾಣು ಶಸ್ತ್ರಗಳಿಲ್ಲದ ದೇಶಗಳ ವಿರುದ್ಧ ಅದನ್ನು ಬಳಸುವುದಿಲ್ಲ ಎಂದು ಸ್ಪಷ್ಟವಾಗಿ ಸಾರಲು ಮತ್ತೆ ಮತ್ತೆ ನಿರಾಕರಿಸುತ್ತಿರುವ ದೇಶ ಅಮೇರಿಕಾ ನಮ್ಮ ಭದ್ರತಾ ಲೆಕ್ಕಚಾರದಲ್ಲಿ ಇಲ್ಲವೆಂದರೆ ಅಮೇರಿಕನ್ ಆಳರಸರಿಗೆ ಇದಕ್ಕಿಂತ ಸಂತೋಷದ ಸಂಗತಿ ಬೇರಾವುದಿದೆ?

ಬಿ.ಜೆ.ಪಿ. ಸರಕಾರ ಕೂಡಾ ದೇಶಪ್ರೇಮದ ಬಡಾಯಿಗಳೇನೇ ಇದ್ದರೂ ಅಮೇರಿಕನ್ ಪೋಲೀಸ್ ಮುಖ್ಯಸ್ಥನ ಹವಾಲ್ದಾರನಾಗಿ ಕೆಲಸ ಮಾಡಲು ಸಿದ್ಧವಾಗಿದೆ ಎಂಬುದನ್ನು ಇವೆಲ್ಲಾ ತೋರಿಸುತ್ತಿಲ್ಲವೇ ಎಂದು ಶ್ರೀ ರಘು ಪ್ರಶ್ನಿಸುತ್ತಾರೆ.



'ಡೆಕನ್‌ಹೆರಾಲ್ಡ್'ನಲ್ಲಿ ರಾಮಮೂರ್ತಿ

2ನೇ ನರಸಿಂಹಂ ಸಮಿತಿ ವರದಿ

ರಾಷ್ಟ್ರೀಕೃತ ಬ್ಯಾಕುಗಳನ್ನು ಕೊಲ್ಲುವ ವರದಿ

1991 ರಲ್ಲಿ ಕಾಂಗ್ರೆಸ್ ನೇತೃತ್ವದ ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬರುತ್ತಲೇ ಮೊದಲು ಮಾಡಿದ ಕೆಲಸ ಬ್ಯಾಂಕಿಂಗ್ ಉದ್ಯಮದಲ್ಲಿ 'ಸುಧಾರಣೆ' ಅದಕ್ಕಾಗಿಯೇ ಎಂ. ನರಸಿಂಹಂ ಸಮಿತಿಯ ರಚನೆ.

ಸಾಮಾನ್ಯವಾಗಿ ಬಂಡವಾಳಶಾಹಿ ಸರಕಾರಗಳು ನೇಮಿಸಿದ ಸಮಿತಿಗಳು ವರದಿಗಳನ್ನು ಸಲ್ಲಿಸಲು ವರ್ಷಾನುಗಟ್ಟಲೆ ಕಳೆಯುತ್ತವೆ- ವರದಿಯ ಪ್ರಾಮುಖ್ಯತೆ ಏನಿದ್ದರೂ ಕೂಡಾ. ಆದರೆ ನರಸಿಂಹಂ ಸಮಿತಿಯ ಮೊದಲ ವರದಿ 3 ತಿಂಗಳಲ್ಲೇ ಬಂದಿತ್ತು.

ಇದೀಗ 1998ರ ಎಪ್ರಿಲ್‌ನಲ್ಲಿ ಸಲ್ಲಿಸಿದ ಎರಡನೇ ವರದಿಗೆ ಸ್ವಲ್ಪ ಜಾಸ್ತಿ ಸಮಯ ತೆಗೆದು ಕೊಂಡಿದ್ದರು-ನಾಲ್ಕು ತಿಂಗಳು!

ಅಂದಿನ ಮತ್ತು ಇಂದಿನ ನರಸಿಂಹಂ ಸಮಿತಿಯ ಮೂಲ ಉದ್ದೇಶಗಳು ಒಂದೇ - ದೇಶದ ಆರ್ಥಿಕ ನೀತಿಯ ಉದಾರೀಕರಣದ ಭಾಗವಾಗಿ ಬ್ಯಾಂಕಿಂಗ್ ಉದ್ದಿಮೆಯನ್ನು ಖಾಸಗೀ ಮಾಲೀಕರಿಗೆ ಮತ್ತು ವಿದೇಶಿ ದೊರೆಗಳಿಗೆ ತೆರೆದಿಡುವುದು.

ಆದರೆ ಶ್ರೀ ನರಸಿಂಹಂ ತಮ್ಮ ವರದಿಯಲ್ಲಿ ಬರೆದಿರುವ ಉದ್ದೇಶವೇ ಬೇರೆ - 'ಬ್ಯಾಂಕಿಂಗ್ ಉದ್ದಿಮೆಯನ್ನು ಗ್ರಾಹಕರಿಗೆ ಅನುಕೂಲವಾಗುವಂತೆ ಪರಿಣಾಮಕಾರಿಯಾಗಿ ಬಳಸುವುದು'.

ವರದಿಯ ಇನ್ನೊಂದು ಭಾಗದಲ್ಲಿ ದುರ್ಬಲ ಮತ್ತು ಅಸಮರ್ಥ ಬ್ಯಾಂಕುಗಳು ತಮ್ಮ ಅವಸಾನವನ್ನು ಕಾಣ ಬೇಕಾಗುತ್ತದೆ ಎಂದು ಹೇಳುವ ಮೂಲಕ ವರದಿಯ ನಿಜವಾದ ಉದ್ದೇಶ ಏನು ಎಂಬುದನ್ನು ಬಯಲು ಗೊಳಿಸಿದ್ದಾರೆ.

ನರಸಿಂಹಂ ಸಮಿತಿಯ ಮೊದಲ ವರದಿಯ ಆಧಾರದಲ್ಲಿ ಈಗಾಗಲೇ 10 ಖಾಸಗೀ ಬ್ಯಾಂಕುಗಳು ಮತ್ತು ಹಲವಾರು ವಿದೇಶಿ ಬ್ಯಾಂಕುಗಳು ಹಣಕಾಸು ಕ್ಷೇತ್ರಗಳಲ್ಲಿ ಧಾಳಿ ಇಟ್ಟಿವೆ. ಹೆಚ್ಚಾಗಿ ದೇಶದ ಮುಖ್ಯ ಪಟ್ಟಣಗಳಲ್ಲಿ ಮಾತ್ರ ವ್ಯವಹಾರ ನಡೆಸುವ ಈ ಬ್ಯಾಂಕುಗಳು ತಮ್ಮ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು 24 ಗಂಟೆಗಳ ಬ್ಯಾಂಕು ಗ್ರಾಹಕರ ಸ್ಥಳಕ್ಕೆ ಹೋಗಿ ಠೇವಣಿ ತರುವುದು ಮತ್ತು ಸಾಲ ನೀಡುವುದು ಇತ್ಯಾದಿ ಸೌಲಭ್ಯಗಳನ್ನು ನೀಡುತ್ತಿವೆ. ಆದರೆ ಈ ಸೌಲಭ್ಯ ಯಾರಿಗೆ? ಶ್ರೀಮಂತ ಗ್ರಾಹಕರಿಗೆ ಮಾತ್ರ. ದೊಡ್ಡ ದೊಡ್ಡ ಖಾತೆಗಳನ್ನು ತಮ್ಮದಾಗಿಸಿಕೊಂಡ ಈ ಬ್ಯಾಂಕುಗಳು ತಮ್ಮ ಬ್ಯಾಂಕಿಂಗ್ ವ್ಯವಹಾರವನ್ನು ಮತ್ತು ಲಾಭವನ್ನು ತೀವ್ರವಾಗಿ ಹೆಚ್ಚಿಸಿಕೊಳ್ಳುತ್ತಿವೆ. ಆದ್ದರಿಂದಲೇ ಮಾರುಕಟ್ಟೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ವ್ಯವಹಾರಗಳ ಪಾಲು ಹಂತ ಹಂತವಾಗಿ ಕಡಿಮೆಯಾಗುತ್ತಿದೆ. ಆ ಮೂಲಕ ಬ್ಯಾಂಕುಗಳನ್ನು ದುರ್ಬಲಗಳಿಸುವ ಸುವ್ಯವಸ್ಥಿತ ಕುತಂತ್ರ ನರಸಿಂಹಂ ವರದಿಯಲ್ಲಿ ಅಡಗಿದೆ.

ತನ್ನ ಮೊದಲ ವರದಿಯಲ್ಲಿ ಬ್ಯಾಂಕುಗಳ ಪುನರ್ ರಚನೆಗೆ ಒತ್ತು ಕೊಡಬೇಕೆಂದು ಹೇಳಿದ್ದು ಇದೀಗ ಇನ್ನೂ ಒಂದು ಪಟ್ಟು ಮುಂದಕ್ಕೆ ಹೋಗಿ ಸಾರ್ವಜನಿಕ ಕ್ಷೇತ್ರದಲ್ಲಿ 27 ಬ್ಯಾಂಕುಗಳ ಅವಶ್ಯಕತೆ ಇದೆಯೇ ಎಂದು ಪ್ರಶ್ನಿಸಿದ್ದು ಈ ಕೆಳಗಿನ ಸಲಹೆಗಳನ್ನು ನೀಡಿದೆ-

. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಡೆಸಲು 3-4 ದೊಡ್ಡ ಬ್ಯಾಂಕುಗಳು

2. ಬರೀ ರಾಷ್ಟ್ರೀಯ ಮಟ್ಟದಲ್ಲಿ 8-10 ಬ್ಯಾಂಕುಗಳು. ಬ್ಯಾಂಕುಗಳನ್ನು ಅಂದರೆ 27 ಬ್ಯಾಂಕುಗಳಲ್ಲಿ ಲಾಭ ದಾಯಕವಾದ ಬ್ಯಾಂಕುಗಳನ್ನು ಒಂದಕ್ಕೊಂದು ವಿಲೀನ ಮಾಡಿ 10-12 ದೊಡ್ಡ ಬ್ಯಾಂಕುಗಳನ್ನು ನಿರ್ಮಿಸುವುದು.

ಅದೇ ಸಂದರ್ಭದಲ್ಲಿ ದುರ್ಬಲ ಬ್ಯಾಂಕುಗಳ ಗತಿ? ಹಂತ ಹಂತವಾಗಿ ಅವುಗಳನ್ನು ನಾಶವಾಗುವಂತೆ ಮಾಡುವುದು. ಅದರೆ ನರಸಿಂಹಂ ಸಮಿತಿಯ ವರದಿಯ ಪ್ರಕಾರ ಇನ್ನು ಮುಂದೆ ಈ ಬ್ಯಾಂಕುಗಳನ್ನು ಬೇರೇ ಠೇವಣಿ ಇಟ್ಟುಕೊಳ್ಳುವ ಮತ್ತು ಸಾಲನೀಡುವ ಬ್ಯಾಂಕುಗಳನ್ನಾಗಿ (ನ್ಯಾರೋ ಬ್ಯಾಂಕಿಂಗ್) ಪರಿವರ್ತಿಸುವುದು. ಅಂದರೆ ಲಾಭದಾಯಕವಾದ ವ್ಯವಹಾರಗಳನ್ನು ದೊಡ್ಡ ಬ್ಯಾಂಕುಗಳು ಮಾತ್ರ ನಿರ್ವಹಿಸಬೇಕು. ಹಾಗೊಂದು ವೇಳೆ ಆ ಬ್ಯಾಂಕುಗಳು ನಷ್ಟದಲ್ಲೇ ಮುಂದುವರೆದರೆ ಅವುಗಳನ್ನು ಮುಚ್ಚಬೇಕು.

ಬಿಜೆಪಿ ಸರಕಾರ ಮಂಡಿಸಿದ ಬಜೆಟ್ಟಿಗೂ ನರಸಿಂಹಂ ಸಮಿತಿಯ ವರದಿಗೂ ಒಂದಕ್ಕೊಂದು ಸಂಬಂಧವಿದೆ ಎಂಬುದನ್ನು ಈ ಕೆಳಗಿನಂತೆ ಕಾಣಬಹುದು.

ಈ ಬಾರಿಯ ಬಜೆಟ್ಟಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಶೇರುಗಳನ್ನು ಮಾರಾಟ ಮಾಡುವ ಮೂಲಕ ಸಂಗ್ರಹ ಮಾಡಬೇಕೆಂದಿರುವ ಹಣ ರೂ. 5000 ಕೋಟಿ. ಕಳೆದ ಬಜೆಟ್ಟಿನಲ್ಲಿ ಸಂಗ್ರಹವಾಗಿರುವುದು ಬರೀ 196 ಕೋಟಿ ರೂ ಮಾತ್ರ, ಅಂದರೆ 25 ಪಟ್ಟು ಜಾಸ್ತಿ ಹಣ ಸಂಗ್ರಹ ಆಗಬೇಕಿದೆ.

ನರಸಿಂಹಂ ಸಮಿತಿಯ ವರದಿಯಂತೆ ಲಾಭದಾಯಕವಾದ ಬ್ಯಾಂಕುಗಳ ಶೇರುಗಳನ್ನು ಖಾಸಗಿಯವರಿಗೆ ಮಾರುವುದರ ಮೂಲಕ ಈ ಉದ್ದೇಶವನ್ನು ಈಡೇರಿಸಿ ಕೊಳ್ಳಬಹುದು.

ನರಸಿಂಹಂ ಸಮಿತಿಯ ವರದಿಯನ್ನು ತಯಾರಿಸುವ ಮೊದಲು ನೌಕರ ಸಂಘಟನೆಗಳನ್ನು ಸಂಪರ್ಕಿಸಿದಾಗ ಆ ಸಂಘಟನೆಗಳ ಮುಖಂಡರು ನೀಡಿದ ಸಲಹೆಯೇ ಬೆರೆ.

1. ಕೆಟ್ಟ ಸಾಲಗಳೆಂದು (ಬ್ಯಾಡ್ ಡೆಟ್ಸ್) ಪರಿಗಣಿತವಾದ 47,000 ಕೋಟಿ ರೂ.ಗಳ ಸಾಲ ಪಡೆದವರಲ್ಲಿ ರೂ 10 ಲಕ್ಷಕ್ಕಿಂತಲೂ ಹೆಚ್ಚು ಸಾಲಪಡೆದವರ ಪಟ್ಟಿಯ ಬಿಡುಗಡೆ (ದೊಡ್ಡ ಸಾಲಗಳ ಮೊತ್ತವೇ ಸಾಧಾರಣ 40,000 ಕೋಟಿ ರೂ ತಲುಪುತ್ತದೆ) ಮತ್ತು ಆ ಸಾಲಗಳನ್ನು ವಾಪಾಸು ಪಡೆಯಲು ಸಾಲಗಾರರ ಆಸ್ತಿಗಳ ಹರಾಜು ಸೇರಿದಂತೆ ಇನ್ನಿತರ ಕ್ರಮ.

2. ಬ್ಯಾಂಕು ಸಾಲಗಳನ್ನು ಉದ್ದೇಶಪೂರ್ವಕವಾಗಿ ಬೇಕೆಂದು ವಾಪಾಸು ನೀಡದವರಿಗೆ ಕಠಿಣ ಶಿಕ್ಷೆ.

3. ಸರಕಾರಿ ಲೆಕ್ಕಗಳನ್ನು ಪರಿಶೋಧಿಸುವ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರೀತಿಯಲ್ಲಿ ಕೇಂದ್ರ ಬ್ಯಾಂಕಿಂಗ್ ಲೆಕ್ಕ ಪರಿಶೋಧನೆ ಆಯೋಗದ ಸ್ಥಾಪನೆ.

4. ಬ್ಯಾಂಕುಗಳ ವ್ಯವಹಾರಗಳ ಮಾಹಿತಿ ಸಾರ್ವಜನಿಕರಿಗೆ ಸಂಪೂರ್ಣವಾಗಿ ಸಿಗುವಂತೆ ಬ್ಯಾಲೆನ್ಸ್ ಶೀಟ್‌ಗಳನ್ನು ತಯಾರಿಸುವುದು (ರಹಸ್ಯ ಕಲಮು ಕ್ಲಾಸ್‌ನ್ನು ರದ್ದು ಮಾಡುವುದು)

. ನೌಕರ ಸಂಘಟನೆಗಳು ನೀಡಿದ ಸಲಹೆಗಳನ್ನು ನರಸಿಂಹಂ ಸಮಿತಿ ಒಪ್ಪಲಿಲ್ಲ. ಬದಲಾಗಿ ಕೆಲವೇ ಶ್ರೀಮಂತ ವಿಭಾಗಕ್ಕೆ ಅನುಕೂಲವಾಗಿರುವ ಸಲಹೆಗಳನ್ನು ಮಾತ್ರ ನೀಡಿದ್ದು, ಬಂಡವಾಳಶಾಹಿ ಸರಕಾರ ಯಾವುದೇ ಪಕ್ಷದ ಹೆಸರಿನಲ್ಲಿದ್ದರೂ ಕೂಡಾ ಹಂತ ಹಂತವಾಗಿ ಜ್ಯಾರಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದೆ.

ಆದ್ದರಿಂದ ನರಸಿಂಹಂ ಸಮಿತಿಯ ವರದಿಯನ್ನು ವಿರೋಧಿಸುವುದು ದೇಶ ಪ್ರೇಮಿ ಬ್ಯಾಂಕ್ ನೌಕರರ ಕರ್ತವ್ಯ ಮಾತ್ರವಲ್ಲ, ದೇಶ ಪ್ರೇಮಿ ಜನರದ್ದೂ ಸಹ.

- ಬಾಲಕೃಷ್ಣ

(ಮುಂದಿನ ಸಂಚಿಕೆಗಳಲ್ಲಿ ನರಸಿಂಹಂ ಸಮಿತಿ ವರದಿಯ ಇನ್ನಷ್ಟು ವಿವರಗಳು)

ನೌಕರ ಸಂಘಟನೆಗಳು ನೀಡಿದ ಸಲಹೆಗಳನ್ನು ನರಸಿಂಹಂ ಸಮಿತಿ ಒಪ್ಪಲಿಲ್ಲ. ಬದಲಾಗಿ ಕೆಲವೇ ಶ್ರೀಮಂತ ವಿಭಾಗಕ್ಕೆ ಅನುಕೂಲವಾಗಿರುವ ಸಲಹೆಗಳನ್ನು ಮಾತ್ರ ನೀಡಿದ್ದು, ಬಂಡವಾಳಶಾಹಿ ಸರಕಾರ ಯಾವುದೇ ಪಕ್ಷದ ಹೆಸರಿನಲ್ಲಿದ್ದರೂ ಕೂಡಾ ಹಂತ ಹಂತವಾಗಿ ಜ್ಯಾರಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿವೆ.

ಕುರ್ಚಿ ಭದ್ರತೆಗೆ ಶೆಖಾವತ್ ಸರ್ಕಸ್!

ಹೌದು, ರಾಜಸ್ಥಾನದ ಸಂಪುಟ ವಿಸ್ತರಣೆಯ ಪರಿಯನ್ನು ನೋಡಿದರೆ ಅದೊಂದು ಸರ್ಕಸ್ ಎನ್ನದೆ ಬೇರೆ ವಿಧಿಯಿಲ್ಲ.

ಬಿಜೆಪಿ ಮುಖ್ಯಮಂತ್ರಿ ಭೈರವ್ ಸಿಂಗ್ ಶೆಖಾವತ್ ಜುಲೈ ತಿಂಗಳ ಮೊದಲ ಎಂಟು ದಿನಗಳ ಒಳಗೆ ಎರಡು ಬಾರಿ ಸಚಿವ ಸಂಪುಟವನ್ನು ವಿಸ್ತರಿಸಿ ಅದನ್ನು ಗಜಗಾತ್ರಕ್ಕೆ ಹಿಗ್ಗಿಸಿ ಕೊಂಡಿದ್ದಾರೆ.

ಜುಲೈ ಎರಡರಂದು 14 ಜನರನ್ನು ಸಂಪುಟಕ್ಕೆ ಸೇರಿಸಿಕೊಂಡಿದ್ದ ಶೆಖಾವತ್ ಎಂಟರಂದು ಮತ್ತೆ ಒಬ್ಬರನ್ನು ಮಂತ್ರಿಗಳನ್ನಾಗಿ ಮಾಡಿದರು. ಇದರೊಂದಿಗೆ ರಾಜಸ್ಥಾನದ ಮಂತ್ರಿಮಂಡಲದ ಸದಸ್ಯರ ಸಂಖ್ಯೆ 40ಕ್ಕೆ ಏರಿದೆ.

ವಿಧಾನಸಭೆಯ ಸದಸ್ಯರ ಸಂಖ್ಯೆಯ ಹತ್ತನೇ ಒಂದು ಭಾಗದಷ್ಟು ಮಂತ್ರಿಗಳಿರಬಹುದು ಎಂಬ ನಿಯಮಕ್ಕೆ ಇದು ತೀರಾ ತದ್ವಿರುದ್ಧವಾದುದಾಗಿದೆ. ಅಷ್ಟು ಮಾತ್ರವೇ ಅಲ್ಲದೆ ರಾಜ್ಯ ವಿಧಾನಸಭೆಗೆ ಇನ್ನೇನು ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿರುವಾಗ ಈ ರೀತಿ ಸಂಪುಟವನ್ನು ವಿಸ್ತರಿಸಿದ್ದು ಬಿಜೆಪಿಯ ರಾಜಕೀಯ ತಂತ್ರವಾಗಿದೆ.

ಅಸೆಂಬ್ಲಿ ಚುನಾವಣೆಗಳ ಅಂಚಿನಲ್ಲೇ ಸಂಪುಟ ವಿಸ್ತರಣೆ ಮಾಡಿ ರಾಜ್ಯದ ಬೊಕ್ಕಸದ ಮೇಲೆ ಹೊರೆ ಹೇರಲಾಗಿದೆ.

ಈ ವರ್ಷದ ಪೂರ್ವಾರ್ಧದಲ್ಲಿ ನಡೆದ ಲೋಕಸಭೆ ಚುನಾವಣೆಗಳಲ್ಲಿ ರಾಜಸ್ಥಾನದಲ್ಲಿ ಆಡಳಿತದಲ್ಲಿರುವ ಭಾರತೀಯ ಜನತಾ ಪಕ್ಷ ಹೀನ ಹಿನ್ನಡೆ ಅನುಭವಿಸಿದ್ದು ಪಕ್ಷದ ಕಾರ್ಯಕರ್ತರ ನೈತಿಕ ಸ್ಥೈರ್ಯ ಕುಸಿದು ಹೋಗಿದೆ. ಕಾರ್ಯಕರ್ತರಲ್ಲಿ ಮತ್ತೆ ಅದನ್ನು ತುಂಬುವ ಉದ್ದೇಶದಿಂದ ಹಲವು ಜನರಿಗೆ ಆಡಳಿತದ ಕೊನೆ ಅವಧಿಯಲ್ಲಿ ಅಧಿಕಾರದ ರುಚಿ ತೋರಿಸುವ ಕೀಳು ಮಟ್ಟಕ್ಕೆ ಬಿಜೆಪಿ ನಾಯಕತ್ವ ಇಳಿದಿದೆ.

ಒಂದು ಕಡೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಕುಸಿದು ಬೀಳುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯವಂತೂ ವಿಪರೀತ ಹೆಚ್ಚುತ್ತಿದೆ. ಇಂಥ ಸನ್ನಿವೇಶದಲ್ಲಿ ಶೆಖಾವತ್ ಸಂಪುಟವನ್ನು ವಿಸ್ತರಿಸಿದ್ದು ರೋಮ್ ಹೊತ್ತಿ ಉರಿಯುತ್ತಿರುವಾಗ ನೀರೋ ಪಿಟೀಲು ಬಾರಿಸಿದ ಎಂಬ ಮಾತು ನೆನಪಾಗದೆ ಇರಲು ಸಾಧ್ಯವಿಲ್ಲ.



ವಿಶ್ವ

ತ್ರಿಪುರಾ: ಬಯಲಾದ ಕಾಂಗ್ರೆಸ್, ಬಿಜೆಪಿ ಮುಖ

ತ್ರಿಪುರಾದಲ್ಲಿ ಹೆಚ್ಚುತ್ತಿರುವ ಉಗ್ರಗಾಮಿ ಚಟುವಟಿಕೆಗಳನ್ನು ಹತ್ತಿಕ್ಕಲು ರಾಜ್ಯದ ಎಡರಂಗ ಸರಕಾರ ನಡೆಸುತ್ತಿರುವ ಯತ್ನಗಳಿಗೆ ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್, ಮತ್ತು ರಾಜ್ಯದಲ್ಲಿ ಬೇರುಬಿಡಲು ಇನ್ನಿಲ್ಲದ ಯತ್ನ ನಡೆಸುತ್ತಿರುವ ಬಿಜೆಪಿ ಅಡ್ಡಗಾಲು ಹಾಕತೊಡಗಿವೆ.

ಉಗ್ರಗಾಮಿ ಪಿಡುಗಿನ ಬಗ್ಗೆ ಕೇಂದ್ರ ಸರಕಾರದ ಜತೆ ಸಮಾಲೋಚಿಸಲು ಸರ್ವ ಪಕ್ಷಗಳ ನಿಯೋಗವೊಂದನ್ನು ಕಳಿಸುವ ರಾಜ್ಯ ಸರಕಾರದ ನಿರ್ಧಾರಕ್ಕೆ ಈ ಎರಡು ಪಕ್ಷಗಳಲ್ಲದೆ ತ್ರಿಪುರಾ ಉಪಜಾತಿ ಯುವ ಸಮಿತಿ (ಟಿ.ಯು.ಜೆ.ಎಸ್) ಕೂಡ ವಿರೋಧ ಸೂಚಿಸಿದೆ. ನಿಯೋಗದಲ್ಲಿ ಪಾಲ್ಗೊಳ್ಳದಿರಲು ಅವು ನಿರ್ಧರಿಸಿವೆ.

ಇಡೀ ಒಂದು ರಾಜ್ಯದ ಜನತೆ ಉಗ್ರಗಾಮಿಗಳ ದುಷ್ಕೃತ್ಯಗಳಿಂದ ನಲುಗುತ್ತಿರುವಾಗ ಅದನ್ನು ನಿಯಂತ್ರಿಸಲು ಸರಕಾರ ನಡೆಸುವ ಕ್ರಮಗಳಿಗೆ ಪೂರ್ಣ ಬೆಂಬಲ ನೀಡುವ ಬದಲು ಇದರಲ್ಲಿ ರಾಜಕೀಯ ಬೆರೆಸಲು ಈ ಪಕ್ಷಗಳು ಹೊರಟಿರುವುದು ಅವುಗಳ ರಾಜಕೀಯ ದುರುದ್ದೇಶವನ್ನು ಬಯಲು ಮಾಡುತ್ತದೆ.

ತ್ರಿಪುರದಂಥ ಪುಟ್ಟ ರಾಜ್ಯದ ಜನತೆ ಎಡಪಂಥೀಯರಿಗೆ ಇನ್ನಿಲ್ಲದ ಒಲವು ತೋರುತ್ತಿರುವುದು ಬಂಡವಾಳಶಾಹಿ ಪಕ್ಷಗಳಿಗೆ ಕಣ್ಣುಸುರಾಗಿದೆ. ಹೀಗಾಗಿ ಎಡರಂಗ ಸರಕಾರವನ್ನು ಹೇಗಾದರೂ ಮಾಡಿ ಉರುಳಿಸಲು ಅವು ಸದಾ ಪ್ರಯತ್ನಿಸುತ್ತಲೇ ಇರುತ್ತವೆ. ಬಿಜೆಪಿ ಅಧ್ಯಕ್ಷ ಕುಶಬಾವ್ ಠಾಕ್ರೆ ಅವರಂತೂ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಹದಗೆಟ್ಟಿರುವ ರಾಜ್ಯಗಳ ಸಾಲಿನಲ್ಲಿ ತ್ರಿಪುರಾವನ್ನು ಸೇರಿಸಿ ಮಾತನಾಡತೊಡಗಿದ್ದಾರೆ.

ಪಶ್ಚಿಮ ಬಂಗಾಳಕ್ಕೆ ಕೇಂದ್ರ ತಂಡವನ್ನು ಕಳಿಸಿ ಸರಕಾರಕ್ಕೆ ವಿರುದ್ಧವಾದ ವರದಿಯನ್ನು ಪಡೆಯುವ ಯತ್ನದಲ್ಲಿ ಆದ ವೈಫಲ್ಯದಿಂದ ಹತಾಶಗೊಂಡಿರುವ ಬಿಜೆಪಿ ಇದೀಗ ತ್ರಿಪುರಾದ ಮೇಲೆ ಕಾಕ ದೃಷ್ಟಿಹಾಕಿದೆ.

ಆದರೆ ಪುಟ್ಟದಾದರೂ ಅಪೂರ್ವ ರಾಜಕೀಯ ಪ್ರಜ್ಞಾವಂತಿಕೆಯನ್ನು ಪ್ರದರ್ಶಿಸುತ್ತಿರುವ ತ್ರಿಪುರಾ ಜನತೆ ಇಂಥ ಯಾವ ಪ್ರಯತ್ನಕ್ಕೂ ಅವಕಾಶ ನೀಡುವುದಿಲ್ಲ. ಅವುಗಳನ್ನು ದಿಟ್ಟತನದಿಂದ ಎದುರಿಸಿ ವಿಫಲಗೊಳಿಸುತ್ತದೆ ಎಂಬ ವಿಶ್ವಾಸ ದೇಶದ ಪ್ರಜಾಪ್ರಭುತ್ವವಾದಿ ಜನಗಳಿಗಿದೆ.

ಕೋಮುವಾದಿಗಳೇ ಬಾಲಬಿಚ್ಚೇರಿ; ಜೋಕೆ!

ಕೇರಳದಲ್ಲಿ ತನ್ನ ಕರಾಳಹಸ್ತವನ್ನು ಚಾಚಲು ಹಿಂದೂ ಮತಾಂಧ ಸಂಘಟನೆ ವಿಶ್ವ ಹಿಂದೂ ಪರಿಷತ್ (ವಿ.ಎಚ್.ಪಿ) ಪ್ರಯತ್ನಿಸುತ್ತಿದೆ.

ವಿವಾದಾತ್ಮಕ ಶಿವಗಿರಿ ಮಠವನ್ನು ವಿಮೋಚನೆಗೊಳಿಸುವುದಾಗಿ ವಿ.ಎಚ್.ಪಿ.ಯ ಪ್ರಧಾನ ಕಾರ್ಯದರ್ಶಿ ಅಶೋಕ ಸಿಂಘಾಲ್ ಬೆದರಿಕೆ ಹಾಕಿದ್ದಾರೆ. ಇದು ಎಡಪಂಥೀಯ ಹಾಗೂ ಪ್ರಜಾಪ್ರಭುತ್ವವಾದಿ ಚಳುವಳಿ ಬಲಗೊಂಡಿರುವ ಪ್ರಜ್ಞಾವಂತರ ನಾಡಾದ ಕೇರಳದಲ್ಲಿ ತನ್ನ ಬಾಲ ಬಿಚ್ಚಲು ವಿ.ಎಚ್.ಪಿ.ಯಲ್ಲದೆ ಇಡೀ ಸಂಘಪರಿವಾರ ಹೂಡಿರುವ ಹುನ್ನಾರವಾಗಿದೆ.

ವಿ.ಎಚ್.ಪಿ ಬೆದರಿಕೆ ಶಿವಗಿರಿ ಮಠವನ್ನು ತನ್ನ ಅಧಿಕಾರದ ಕೇಂದ್ರವನ್ನಾಗಿ ಮಾಡಿಕೊಳ್ಳುವ ವಿ.ಎಚ್.ಪಿ, ಆರ್.ಎಸ್.ಎಸ್.-ಬಿಜೆಪಿ ಮೈತ್ರಿಕೂಟದ ರಾಷ್ಟ್ರೀಯ ಮಟ್ಟದ ಪಿತೂರಿಯ ಭಾಗವಾಗಿದೆ ಎಂದು ಕೇರಳ ಮುಖ್ಯಮಂತ್ರಿ ಇ.ಕೆ. ನಾಯನಾರ್ ಹೇಳಿದ್ದಾರೆ.

ಶಿವಗಿರಿಗಾಗಿ ಒಂದು ಧರ್ಮಮಂಡಳಿಯನ್ನು ರಚಿಸಲು ವಿ.ಎಚ್.ಪಿಯ ಕೇಂದ್ರ ಸಮಿತಿ ದೆಹಲಿ ಯಲ್ಲಿ ನಿರ್ಧರಿಸಿತ್ತು. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಸಿಪಿಐ(ಎಂ) ಪಾಲಿಟ್ ಬ್ಯೂರೊ ಸದಸ್ಯರು ಆಗಿರುವ ನಾಯನಾರ್, ಕೋಮು ವಿದ್ವೇಷವನ್ನು ಹರಡುವ ಯಾವುದೇ ಕ್ರಮವನ್ನು ಹಾಗೂ ರಾಜ್ಯದ ಕಾನೂನಿಗೆ ಸವಾಲೆಸೆಯುವ ಯಾವುದೇ ಕ್ರಮವನ್ನು ಕಠಿಣವಾಗಿ ನಿರ್ವಹಿಸುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ವಿ.ಎಚ್.ಪಿ.ಯ ಅಹಂಕಾರಕ್ಕೆ ಕೇರಳದಂಥ ಪ್ರಜ್ಞಾವಂತರ ನಾಡಿನಲ್ಲಿ ಸ್ಥಾನವಿಲ್ಲ ಎಂದವರು ಹೇಳಿದ್ದಾರೆ. ಶಿವಗಿರಿ ಮಠವನ್ನ ಆದಷ್ಟು ಬೇಗನೆ ಸನ್ಯಾಸಿಗಳ ಚುನಾಯಿತ ಪದಾಧಿಕಾರಿಗಳಿಗೆ ಬಿಟ್ಟುಕೊಡುವುದಾಗಿ ಅವರು ತಿಳಿಸಿದ್ದಾರೆ.

ಮತದಾರರ ಪಟ್ಟಿ ಸಿದ್ಧವಾಗಿದೆ. ಚುನಾವಣೆಯನ್ನು ಬುಡಮೇಲು ಮಾಡುವುದು ವಿ.ಎಚ್.ಪಿ.ಯ ಉದ್ದೇಶವಾಗಿದೆ. ಚುನಾವಣೆ ನಡೆದರೆ ನ್ಯಾಯ ಸಮ್ಮತವಾಗಿ ಆಯ್ಕೆಯಾದ ಸಮಿತಿ ಮಠದ ಮೇಲೆ ಹಿಡಿತ ಹೊಂದುತ್ತದೆ. ಇದರಿಂದ ತನ್ನ ಯತ್ನಕ್ಕೆ ಅಡ್ಡಿಯಾಗಬಹುದು ಎಂಬುದು ವಿಎಚ್‌ಪಿಯ ಭೀತಿಯಾಗಿದೆ.

ಬಿಹಾರದಲ್ಲಿ ಹತ್ಯಾಕಾಂಡ

ರಾಜಕೀಯ ಹತ್ಯೆಗಳಿಗೆ ಕುಖ್ಯಾತವಾಗಿರುವ ಬಿಹಾರದಿಂದ ಇನ್ನೊಂದು ಘೋರ ಹತ್ಯಾಕಾಂಡದ ಪ್ರಕರಣ ವರದಿಯಾಗಿದೆ.

ಹಜಾರಿಬಾಗ್ ಜಿಲ್ಲೆಯ ದಮುವಾ ಗ್ರಾಮದಲ್ಲಿ ಜುಲೈ 7 ರಂದು ನಕ್ಸಲೀಯರದ್ದೆಂದು ಹೇಳಲಾದ ನಿಷೇಧಿತ ಸಂಘಟನೆಯೊಂದರ ಕಾರ್ಯಕರ್ತರು 11 ಜನರನ್ನು ಕೊಂದು ಹಾಕಿದ್ದಾರೆ.

ದುಷ್ಕರ್ಮಿಗಳು ಆಕ್ರಮಣ ಮಾಡುವ ಭೀತಿಯಿಟ್ಟಿದ್ದರು ಎಂದು ಗ್ರಾಮಸ್ಥರು ಮುಂಚಿತವಾಗಿಯೇ ತಿಳಿಸಿದ್ದರೂ ಪೋಲೀಸರು ಏನೂ ಕ್ರಮ ಕೈಗೊಳ್ಳದಿರುವುದರಿಂದ ಈ ದುರಂತ ಸಂಭವಿಸಿದೆ. ಭೀತಿಯ ಬಗ್ಗೆ ಗೃಹ ಕಾರ್ಯದರ್ಶಿಯವರಿಗೂ ದೂರನ್ನು ಸಲ್ಲಿಸಲಾಗಿತ್ತು.

ಸಶಸ್ತ್ರ ದುಷ್ಕರ್ಮಿಗಳ ಚಲನವಲನದ ಬಗ್ಗೆ ಜನರು ಪೊಲೀಸರಿಗೆ ದೂರು ಕೊಟ್ಟರೂ ಪೊಲೀಸ್ ಇನ್ಸ್‌ಪೆಕ್ಟರ್ ಭದ್ರತೆ ಕ್ರಮಗಳನ್ನು ಕೈಗೊಳ್ಳುವ ಬದಲು ಸ್ಥಳದಿಂದ ಪಲಾಯನ ಮಾಡಿದರು ಎಂದು ಬಿಹಾರ ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಸದಸ್ಯರೊಬ್ಬರು ಹೇಳಿದರು. ಈ ಹತ್ಯಾಕಾಂಡ ಗ್ರಾಮಸ್ಥರನ್ನು ಹೆದರಿಸುವ ಒಂದು ತಂತ್ರವಾಗಿದ್ದು ಈ ಪ್ರದೇಶಗಳಲ್ಲಿ ಸರಕಾರವೇ ಅಸ್ತಿತ್ವದಲ್ಲಿಲ್ಲ ಎಂದು ಇನ್ನೊಬ್ಬ ಸದಸ್ಯ ಟೀಕಿಸಿದರು.

ಕೌನ್ಸಿಲರ್ ಆತ್ಮಾಹುತಿ

ಬಿಜೆಪಿ ಆಡಳಿತದಲ್ಲಿ ರಾಜಸ್ಥಾನದ ಅಭಿವೃದ್ಧಿ ಕುಂಠಿತವಾಗಿದೆ. ಕೆಲವು ಪ್ರದೇಶಗಳಂತೂ ತೀರಾ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ ಎನ್ನುವುದಕ್ಕೆ ರಾಜ್ಯದ ಮಹಾನಗರ ಪಾಲಿಕೆಯೊಂದರ ಸದಸ್ಯ ಆತ್ಮಾಹುತಿ ಮಾಡಿಕೊಂಡಿರುವುದೇ ಸಾಕ್ಷಿಯಾಗಿದೆ.

ಹಾಂ! ಅಂದ ಹಾಗೆ ಆತ್ಮಾಹುತಿ ಮಾಡಿಕೊಂಡವರು ಬೇರೆ ಪಕ್ಷದ ಸದಸ್ಯರೇನೂ ಅಲ್ಲ. ಸ್ವತಃ ಬಿಜೆಪಿಯವರೇ ಆಗಿದ್ದಾರೆ.

ತಮ್ಮ ಪ್ರದೇಶದಲ್ಲಿನ ನಾಗರಿಕ ಸೌಲಭ್ಯಗಳ ಕೊರತೆಯನ್ನು ಪ್ರತಿಭಟಿಸಿ ಶ್ರೀ ಗಂಗಾನಗರದ ಕೌನ್ಸಿಲರ್ ಲಕ್ಷ್ಮಣ ಖಿಂಚಿ (ಬಿಜೆಪಿ) ಜೂನ್ 27 ರಂದು ಆತ್ಮಾಹುತಿಗೆ ಯತ್ನಿಸಿ ಸುಟ್ಟ ಗಾಯಗಳಿಂದಾಗಿ ಜುಲೈ 5 ರಂದು ಆಸ್ಪತ್ರೆಯಲ್ಲಿ ನಿಧನರಾದರು. ಇದೊಂದು ಘೋರ ಹಾಗೂ ದಾರುಣ ಪ್ರಕರಣವಾಗಿದೆ. ಪ್ರತಿಭಟನೆಗೆ ಆತ್ಮಾಹುತಿ ಸೂಕ್ತ ಮಾರ್ಗ ಖಂಡಿತಾ ಅಲ್ಲ. ಆದರೆ ಈ ಕೌನ್ಸಿಲರ್‌ನ್ನು ಇಂಥ ಕೃತ್ಯಕ್ಕೆ ಇಳಿಸಿದ್ದು ಆಡಳಿತ ಪಕ್ಷದ ಕಾರ್ಯವೈಖರಿಗೆ ಹಾಗೂ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಬೆಂಗಳೂರಿನಲ್ಲೊಂದು ಸರಳ ವಿವಾಹ

ಜುಲೈ 5 ರಂದು 'ಐಕ್ಯರಂಗ' ಬಳಗದ ಕಾಂ. ಗಂಗಾಧರ್ ಹಾಗೂ ಡಿವೈಎಫ್‌ಐನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ. ಲಕ್ಷ್ಮಣ್‌ರವರ ಸೋದರಿ ರಾಜಲಕ್ಷ್ಮಿಯವರ ವಿವಾಹ ಸರಳ ಸಮಾರಂಭವೊಂದರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಜಾತಿ ಮತ್ತಿತರ ಅಡ್ಡಗೋಡೆಗಳನ್ನು ಮೀರಿನಿಂತ ಎರಡು ಪ್ರಜ್ಞಾಶೀಲ ಕಾರ್ಮಿಕ ಕುಟುಂಬಗಳ ಸಂಪೂರ್ಣ ಸಹಯೋಗದಿಂದ ನಡೆದ ಈ ಸರಳ ವಿವಾಹ ಸಮಾರಂಭ ಜಿ.ಎನ್.ನಾಗರಾಜ್‌ರವರು ನೂತನ ವಧೂ-ವರರಿಗೆ ಶುಭಕೋರುತ್ತಾ ಹೇಳಿದಂತೆ ಪ್ರಜಾಪ್ರಭುತ್ವ ಆಂದೋಲನದ ಒಂದು ಭಾಗವಾಗಿತ್ತು. ಮಕ್ಕಳನ್ನು ಹರಸುತ್ತಾ ಸ್ವಾರ್ಥ ಸಾಧನೆಯೇ ಪರಮ ಮೌಲ್ಯವಾಗುತ್ತಿರುವ ನಮ್ಮ ಸಮಾಜದಲ್ಲಿ ಸುತ್ತಲಿನ ಆಗುಹೋಗುಗಳಲ್ಲಿ ಭಾಗವಹಿಸುತ್ತಾ ಸಮಾಜ ಬದಲಾವಣೆಗಾಗಿ ಶ್ರಮಿಸಬೇಕೆನ್ನುವವರು ಎದುರಿಸಬೇಕಾದ ತೊಂದರೆ-ಸಂಕಷ್ಟಗಳನ್ನು ನೆನಪಿಸಿಕೊಟ್ಟ ರಾಜ್ಯದ ಪ್ರಗತಿಶೀಲ ಪ್ರಜಾಪ್ರಭುತ್ವ ಆಂದೋಲನದ ಹಿರಿಯರಾದ ಪಿ.ರಾಮಚಂದ್ರರಾವ್ ಹಾಗೂ ಎಸ್.ಸೂರ್ಯನಾರಾಯಣ ರಾವ್ ಇವನ್ನೆಲ್ಲಾ ಎದುರಿಸಿ ನಿಲ್ಲುವ ಸಾರ್ಥಕ ಬಾಳನ್ನು ನೂತನ ದಂಪತಿಗಳಿಗೆ ಹಾರೈಸಿದರು. ಡಿವೈಎಫ್‌ಐ ಮುಖಂಡರಾದ ಗುರುಶಾಂತ್ ಹಾಗೂ ಹಿಂದಿನ ಅಧ್ಯಕ್ಷ ನಾಗಮೋಹನ ದಾಸ್ ಕೂಡಾ ಹಾರೈಸಿದರು. ಸಮಾರಂಭವನ್ನು ನಡೆಸಿಕೊಟ್ಟ ಕೆ.ಎಸ್.ವಿಮಲಾ ವರನ ತಂದೆ ಹಾಗೂ ನಗರದ ಕಾರ್ಮಿಕ ಆಂದೋಲನದ ಕಾರ್ಯಕರ್ತರಿಗೆ ಚಿರಪರಿಚಿತರಾದ ಕಾಂ. ಬೃಹಸ್ಪತಿಯವರ ಅರ್ಥಗರ್ಭಿತ ಶುಭಹಾರೈಕೆಯನ್ನು ಓದಿ ಹೇಳಿದರು.



ಮಣ್ಣಿನ ಕಲಾಕೃತಿಗಳನ್ನು ತಯಾರಿಸುವ ಘಟಕ ಕೆಲವೇ ನಿಮಿಷಗಳಲ್ಲಿ ಇಂತಹ ಸ್ಥಿತಿಗೆ ಬಂತು ಎನ್ನುತ್ತಾರೆ ಈ ಮಹಿಳೆ. ಏಕೆ, ಒಂದು ಧಾರ್ಮಿಕ ಧ್ವಜ ವಿವಾದದ ಹೆಸರಲ್ಲಿ ದುಂಡಾವರ್ತಿಗಿಳಿದ ಕೆಲವರ ಹಿಂಸಾಚಾರಕ್ಕೆ ಇದು ಬಲಿಯಾಯಿತು. ಜುಲೈ 12ರಂದು ಬೆಂಗಳೂರಿನ ಕಾಡುಗೊಂಡನಹಳ್ಳಿಯಲ್ಲಿ ಇಂತಹ ನೋವಿನ ಘಟನೆಗಳು ಹಲವು. ಘರ್ಷಣೆಗಿಳಿದ ಕೋಮುಗಳಲ್ಲಿ ಎರಡಕ್ಕೂ ಸೇರದ ಹಿರಿಯನೊಬ್ಬನ ಬಲಿಯಾಯಿತು. ಕಾರಣ ಕೇವಲ ಧ್ವಜವಿವಾದ. ಈದ್ ವೇಳೆಗೆ ಹಾರಿಸಿದ ಧಾರ್ಮಿಕ ಧ್ವಜವನ್ನು ಕಂಡು ಈ ಬಾರಿ ಕೆಲವರಿಗೆ ಏನೋ ಅನಿಸಿತು. ಅದನ್ನು ಇಳಿಸಬೇಕು ಎಂದರು, ಇಳಿಸಲು ಸಾಧ್ಯವಿಲ್ಲ ಎಂದರು ಇನ್ನು ಕೆಲವರು. ಕೊನೆಗೆ ಏನೋ ಇತ್ಯರ್ಥವಾಯಿತು- ಭಾನುವಾರ ನಿರ್ದಿಷ್ಟ ಸಮಯಕ್ಕೆ ಅದನ್ನು ಇಳಿಸುವುದೆಂದು. ಅದಕ್ಕೆ ಒಂದು ಗಂಟೆ ಮೊದಲೆ ಗಲಭೆ ಆರಂಭವಾದವು ಎಂದು ತಿಳಿದು ಬಂದಿದೆ. ದೇಶದಲ್ಲೀಗ ಎಂತಹ ಅನಿಷ್ಟಕಾರಿ ಪರಿಸ್ಥಿತಿ ಏರ್ಪಟ್ಟಿದೆ ಎನ್ನುವುದಕ್ಕೆ ಇದು ಇನ್ನೊಂದು ಉದಾಹರಣೆ. ಯಾವ್ಯಾವೋ ಕಾರಣಗಳಿಗೆ ಜನಸಾಮಾನ್ಯರ ಬಲಿಯಾಗುತ್ತಿದೆ.

ಚರ್ಚುಗಳನ್ನು ಕುರಿತಂತೆ ದಿಲ್ಲಿ ಸರಕಾರದ ಕ್ರಮ ಸಿಟ್ಟಿಗೆಬ್ಬಿಸಿರುವ ಪ್ರಕರಣ

ಪೊಲಿಟ್‌ಬ್ಯೂರೋ ಖಂಡನೆ

ಚರ್ಚುಗಳನ್ನು ಪೂಜಾಸ್ಥಳಗಳ ಪಟ್ಟಿಯಿಂದ ತೆಗೆಯಬೇಕೆಂಬ ದಿಲ್ಲಿಯ ಬಿಜೆಪಿ ಸರಕಾರದ ಪ್ರಸ್ತಾವ ಒಂದು ಅತ್ಯಂತ ಅಸಹಿಷ್ಣು ಹಾಗೂ ಸಿಟ್ಟಿಗೆಬ್ಬಿಸುವ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಚರ್ಚುಗಳಲ್ಲಿ ಧಾರ್ಮಿಕ ಸಮಾರಂಭಗಳಲ್ಲಿ ಬಳಸಲು ವೈನ್ ಖರೀದಿಸಲು ಪರ್ಮಿಟ್ ಕೊಡಲಾಗುತ್ತಿದೆಯಾದ್ದರಿಂದ ಈ ಕ್ರಮ ಕೈಗೊಳ್ಳಲಾಗುತ್ತದೆ ಎಂದು ದಿಲ್ಲಿ ಸರಕಾರ ಹೇಳಿದ್ದಾಗಿ ವರದಿಯಾಗಿದೆ.

ಕ್ಯಾಥೋಲಿಕ್ ಧಾರ್ಮಿಕ ಆಚರಣೆಯ ಭಾಗವಾಗಿ ಸಾಂಕೇತಿಕವಾಗಿ ವೈನ್ ನೀಡಲಾಗುತ್ತದೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇದನ್ನು 'ಚರ್ಚುಗಳಲ್ಲಿ ವೈನ್ ಹಂಚಲಾಗುತ್ತದೆ' ಎಂದು ಹೇಳಿ ಆ ಕಾರಣಕ್ಕಾಗಿ ಚರ್ಚುಗಳನ್ನು ಪೂಜಾ ಸ್ಥಳಗಳಲ್ಲ ಎನ್ನುವುದು ಅದರ ಅತ್ಯಂತ ಹೀನ ಅಸಹಿಷ್ಣುತೆಯನ್ನು ಅಲ್ಪಸಂಖ್ಯಾತರ ಧಾರ್ಮಿಕ ಹಕ್ಕುಗಳನ್ನು ತುಳಿಯುವ ಅದರ ಮನೋಭಾವವನ್ನು ತೋರಿಸುತ್ತದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ದಿಲ್ಲಿಯ ರಾಜ್ಯ ಸರಕಾರ ತಕ್ಷಣ ಇಂತಹ ಯಾವುದೇ ಪ್ರಯತ್ನವನ್ನು ಕೈಬಿಡಬೇಕು ಹಾಗೂ ದಿಲ್ಲಿಯಲ್ಲಿ ಎಲ್ಲಾ ಕೋಮುಗಳ ನಾಗರಿಕರ ಹಕ್ಕುಗಳನ್ನು ರಕ್ಷಿಸುವ ಭರವಸೆ ನೀಡಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಧಾರ್ಮಿಕ ಕೋಮುಗಳಿಗೆ ತಂತಮ್ಮ ಧರ್ಮಗಳನ್ನು ಪ್ರತಿಪಾದಿಸುವ ಹಾಗೂ ಆಚರಿಸುವ ಸ್ವಾತಂತ್ರ್ಯವಿರುವಂತೆ ನೋಡಿಕೊಳ್ಳುವುದು ಪ್ರಭುತ್ವದ ಜವಾಬ್ದಾರಿ ಯೆಂದು ಭಾರತೀಯ ಸಂವಿಧಾನ ವಿಧಿಸಿದೆ ಎಂಬುದನ್ನು ಬಿಜೆಪಿ ನೆನಪಿಟ್ಟುಕೊಳ್ಳಬೇಕು ಎಂದಿದೆ.

ನಿಖಿಲ್ ಚಕ್ರವರ್ತಿ ನಿಧನ

ಹಿರಿಯ ಪತ್ರಕರ್ತ ನಿಖಿಲ್ ಚಕ್ರವರ್ತಿಯವರು ಜೂನ್ 22 ರಂದು ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು. ಭಾರತೀಯ ಪತ್ರಕಾರಿಕೆಗೆ ಒಂದು ಜನಪರ ಹಾಗೂ ಮೂರನೇ ಜಗತ್ತಿನ ಪರ ದಿಕ್ಕನ್ನು ನೀಡುವಲ್ಲಿ ನಿಖಿಲ್ ಚಕ್ರವರ್ತಿಯವರು ಒಂದು ಪ್ರಧಾನ ಪಾತ್ರ ವಹಿಸಿದವರು. ಅವರು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ನಿರ್ಭಯವಾಗಿ ಹೋರಾಡಿದರು. ಸಿಪಿಐ(ಎಂ) ಪರವಾಗಿ ನಿಖಿಲ ಚಕ್ರವರ್ತಿಯವರಿಗೆ ಅವರ ನಿವಾಸದಲ್ಲಿ ಪೊಲಿಟ್‌ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರನ್ ಪಿಳ್ಳೆ ಹಾಗೂ ಕೇಂದ್ರ ಸಮಿತಿ ಸದಸ್ಯರುಗಳಾದ ಬಿಪ್ಲವ್ ದಾಸ್ ಗುಪ್ತ ಮತ್ತು ಹರಿಸಿಂಗ್ ಕಂಗ್ ಶ್ರದ್ಧಾಂಜಲಿ ಅರ್ಪಿಸಿದರು.

ಲೋಕಸಂಚಾರ

ನೈಜೀರಿಯಾದಲ್ಲಿ ದಂಗೆ- ಮಿಲಿಟರಿ ಸರ್ಕಾರ ಪತನದ ಅಂಚಿನಲ್ಲಿ

ಶರತ್ ಚಂದ್ರ

ನೈಜೀರಿಯಾದಲ್ಲಿ ಮಿಲಿಟರಿ ಸರ್ವಾಧಿಕಾರಿ ಜನರಲ್ ಅಬಾಚಾ ನಿಧನದ ನಂತರದ ಒಂದು ತಿಂಗಳ ಅವಧಿಯಲ್ಲೇ ರಾಜಧಾನಿ ಲಾಗೋಸ್ನಲ್ಲಿ ಭಾರಿ ಬೀದಿ ದಂಗೆಗಳು ಆರಂಭವಾಗಿವೆ. ಜನರಲ್ ಅಬಾಚಾನಂತರ ಪ್ರಜಾಸತ್ತೆ ಪುನಃ ಸ್ಥಾಪಿಸಲ್ಪಡುತ್ತದೆ ಎಂಬ ನಿರೀಕ್ಷೆ ಹುಸಿಮಾಡಿ, ಜನರಲ್ ಅಬೂಬಕರ್ ಮುಂದುವರೆಸಿದ್ದ ಮಿಲಿಟರಿ ಸರ್ವಾಧಿಕಾರಿ ಸರ್ಕಾರ ಪತನದ ಅಂಚಿನಲ್ಲಿದೆ. ಇದಕ್ಕೆ ಕಾರಣ ವಿರೋಧ ಪಕ್ಷದ ನಾಯಕ ಮೊಶೂದ್ ಅಬಿಯೊಲಾರ ಅಕಾಲಿಕ ನಿಧನ. ಜೈಲಿನಲ್ಲಿ ಅವರ ಅಕಾಲಿಕ ನಿಧನಕ್ಕಾಗಿ ಪ್ರತಿಭಟಿಸಲು ಮತ್ತು ಮಿಲಿಟರಿ ಸರ್ಕಾರವನ್ನು ಅಪಾದಿಸಿ ಲಾಗೋಸ್‌ನಲ್ಲಿ ಬೀದಿ ದಂಗೆಗಳು ನಡೆದು 19ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಹಲವಾರು ಕಡೆ ದಂಗೆಕೋರರು ಸೈನ್ಯದ ಸಶಸ್ತ್ರ ತುಕಡಿಗಳೊಂದಿಗೆ ಕಾದಾಡಿದರು.

ಮೊಶೂದ್ ಅಭಿಯೋಲಾ ಗೌರವಾನ್ವಿತ ವಿರೋಧಿ ರಾಜಕಾರಣಿಯಾಗಿದ್ದು, 1993 ರ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದಿರುವವರು ಎಂದು ಸಾಮಾನ್ಯವಾಗಿ ನಂಬಲಾಗಿದೆ. ಅವರ ಚುನಾವಣೆಯನ್ನು ಅನೂರ್ಜಿತಗೊಳಿಸಿ, ಮೋಸದಿಂದ ಜನರಲ್ ಅಬಾಚ ಅಧಿಕಾರ ವಹಿಸಿಕೊಂಡಿದ್ದರು. ಅದರ ಒಂದು ವರ್ಷದ ನಂತರ ಆ ಚುನಾವಣೆಗಳ ಮೊದಲ ವಾರ್ಷಿಕದಂದು ತಾವೇ ನೈಜೀರಿಯಾದ ಅಧ್ಯಕ್ಷರು ಎಂದು ಘೋಷಿಸಿಕೊಂಡು ಮಿಲಿಟರಿ ಸರ್ವಾಧಿಕಾರಿ ಸರ್ಕಾರಕ್ಕೆ ಸವಾಲೊಡ್ಡಿದ್ದರು. ಆಗ ಅವರನ್ನು ಬಂಧಿಸಿ ರಾಜದ್ರೋಹ ಆಪಾದನೆ ಮೇಲೆ ಜೈಲಿನಲ್ಲಿಡಲಾಯಿತು. ಅಂದಿನಿಂದ ಅವರು ಜೈಲಿನಲ್ಲಿದ್ದು ಅವರ ಬಿಡುಗಡೆಗೆ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಪುನಃ ಸ್ಥಾಪನೆಗೆ ಒತ್ತಾಯ ಕೇಳಿಬರುತ್ತಿತ್ತು. ಜೈಲಿನಲ್ಲಿ ಪ್ರತ್ಯೇಕವಾಗಿ ಇಡಲಾದ ಅಬಿಯೊಲಾರ ಆರ್ಯೋಗ್ಯ ಹದಗೆಟ್ಟಿತ್ತು. ಅವರ ಖಾಸಗಿ ಡಾಕ್ಟರರಿಂದ ಚಿಕಿತ್ಸೆಗೆ ಅವಕಾಶಕ್ಕೆ ಅವರ ಕುಟುಂಬದವರು ಮಾಡಿದ ಮನವಿಯನ್ನು ಸರ್ಕಾರ ತಿರಸ್ಕರಿಸಿತ್ತು. ಸರ್ಕಾರ ಸಹ ಅವರ ಚಿಕಿತ್ಸೆಗೆ ಏನೂ ವ್ಯವಸ್ಥೆ ಮಾಡಿರಲಿಲ್ಲ. ಆದ್ದರಿಂದ ಅವರ ನಿಧನಕ್ಕೆ ಸರ್ಕಾರವೇ ಕಾರಣ ಮತ್ತು ಜವಾಬ್ದಾರಿ ಎಂದು ಅವರ ಕುಟುಂಬದವರ ಮತ್ತು ವಿರೋಧ ಪಕ್ಷದ ಬೆಂಬಲಿಗರ ವಾದ.

ಜನರಲ್ ಅಬೂಬಾಕರ್ ಸರ್ಕಾರ ಕೆಲವು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದ್ದರೂ ಅಬಿಯೊಲಾರ ಬಿಡುಗಡೆ ಮಾಡಿರಲಿಲ್ಲ. ಒಂದು ವಾರದ ಹಿಂದೆಯಷ್ಟೆ ವಿಶ್ವಸಂಸ್ಥೆ ಮಹಾ ಕಾರ್ಯದರ್ಶಿ ಕೋಫಿ ಅನ್ನನ್‌ರ ನಾಯಕತ್ವದಲ್ಲಿ ತಂಡವೊಂದು ನೈಜಾರಿಯಾ ಸರ್ಕಾರದೊಂದಿಗೆ ಚರ್ಚಿಸಲು ಲಾಗೋಸ್‌ಗೆ ಹೋಗಿತ್ತು. ಅಬಿಯೊಲಾರವರನ್ನು ಬಿಡುಗಡೆ ಮಾಡಿ ಚುನಾವಣೆಗೆ ಸಿದ್ಧತೆ ನಡೆಸುವಂತೆ ಮನವೊಲಿಸಲು ಪ್ರಯತ್ನಿಸಿತ್ತು. ಅಬಿಯೊಲಾರವರ ನಾಯಕತ್ವದಲ್ಲಿ ತಾತ್ಕಾಲಿಕ ಸರ್ಕಾರ ಚುನಾವಣೆ ನಡೆಸುವುದು ಹೆಚ್ಚು ಕಡಿಮೆ ಖಚಿತವಾಗಿತ್ತು. ಅಬಿಯೊಲಾರ ಬಿಡುಗಡೆ ಬಗೆಗೆ ಅವರ ಕುಟುಂಬದ ಜತೆ ಸರ್ಕಾರ ಮಾತುಕತೆ ಆರಂಭಿಸಿತ್ತು. 1993ರ ಚುನಾವಣೆಯನ್ನು ಮಿಲಿಟರಿ ಸರ್ಕಾರ ಕುಲಗೆಡಿಸಿತು ಎಂದು ಅಬಿಯೊಲಾ ಹೇಳಬಾರದು ಎಂಬುದು ಸರ್ಕಾರದ ಶರತ್ತಾಗಿತ್ತು. ಈ ಹಿನ್ನೆಲೆಯಲ್ಲಿ ಜೈಲಿನಲ್ಲಿ ಅಬಿಯೊಲಾರ ನಿಧನ ಅವರ ಬೆಂಬಲಿಗರ ಸಂಶಯಕ್ಕೆ ಆಸ್ಪದ ಮಾಡಿಕೊಟ್ಟಿದೆ. ಪ್ರಜಾಸತ್ತಾತ್ಮಕ ಸರ್ಕಾರಕ್ಕೆ ಅವಕಾಶ ಮಾಡುವುದನ್ನು ಮುಂದೂಡಲು ಸರ್ಕಾರ ಅಬಿಯೊಲಾರನ್ನು ವಿಷವುಣಿಸಿ ಕೊಂದಿದೆ, ಅಥವಾ ಆರೋಗ್ಯ ಸ್ಥಿತಿ ಹದಗೆಟ್ಟಿದ್ದನ್ನು ನಿರ್ಲಕ್ಷಿಸಿದೆ ಎಂಬ ಅವರ ಬೆಂಬಲಿಗರ ಸಂಶಯಕ್ಕೆ ನಡೆದ ಘಟನಾವಳಿ ಪುಷ್ಠಿ ನೀಡಿದೆ.

ಅಬಿಯೊಲಾರ ನಿಧನಾನಂತರ ನಡೆದ ಭಾರಿ ದಂಗೆಯ ನಂತರ ಜನರಲ್ ಅಬುಬಾಕರ್‌ರ 34 ಸದಸ್ಯರ ಮಂತ್ರಿ ಮಂಡಲ ರಾಜೀನಾಮೆ ನೀಡಿದೆ. ಆದರೆ ಪ್ರಭುತ್ವದ ಮುಖ್ಯ ಅಂಗವಾದ ತಾತ್ಕಾಲಿಕ ಆಳುವ ಮಂಡಳಿ (ಹೆಚ್ಚು ಕಡಿಮೆ ಪೂರ್ಣವಾಗಿ ಮಿಲಿಟರಿ ಮಂಡಳಿ)ಯನ್ನು ಬರಖಾಸ್ತು ಮಾಡಲಾಗಲಿಲ್ಲ.

ಪ್ಯಾಲೆಸ್ಟೈನ್ ಸ್ಥಾನ ಏರಿಸುವ ವಿಶ್ವಸಂಸ್ಥೆ ನಿರ್ಣಯ ಅಮೇರಿಕ, ಇಸ್ರೇಲಿಗಳಿಗೆ ಮತ್ತೊಮ್ಮೆ ಮುಖಭಂಗ

ಪ್ಯಾಲೆಸ್ಟೈನ್ ಮತ್ತು ಅರಬ್ ವಿಷಯದಲ್ಲಿ ಅಮೇರಿಕ ಮತ್ತು ಇಸ್ರೇಲಿಗಳ ಮಲತಾಯಿ ಧೋರಣೆ ಹಾಗೂ ಅಂತರಾಷ್ಟ್ರೀಯ ಒಂಟಿತನ ಇನ್ನೊಮ್ಮೆ ಬಯಲಾಗಿದೆ. ವಿಶ್ವಸಂಸ್ಥೆಯ ಸಾರ್ವತ್ರಿಕ ಸಭೆ ಭಾರಿ ಬಹುಮತದಿಂದ (ಹೆಚ್ಚುಕಡಿಮೆ ಸರ್ವಾನುಮತದಿಂದ) ಪ್ಯಾಲೆಸ್ಟೈನ್‌ನ್ನು ವೀಕ್ಷಕ ಸ್ಥಾನದಿಂದ ಮತದಾನದ ಹಕ್ಕಿಲ್ಲದ ಸದಸ್ಯ ದೇಶದ ಸ್ಥಾನಕ್ಕೆ ಏರಿಸಿದೆ.

ಇದನ್ನು ಅಮೇರಿಕ, ಇಸ್ರೇಲ್ ಮತ್ತು ಅಮೇರಿಕದ ಬಾಲಂಗೋಚಿ ದೇಶಗಳಾದ ಮೈಕ್ರೋನೇಶ್ಯಾ ಮಾರ್ಶಲ್ ದ್ವೀಪಗಳು ಮಾತ್ರ ವಿರೋಧಿಸಿವೆ. 10 ದೇಶಗಳು ಮತದಾನದಲ್ಲಿ ಭಾಗವಹಿಸಲಿಲ್ಲ.

ಇಸ್ರೇಲ್ ಈ ನಿರ್ಣಯವನ್ನು ಖಂಡಿಸಿ ಇದನ್ನು ತಾನು ಒಪ್ಪುವುದಿಲ್ಲ ಎಂದು ಉದ್ಧಟತನದ ಹೇಳಿಕೆ ನೀಡಿ ಅಂತರಾಷ್ಟ್ರೀಯ ಅಭಿಪ್ರಾಯವನ್ನು ತಾನು ಮನ್ನಿಸುವುದಿಲ್ಲ ಎಂದು ಸ್ಪಷ್ಟ ಪಡಿಸಿದೆ. ಅಮೇರಿಕ ಈ ನಿರ್ಣಯದಿಂದ ಮಧ್ಯ ಏಶ್ಯಾ ಶಾಂತಿ ಒಪ್ಪಂದದ ಜಾರಿಯಲ್ಲಿ ಅಡೆ ತಡೆ ಉಂಟಾಗುತ್ತದೆ, ಈ ನಿರ್ಣಯ ದುರದೃಷ್ಟಕರ ಎಂದು ಇಸ್ರೇಲ್ ಹಾಡನ್ನೇ ಬೇರೆ ರಾಗದಲ್ಲಿ ಹೇಳಿದೆ. ಶಾಂತಿ ಒಪ್ಪಂದಕ್ಕೆ ಅಡೆತಡೆ ಒಡ್ಡುತ್ತಿರುವುದು ಇಸ್ರೇಲ್‌ನ ಹಟಮಾರಿತನ ಎಂದು ಮರೆತುಬಿಟ್ಟಿದೆ.

ಈ ಹೊಸ ಸ್ಥಾನ ಮಾನದಿಂದಾಗಿ ಪ್ಯಾಲೆಸ್ಟೈನ್ ಮಧ್ಯ ಏಶ್ಯ ಶಾಂತಿ ಒಪ್ಪಂದದ ಬಗೆಗಿನ ವಿಷಯಗಳ ಬಗ್ಗೆ ಚರ್ಚೆಯನ್ನು ತಾನೆ ಎತ್ತಬಹುದು. ನಿರ್ಣಯಗಳನ್ನು ಬೇರೆ ಸದಸ್ಯರ ಜೊತೆ ಜಂಟಿಯಾಗಿ ಮಂಡಿಸಬಹುದು. ನಿರ್ಣಯಗಳ ಬಗೆಗಿನ ಮತದಾನದಲ್ಲಿ ಭಾಗವಹಿಸುವುದು ಬಿಟ್ಟರೆ ಉಳಿದ ಎಲ್ಲಾ ಸದಸ್ಯರ ಹಕ್ಕುಗಳು ಪ್ಯಾಲೆಸ್ಟೈನರಿಗೆ ಲಭಿಸಿದೆ. ಪ್ಯಾಲೆಸ್ಟೈನ್ ಮತ್ತು ಅರಬ್ ದೇಶಗಳಲ್ಲಿ ಈ ನಿರ್ಣಯವನ್ನು ಸ್ವಾಗತಿಸಲಾಯಿತು. 1974 ರಲ್ಲಿ ಪ್ಯಾಲೆಸ್ಟೈನ್ ವಿಮೋಚನಾ ಸಂಘಟನೆ (ಪಿ.ಎಲ್.ಓ) ಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವೀಕ್ಷಕ ಸ್ಥಾನ ನೀಡಲಾಗಿತ್ತು. 1988ರಲ್ಲಿ ಈ ವೀಕ್ಷಕ ಸ್ಥಾನದ ಹೆಸರನ್ನು ಪ್ಯಾಲೆಸ್ಟೈನ್ ಎಂದು ಬದಲಿಸಲಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

○

ಎಂಟನೇ ಕ್ಯೂಬಾ ಕ್ಯಾರವಾನ್ ಆರಂಭ

ಅಮೇರಿಕನ್ ಸರ್ಕಾರದ ಕ್ಯೂಬಾದ ಮೇಲಿನ ದಿಗ್ಬಂಧನವನ್ನು ಧಿಕ್ಕರಿಸಿ ಶಾಂತಿಗಾಗಿ ಧರ್ಮಗುರುಗಳು ಮತ್ತು ಸಮುದಾಯಕ್ಕಾಗಿ ಅಂತರ್ ಧಾರ್ಮಿಕ ಫೌಂಡೇಶನ್ ಎಂಬ ಸಂಘಟನೆಗಳು ಸೋಶಲಿಸ್ಟ್ ಕ್ಯೂಬಾಕ್ಕೆ ಅಗತ್ಯವಾದ ಸರಕುಗಳನ್ನು ಸಾಗಿಸಿವೆ. ಸಾಗಿಸಿವೆ ಮಾತ್ರವಲ್ಲ. ಈ ಸರಕು ಹತ್ತು ಲಾರಿಗಳ ಕ್ಯಾರವಾನ್ (ಒಂಟೆಗಳ ಸಾಲನ್ನು ಕ್ಯಾರವಾನ್ ಎನ್ನುತ್ತಾರೆ) ಅಮೇರಿಕದ ಪ್ರಮುಖ ನಗರಗಳಲ್ಲಿ ಆರಂಭವಾಗಿ ಹಲವು ಇತರ ಪ್ರಮುಖ ನಗರಗಳಮೂಲಕ ಹಾದು ಹೋಗುತ್ತಿದ್ದವು. ಹಾದಿಯಲ್ಲಿ ಹಲವು ಕ್ಯೂಬಾ ಸೌಹಾರ್ದತನಾ ರ್‍ಯಾಲಿಗಳನ್ನು ಸಂಘಟಿಸಲಾಗುತ್ತದೆ. ಈ ಕ್ಯಾರವಾನ್‌ಗಳನ್ನು ಸಾಗಿಸಲು ಅಮೇರಿಕದ ಸರ್ಕಾರದ ಲೈಸೆನ್ಸ್ ಕೇಳುವುದಿಲ್ಲ. ಅಮೇರಿಕದ ಅಧಿಕಾರಿಗಳು ಇದಕ್ಕೆ ಪ್ರತಿರೋಧ ಒಡ್ಡಿದಾಗ ಸ್ವಯಂಸೇವಕರು ಪ್ರತಿಭಟನೆ, ಪ್ರತಿರೋಧಕ್ಕೆ ತಯಾರಿರುತ್ತಾರೆ. 1996 ರಲ್ಲಿ ಇದೇ ರೀತಿ ಆದಾಗ 94 ದಿನದ ಉಪವಾಸ ಮುಷ್ಕರ ಹೂಡಿದ್ದರು. ಪ್ರತಿ ಬಾರಿಯೂ ಕ್ಯಾರವಾನ್ ಟೆಕ್ಸಾಸ್ ಪ್ರಾಂತ್ಯದಲ್ಲಿ ಮೆಕ್ಸಿಕೊಗೆ ಗಡಿ ದಾಟಿ, ಅವಶ್ಯಕ ಸರಕುಗಳನ್ನು ಕ್ಯೂಬಾಕ್ಕೆ ಕಳಿಸಲಾಗಿದೆ. ಕಳೆದ ಆರು ವರ್ಷಗಳಲ್ಲಿ ಸತತವಾಗಿ ಇಂತಹ ಏಳು ಕ್ಯಾರವಾನ್‌ಗಳು ಹೋಗಿವೆ. ಸುಮಾರು 1500 ಟನ್ನುಗಳಷ್ಟು ಸರಕುಗಳು ಕ್ಯೂಬಾ ತಲುಪಿವೆ. ಸ್ಕೂಲ್ ಬುಕ್‌ಗಳು ಪೆನ್ಸಿಲ್, ರಬ್ಬರ್, ಪೇಪರ್ ಇತರ ಶಾಲಾ ಸಮಗ್ರಿಗಳು ಆಸ್ಪತ್ರೆ ಹಾಸಿಗೆಗಳು, ಕಂಪ್ಯೂಟರ್‌ಗಳು ಪುಸ್ತಕಗಳು ಈ ಏಳು ಕ್ಯಾರವಾನ್ ಸಾಗಿಸಿರುವ ಸಾಮಗ್ರಿಗಳು, ಇವೆಲ್ಲಾ ಸರಕುಗಳನ್ನು ಕೊಟ್ಟಂತವರು ಅಮೇರಿಕದ ಪ್ರಜೆಗಳೇ. ಪ್ರತಿ ಕ್ಯಾರವಾನ್‌ನಲ್ಲಿ ಸರಕುಗಳ ಭಾರ ಹೆಚ್ಚುತ್ತಿದೆ.

ಈಗ ಈ ಎರಡು ಸಂಘಟನೆಗಳು ರೆವರೆಂಡ್ ಲೂಶಿಯಸ್ ವಾಕರ್ ನಾಯಕತ್ವದಲ್ಲಿ ಎಂಟನೇ ಕ್ಯಾರವಾನ್‌ಗೆ ಸಿದ್ಧವಾಗುತ್ತಿವೆ. ಇದು 500 ಟನ್ನುಗಳಷ್ಟು ಸಾಮಗ್ರಿಗಳನ್ನು ಕ್ಯೂಬಾಗೆ ಕಳಿಸಲಿದೆ.

ಜನರಲ್ ಮೋಟಾರ್ಸ್ ಮುಷ್ಕರ- ಅಮೇರಿಕದ ಎದೆ ಬಡಿತ ನಿಂತಿದೆ

ಈ ಹಿಂದೆ ಒಂದು ಮಾತಿತ್ತು, ಅಮೇರಿಕದ ಅತಿ ದೊಡ್ಡ ಕಂಪನಿ ಜನರಲ್ ಮೋಟಾರ್ಸ್ (ಜಿ.ಎಂ) ಬಗ್ಗೆ - 'ಯಾವುದು ಜನರಲ್ ಮೋಟಾರ್ಸ್‌ಗೆ ಒಳಿತೋ ಅದು ಅಮೇರಿಕಕ್ಕೂ ಒಳಿತು' ಅಂತ. ಇದೇ ಜೂನ್ 5 ರಂದು ಆರಂಭವಾದ ಜನರಲ್ ಮೋಟಾರ್ಸ್ ಕಾರ್ಮಿಕರ ಮುಷ್ಕರದಿಂದ ಜಿ.ಎಂ. ನ ಶೇಕಡಾ 88 ಉತ್ಪಾದನೆ ಸ್ಥಗಿತಗೊಂಡಿದೆ. ಹಾಗಿದ್ದರೆ ಅಮೇರಿಕದ ಎದೆ ಬಡಿತ ನಿಂತಿದೆ ಎನ್ನಬಹುದಲ್ಲವೇ? ಮಧ್ಯ ಜೂನ್ ಹೊತ್ತಿಗೆ ಜಿ.ಎಂ. ನ ಕಾರ್ಮಿಕರ ಯೂನಿಯನ್ ಯು.ಎ.ಡಬ್ಲ್ಯು (United Auto Workers) ನ 9200 ಸದಸ್ಯರು ಮುಷ್ಕರದಲ್ಲಿದ್ದರು. ಅವರ ಮುಷ್ಕರ 23 ಅಸೆಂಬ್ಲಿ ಘಟಕಗಳು 94 ಪಾರ್ಟ್ಸ್ ಘಟಕಗಳ ಕೆಲಸ ನಿಂತಿದೆ. ಇದರ ಫಲವಾಗಿ ಜಿ.ಎಂ.ನ ಅಮೇರಿಕ, ಕೆನಡಾ, ಮೆಕ್ಸಿಕೊ, ಸಿಂಗಾಪೂರಗಳಲ್ಲಿನ ಘಟಕಗಳಲ್ಲೂ ಕೆಲಸ ನಿಂತಿದೆ. ಒಂದು ಲಕ್ಷ ಕಾರ್ಮಿಕರ ಕೆಲಸ ನಿಂತಿದೆ. ಜಿ.ಎಂ. ಜಗತ್ತಿನ ವಾಹನಗಳ ಮಾರುಕಟ್ಟೆಯ ಮೂರನೇ ಒಂದು ಭಾಗ ಉತ್ಪಾದಿಸುತ್ತಿದೆ ಎಂದಾಗ ಈ ಮುಷ್ಕರದ ಆರ್ಥಿಕ ರಾಜಕೀಯ ಬಲ ಗೊತ್ತಾಗುತ್ತದೆ.

ಮುಷ್ಕರದ ಬೇಡಿಕೆಗಳಾದರೂ ಏನು? ಜಿ.ಎಂ. ಮ್ಯಾನೇಜ್‌ಮೆಂಟು 1991 ರಲ್ಲಿ ಯು.ಎ.ಡಬ್ಲ್ಯು ಜತೆ ಮಾಡಿದ ಒಪ್ಪಂದವನ್ನು ಉಲ್ಲಂಘಿಸಿದೆ. Flint Metal Centre ಎಂಬ ಜಿ.ಎಂ.ನ ಹಳೆಯ ಘಟಕವನ್ನು 500 ದಶಲಕ್ಷ ಡಾಲರು ಬಂಡವಾಳ ಹೂಡಿ ಆಧುನೀಕರಿಸುವ ಒಪ್ಪಂದವನ್ನು ಮುರಿದಿದೆ. ಈವರೆಗೆ ಕೇವಲ 120 ದಶಲಕ್ಷ ಡಾಲರು ಬಂಡವಾಳ ಹೂಡಿ ಹೆಚ್ಚಿನ ಬಂಡವಾಳ ಹೂಡಬೇಕಾದರೆ UAW ಜತೆ ಚೌಕಾಶಿ ಮಾಡುತ್ತಿದೆ. ಹೆಚ್ಚಿನ ಶರತ್ತುಗಳನ್ನು ಹಾಕುತ್ತಿದೆ. ಇನ್ನು ಹೆಚ್ಚಿನ ಬಂಡವಾಳ ಹೂಡಬೇಕಾದರೆ UAW ಕೆಲವು ಉತ್ಪಾದನಾ ಪ್ರಕ್ರಿಯೆಯಲ್ಲಿ ತನ್ನ ಪ್ರಸಕ್ತ ಪಾತ್ರ ಬಿಟ್ಟು ಕೊಡಬೇಕು (ಸುರಕ್ಷತೆ ಮುಂತಾದವು). ಅದೂ ಒಂದು ನೆಪಮಾತ್ರ. ಜಿ.ಎಂ. ತನ್ನ ಈ ಘಟಕವನ್ನು ಮೆಕ್ಸಿಕೊಕ್ಕೆ ಸ್ಥಳಾಂತರಿಸಲು ಇಚ್ಛಿಸಿದೆ ಎಂದು ಯೂನಿಯನ್‌ನ ಆರೋಪ. ಇದಲ್ಲದೆ ಜಿ.ಎಂ. ಹೆಚ್ಚಿನ ಜಾಣ್ಮೆ ಇಲ್ಲದ ಕೆಲಸಗಳಗೆ ಕಾಂಟ್ರಾಕ್ಟ್ ಲೇಬರ್ ಬಳಸುತ್ತದೆ. ಇದರಿಂದ 2500 ಜಿಎಂ UAW ಸದಸ್ಯರು ಕೆಲಸ ಕಳೆದುಕೊಂಡರೆ, 1995ರ ಒಪ್ಪಂದದಂತೆ Flint Metal Centreಗೆ 500 ದಶಲಕ್ಷ ಡಾಲರು ಬಂಡವಾಳ ಹೂಡಬೇಕು. ಮತ್ತು ಕಾಂಟ್ರಾಕ್ಟ್ ಲೇಬರ್ ಪದ್ಧತಿ ನಿಲ್ಲಿಸಬೇಕು. ಇದು ಎರಡು ಮುಷ್ಕರದ ಬೇಡಿಕೆಗಳು. ಬೇರೆ ಯಾವುದೇ ಆರ್ಥಿಕ ಬೇಡಿಕೆಗಳು ಇಲ್ಲ.

ಕಳೆದ ಎರಡು ದಶಕಗಳಲ್ಲಿ UAWನ 5.5 ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಇವರ ಕೆಲಸವೆಲ್ಲಾ ಹೋಯಿತು? ಜಿ.ಎಂ.ನ ಉತ್ಪಾದನೆ ಕಡಿಮೆಯಾಯಿತು? ಜಿ.ಎಂ. ನಷ್ಟದಲ್ಲಿದೆಯೆ?

ಕಳೆದ ಕೆಲವು ದಶಕದಲ್ಲಿ ಜಿ.ಎಂ.ನ ಜಾಗತಿಕ ವಾಹನ ಮಾರುಕಟ್ಟೆ ಪಾಲು ಅರ್ಧದಿಂದ ಮೂರನೇ ಒಂದು ಭಾಗಕ್ಕೆ ಇಳಿದಿದೆ. ಜಿ.ಎಂ. ತನ್ನ ಉತ್ಪಾದನೆಯನ್ನು ಮೆಕ್ಸಿಕೋ, ಕೆನಡಾ, ಸಿಂಗಾಪೂರಗಳಿಗೆ ವ್ಯಾಪಿಸಿದೆ. ಹೊಸ ಘಟಕಗಳಿಗೆ ಹೆಚ್ಚೆಚ್ಚು ಕಾಂಟ್ರಾಕ್ಟ್ ಬಳಸಿದೆ. ಆಧುನಿಕ ತಂತ್ರಜ್ಞಾನ ಬಳಸಿ ಒಂದು ಕಾರಿಗೆ ಬಳಸುವ ಶ್ರಮವನ್ನು ಶೇಕಡಾ 62 ರಷ್ಟು (39 ಗಂಟೆಗಳಿಂದ 24 ಗಂಟೆಗಳಿಗೆ) ಇಳಿಸಿದೆ. 1979 ರಿಂದ 1990ರವರೆಗೆ ಅಮೇರಿಕದ ಒಂದೂವರೆ ಲಕ್ಷ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದೆ. ಆ ಕೆಲಸವನ್ನು ಮೇಕ್ಸಿಕೋದ ಹೊಸ ಘಟಕಗಳಿಗೆ ಸ್ಥಳಾಂತರಿಸಿದೆ. ಆದ್ದರಿಂದ ಜಿಎಂ.ನ ಲಾಭವೇನೂ ಕಡಿಮೆಯಾಗಿಲ್ಲ. 1991ರ ಅದರ ಲಾಭ 690 ಕೋಟಿ ಡಾಲರುಗಳು. ನಿಕರಾಗುವದ ಒಟ್ಟು ಉತ್ಪಾದನೆಯ ನಾಲ್ಕುಪಟ್ಟು. ಈ ಉದ್ಯೋಗ ರಹಿತ ಬೆಳವಣಿಗೆಯ ವಿರುದ್ಧವೇ UAWನ ಚಾರಿತ್ರಿಕ ಮುಷ್ಕರ- ಅಮೇರಿಕದ ಬಂಡವಾಳಶಾಹಿಯ ಎದೆ ಬಡಿತ ನಿಲ್ಲಿಸ ಬಲ್ಲುದೇ ಇದು?

ಕತ್ತಲು ಕವಿದ ವರ್ಷಗಳು

ಪುಟ 2 ರಿಂದ

ಆ ಜೈಲಿನ ಸಾಮಾನ್ಯ ವಿಭಾಗದಲ್ಲಿದ್ದ ಹಲವರನ್ನು ನಮ್ಮ ವಿಭಾಗಕ್ಕೆ ಸ್ಥಳಾಂತರಿಸಲಾಯಿತು. ಜೈಲಿನ ಸಾಮಾನ್ಯ ವಿಭಾಗ ಸೆಕ್ಷನ್ ಬಿ ಯಿಂದ ಬಹಳ ದೂರವಿರಲಿಲ್ಲ. ಅದನ್ನು ಸೆಕ್ಷನ್ ಎಫ್ ಮತ್ತು ಜಿ ಎಂದು ಬರೆಯುತ್ತಿದ್ದರು. ಅಲ್ಲಿ ಸುಮಾರು ಸಾವಿರ ಕೈದಿಗಳಿದ್ದರು. ಹೆಚ್ಚಿನವರು ಅದರಲ್ಲಿ ಸಾಮಾನ್ಯ ಕೈದಿಗಳಿದ್ದರು. ಕಾಲು ಭಾಗ ಮಾತ್ರ ಅಲ್ಲೂ ರಾಜಕೀಯ ಕೈದಿಗಳಿದ್ದರು. ಅದರಲ್ಲಿ ಕೆಲವರನ್ನು ಸೆಕ್ಷನ್ ಬಿ ಗೆ ಸ್ಥಳಾಂತರಿಸಲಾಯಿತು. ನಮ್ಮನ್ನು ಸಾಮಾನ್ಯ ಕೈದಿಗಳಿಂದ ಎರಡು ಕಾರಣಗಳಿಂದ ಪ್ರತ್ಯೇಕಿಸಲಾಗಿತ್ತು. ಭದ್ರತೆ ಹಾಗೂ ರಾಜಕೀಯ ದೃಷ್ಟಿಗಳಿಂದ ನಮ್ಮನ್ನು ಅಪಾಯಕಾರಿ ಎಂದು ಪರಿಗಣಿಸಲಾಗಿತ್ತು. ಇತರೇ ಕೈದಿಗಳಲ್ಲಿ ನಮ್ಮ ರಾಜಕೀಯ ಬಿತ್ತಬಹುದೆಂಬುದು ಅಧಿಕಾರಿಗಳ ಆತಂಕ.

ನಮ್ಮನ್ನು ಸೆಕ್ಷನ್ 'ಬಿ' ನಲ್ಲಿ ಸೇರಿದವರಲ್ಲಿ ಜಾರ್ಜ್ ಪೀಕ್ ಒಬ್ಬ. ಆತ ದಕ್ಷಿಣ ಆಫ್ರಿಕಾ ಬಿಳಿಯರಲ್ಲದ ಜನರ ಸಂಘಟನೆ (South African Coloured Peoples' Organisation) ಯ ಸ್ಥಾಪಕರಲ್ಲಿ ಒಬ್ಬನಾಗಿದ್ದ. ಇತ್ತೀಚೆಗೆ ಕೇಪ್‌ಟೌನ್ ನಗರ ಮಂಡಳಿಯ ಸದಸ್ಯನಾಗಿ ಆಯ್ಕೆಯಾಗಿದ್ದ. ಆತನೂ 'ದೇಶದ್ರೋಹ'ದ ಮೊಕದ್ದಮೆಯಲ್ಲೂ ನಮ್ಮ ಜತೆ ಆಪಾದಿತನಾಗಿದ್ದ. ಅದೇ ಸಂಘಟನೆಯ ಇನ್ನೊಬ್ಬ ಡೆನ್ನಿಸ್ ಬ್ರೂಟಸ್ ಸಂಘಟಕ ಮಾತ್ರವಲ್ಲದೆ ಕವಿ, ಲೇಖಕ. ಆತನನ್ನು ಆತನ ಮೇಲೆ ಹೇರಿರುವ ನಿಷೇಧಗಳನ್ನು ಉಲ್ಲಂಘಿಸಿದ್ದಕ್ಕೆ ಬಂಧಿಸಲಾಗಿತ್ತು. ನಾಟಾಲ್ ಇಂಡಿಯನ್ ಕಾಂಗ್ರೆಸ್‌ನ ದೀರ್ಘ ಕಾಲೀನ ಸದಸ್ಯ ಹಾಗೂ ಎ.ಎನ್.ಸಿ.ಯ ಸಶಸ್ತ್ರ ಹೋರಾಟದ ಸಂಘಟನೆ ಎಂ.ಕೆ.ಯ ಸದಸ್ಯನಾಗಿದ್ದ ಬಿಲ್ಲಿ ನಾಯರ್ ನಮ್ಮ ಗುಂಪು ಸೇರಿದ ಇನ್ನೊಬ್ಬ.

(ಮುಂದುವರಿಯುವುದು)



"ಬದುಕಿನ ಹಕ್ಕನ್ನು ರಕ್ಷಿಸಿ"

ಬಿಕ್ಕಟ್ಟು ಪೀಡಿತ ದಕ್ಷಿಣ ಕೋರಿಯಾದಲ್ಲೊಂದು ಸರ್ಕಾರ-ವಿರೋಧಿ ರ್‍ಯಾಲಿ. ಕೆಲಸದ ಭದ್ರತೆಗಾಗಿ ಆಗ್ರಹಿಸುತ್ತಿರುವ ಈ ಕಾರ್ಮಿಕರು ಲೇ ಆಫ್‌ಗಳನ್ನು ವಿರೋಧಿಸಿ ಘೋಷಣೆ ಕೂಗುತ್ತಿದ್ದಾರೆ. ಮುಖ್ಯ ಬ್ಯಾನರ್ ಕೂಗುತ್ತಿದೆ 'ನಮ್ಮ ಬದುಕಿನ ಹಕ್ಕನ್ನು ಕಾಪಾಡಿ' ಸುಮಾರು 60 ಸಾವಿರ ಕಾರ್ಮಿಕರು ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಫ್ರಾನ್ಸಿನ ರಾಜಧಾನಿ ಪ್ಯಾರಿಸಿನಲ್ಲಿ ಒಂದು ತಿಂಗಳಿಂದ ವಿಶ್ವದೆಲ್ಲೆಡೆ ಗಮನ ಸೆಳೆದ 1998 ರ ವಿಶ್ವ ಫುಟ್‌ಬಾಲ್ ಪಂದ್ಯಾಟಗಳ ಒಂದು ವರದಿ -





ಫ್ರಾನ್ಸ್ ಫುಟ್‌ಬಾಲ್ ವಿಶ್ವವಿಜೇತರು

ಒಂದು ತಿಂಗಳ ತೀವ್ರ ಸ್ಪರ್ಧೆ ಜುಲೈ 12 ರಂದು ಮುಗಿಯಿತು. ಸ್ಪರ್ಧೆ ನಡೆದದ್ದು ಫುಟ್‌ಬಾಲ್ ವಿಶ್ವ ಕಪ್ ಜುಲೆಸ್ ರಿಮೆಟ್ ಟ್ರೋಫಿಗಾಗಿ ಮಾತ್ರವಲ್ಲ, ಅದಕ್ಕಿಂತಲೂ ಬಹಳ ದೊಡ್ಡದಾದ ಸ್ಪರ್ಧೆ. ರಾಷ್ಟ್ರೀಯ ಹೆಮ್ಮೆಯ ಸ್ಪರ್ಧೆ-ಜನಾಂಗೀಯ ಹೆಮ್ಮೆಯ ಸ್ಪರ್ಧೆಯಲ್ಲ, ರಾಷ್ಟ್ರೀಯ ಹೆಮ್ಮೆಯ ಸ್ಪರ್ಧೆ. ಯುರೋಪ್, ಅಮೆರಿಕಾ, ಆಫ್ರಿಕಾ ಹಾಗೂ ಏಶ್ಯಾ ಖಂಡಗಳ ಮೂವತ್ತೆರಡು ದೇಶಗಳು ಭಾಗವಹಿಸಿದ್ದವು. ಕೊನೆಗೆ ಅತಿಥೇಯ ದೇಶ ಫ್ರಾನ್ಸ್ ಫುಟ್‌ಬಾಲ್‌ನ ವಿಶ್ವವಿಜೇತರಾದರು.

ಫ್ರಾನ್ಸ್‌ನ ಈ ವಿಜಯ ಆಟದಲ್ಲಿ ಮಾತ್ರವಲ್ಲ, ರಾಜಕೀಯದಲ್ಲೂ ಮಹತ್ವಪೂರ್ಣವಾದದ್ದು. ಇತ್ತೀಚಿನ ದಿನಗಳಲ್ಲಿ ಜನಾಂಗೀಯ ಘರ್ಷಣೆಗಳಿಂದ ಹಿಗ್ಗುಮುಗ್ಗಾದ ದೇಶ ಫ್ರಾನ್ಸ್ ತನ್ನ ಬಹು-ಜನಾಂಗೀಯ ಫುಟ್‌ಬಾಲ್ ತಂಡದ ವಿಜಯುವನ್ನು ಅತ್ಯುತ್ಸಾಹದಿಂದ ಆಚರಿಸಿತು. ಫ್ರಾನ್ಸ್ ಫೈನಲ್‌ಗೆ ಬರಲು ಕಾರಣವಾದದ್ದು ಕೆರೇಬಿಯನ್ ದ್ವೀಪಗಳಿಂದ ವಲಸೆ ಬಂದು ಫ್ರಾನ್ಸ್‌ನಲ್ಲಿ ನೆಲೆಸಿದ ಲಿಲಿಯನ್ ಥುರಂ ಒದೆದ ಗೋಲು. ಅದು ವಿಶ್ವಕಪ್ ಗೆಲ್ಲುವಂತಹ ಗೋಲ್‌ಗಳನ್ನು ಹೊಡೆದಾತ ಅಲ್ಜೀರಿಯಾ ದಿಂದ ವಲಸೆ ಬಂದ ಒಬ್ಬ ಬಡ ವಾಚ್ ಮನ್‌ನ ಮಗ ಝಿನೆದಿನ್ ಝಿದಾನೆ. ಪ್ರಥಮ ಬಾರಿಗೆ ಫೈನಲ್ ತಲುಪಿದ ಫ್ರಾನ್ಸಿನ ತಂಡ ವಿಶ್ವವಿಜೇತರಾದದ್ದು ಹೇಗೆ? ಸಾಮರಸ್ಯ, ಸಾಮೂಹಿಕ ಶ್ರಮ ಹಾಗೂ ತೀವ್ರ ರಾಷ್ಟ್ರೀಯ ಹೆಮ್ಮೆಯ ಫಲ ಇದು ಎನ್ನಲಾಗುತ್ತಿದೆ. ವಿಶ್ವಕ್ಕೆ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಉನ್ನತ ಧ್ಯೇಯಗಳನ್ನು ನೀಡಿದ ದೇಶ ಈಗ ತನ್ನ ಫುಟ್‌ಬಾಲ್ ತಂಡದ ಮಾದರಿ ಯನ್ನನುಸರಿಸಿ ಜನಾಂಗ, ಧರ್ಮಗಳ ಭೇದಬಾವವಿಲ್ಲದ ಕಾರ್ಮಿಕ ವರ್ಗದ ಐಕ್ಯತೆಯನ್ನು ಬೆಸೆದು ದುಡಿಯುವ ಜನಗಳ ವಿಮೋಚನೆಯ ಒಂದು ಬಲಿಷ್ಠ ಆಂದೋಲನವನ್ನು ಮತ್ತೆ ಕಟ್ಟ ಬಹುದೇ? ಜನಾಂಗೀಯ ಗಲಭೆಗಳು ಎಷ್ಟೆಂದರೂ ತೀವ್ರ ಆರ್ಥಿಕ ಬಿಕ್ಕಟ್ಟಿನ ಫಲಗಳು ತಾನೇ.

ವಿಶ್ವಕಪ್ 1998ರಲ್ಲಿ ಪ್ರದರ್ಶನ ಗೊಂಡ ವೈಯಕ್ತಿಕ ಹಾಗೂ ಸಾಮೂಹಿಕ ಪ್ರತಿಭೆ ಸದಾ ಸ್ಮರಣೀಯ. ಕಾಲುಗಳಲ್ಲಿ ಚೆಂಡನ್ನು ಕುಣಿಸುತ್ತಾ ಗೋಲಿನತ್ತ ಧಾವಿಸುವ ಬ್ರೆಝಿಲ್‌ನ ರೋನಾಲ್ಡೋನ ಧಾವಂತ, ಫ್ರಾನ್ಸ್‌ನ ಝಿನೆದಿನ್ ಝಿದಾನೆನ ಕಲಾತ್ಮಕ ಆಟ, ಕ್ರೊವೇಷಿಯಾದ ದಾವೊರ್ ಸುಕರ್ ಉತ್ಕೃಷ್ಟತೆ, ಗೋಲ್ ಬಾರಿಸುವ ಹಾಲೆಂಡ್‌ನ ಬರ್ಗ್‌ಕೆಂಪ್‌ನ, ಅರ್ಜೆಂಟೀನಾದ ಬಟಿಸ್ತುತಾನ ಸಾಮರ್ಥ್ಯ, ಗೋಲ್ ಹೊಡೆಯದಂತೆ ರಕ್ಷಣೆಯ ಆಟದಲ್ಲಿ ಇಟಲಿಯ ಪಾಲೋ ಮಾಲ್ದಿನಿಯ ಭದ್ರಕೋಟೆ ಇವೆಲ್ಲಾ ಈ ಸ್ಪರ್ಧೆಯ ಅವಿಸ್ಮರಣೀಯ ದೃಶ್ಯಗಳು. ಕ್ರೋವೇಶಿಯಾ ಈ ಟೂರ್ನಮೆಂಟಿನ ತಂಡ ಎಂಬ ಹೆಸರು ಪಡೆಯಿತು. ಮೊತ್ತಮೊದಲ ಬಾರಿ ಭಾಗವಹಿಸಿದ, ಅಂತರಿಕ ಯುದ್ಧದಿಂದ ತತ್ತರಿಸುತ್ತಿರುವ ಈ ಪುಟ್ಟ ದೇಶ ತನ್ನ ಉತ್ಕೃಷ್ಟ ಆಟದಿಂದ ಮೂರನೇ ಸ್ಥಾನ ಗಳಿಸಿತು. ಆ ತಂಡದ ಸುಕರ್ ಅತಿ ಹೆಚ್ಚು ಗೋಲು ಹೊಡೆದು ಗ್ೋಲ್ಡನ್ ಬೂಟ್(ಚಿನ್ನದ ಬೂಟು) ಪ್ರಶಸ್ತಿ ಗಳಿಸಿದ. ನೆದರ್‌ಲ್ಯಾಂಡ್, ಡೆನ್ಮಾರ್ಕ್ ಹಾಗೂ ಮೆಕ್ಸಿಕೊ ಕೂಡಾ ಉತ್ತಮ ಪ್ರದರ್ಶನ ನೀಡಿದವು. ಆದರೆ ಅದೃಷ್ಟ ಒಲಿಯಲಿಲ್ಲ.

ಈ ವಿಶ್ವಕಪ್ ತಂದ ಒಂದು ನಿರಾಸೆಯೆಂದರೆ ಪ್ರಖ್ಯಾತ ಆಟಗಾರ ರೊನಾಲ್ಡೋ ಹಾಗೂ ಆತನ ಬ್ರೆಝಿಲ್ ತಂಡದ ನಿರೀಕ್ಷೆ ತಲುಪದ ಪ್ರದರ್ಶನ. ಅದು ಫೈನಲ್ ಹಂತವನ್ನೇನೋ ತಲುಪಿತು. ಆದರೆ ಆರಂಭದಿಂದಲೂ. ಅದರ ಪ್ರದರ್ಶನ ಆಕರ್ಷಕವಾಗಿಯೇನೂ ಇರಲಿಲ್ಲ. ಇಟಲಿಯ ದೆಲ್ ಪಿಯೆರೋ ಕೂಡಾ ನಿರಾಸೆ ಉಂಟು ಮಾಡಿದ. ಸ್ಪೇನ್, ಇಟಲಿ, ಜರ್ಮನಿ ಮತ್ತು ಇಂಗ್ಲೆಂಡಿನ ತಂಡಗಳೂ ತಮ್ಮ ಅಭಿಮಾನಿಗಳಿಗೆ ನಿರಾಸೆ ತಂದರು.

ಮೊತ್ತ ಮೊದಲ ಬಾರಿಗೆ ಏಶ್ಯಾದಿಂದ ನಾಲ್ಕು ತಂಡಗಳು, ಆಫ್ರಿಕಾದಿಂದ ಐದು ತಂಡಗಳು ವಿಶ್ವ ಕಪ್ ಪಂದ್ಯಾಟಗಳಲ್ಲಿ ಭಾಗವಹಿಸಿದವು. ಅಪಾರ ಚಾಕಚಕ್ಯತೆಯನ್ನು ತೋರಿದರೂ ದೈಹಿಕ ಸಾಮರ್ಥ್ಯ ಅಗತ್ಯ ಮಟ್ಟದಲ್ಲಿರಲಿಲ್ಲ. ನೈಜಿರಿಯಾ ಸ್ವಲ್ಪ ಮಿಂಚಿತು. ಇರಾನ್ ಅಮೆರಿಕಾವನ್ನು ಸೋಲಿಸಿ 'ಎಲ್ಲಾ ಸಮರಗಳ ಮಾತೆ'ಯೆನಿಸಿದ ಸಮರದಲ್ಲಿ ಗೆದ್ದಿತು. ಈ ದೇಶಗಳು ಮತ್ತು ಫುಟ್‌ಬಾಲ್‌ನಲ್ಲಿ ಇದುವರೆಗೆ ಅತಿರಥ-ಮಹಾರಥರೆನಿಸಿದ ಯುರೋಪ್ ಮತ್ತು ಲ್ಯಾಟಿನ್ ಅಮೆರಿಕಾದ ನಡುವಿನ ಪ್ರತಿಭೆಗಳ ಅಂತರ ಕಮ್ಮಿಯಾಗುತ್ತಿರುವುದನ್ನು ಈ ಪಂದ್ಯಾಟಗಳಲ್ಲಿ ಕಾಣಬಹುದಾಗಿತ್ತು. ಮುಂದಿನ ವಿಶ್ವಕಪ್ ಪಂದ್ಯಾಟವನ್ನು ಜಪಾನ್ ಮತ್ತು ದಕ್ಷಿಣ ಕೋರಿಯಾ ಜಂಟಿಯಾಗಿ ನಡೆಸಲಿವೆ. ಇದು ಏಶ್ಯದ ದೇಶಗಳು ಇನ್ನೂ ಉತ್ತಮ ಪ್ರದರ್ಶನ ನೀಡುವ ಸ್ಫೂರ್ತಿ ಒದಗಿಸಬಹುದು.

ಫುಟ್‌ಬಾಲ್‌ನ ಸರ್ವೋಚ್ಚ ಪದವಿ ಪಡೆಯುವುದು ಸುಲಭದ ಕೆಲಸವೇನಲ್ಲ. 140 ಕ್ಕೂ ಹೆಚ್ಚು ದೇಶಗಳು ವರ್ಷಾನುಗಟ್ಟಲೆ ಈ ವಿಶ್ವಕಪ್ ಪಂದ್ಯಾಟದಲ್ಲಿ ಭಾಗವಹಿಸುವ ಅರ್ಹತೆ ಪಡೆಯಲೇ ಶ್ರಮಿಸಬೇಕಾಗುತ್ತದೆ. ಈಗ ಹಲವಾರು ದೇಶಗಳಲ್ಲಿ ಫುಟ್‌ಬಾಲ್ ಒಂದು ರಾಷ್ಟ್ರೀಯ ವಿಷಯವಾಗಿ ಬಿಟ್ಟಿದೆ. ಕೆಲವೆಡೆ ಅದು ಧರ್ಮದ ಸ್ಥಾನವನ್ನೂ ಗಳಿಸಿದೆ. ಮಾನವ ಕೌಶಲ್ಯದ ಅತ್ಯುನ್ನತ ಸಾಧನೆಯೆಂದರೆ ಫುಟ್ ಬಾಲ್ ಎಂಬುದು ಈಗ ಈ ದೇಶಗಳಲ್ಲಿ ಹಲವರ ನಂಬಿಕೆ.

ಭಾರತದಲ್ಲೂ ಫುಟ್‌ಬಾಲ್ ಬಗ್ಗೆ ಹುಚ್ಚು ಬೇರೆಡೆಗಿಂತ ಕಮ್ಮಿಯೇನಿಲ್ಲ ಎಂಬುದೂ ಈ ಪಂದ್ಯಾಟಗಳ ವೇಳೆಯಲ್ಲಿ ಕಂಡುಬಂತು. ಈ ಒಂದು ತಿಂಗಳಲ್ಲಿ ಕಂಡು ಬಂದ ಉತ್ಸಾಹ ಅಪಾರ-ಕಲ್ಕತ್ತೆಯಲ್ಲಿ ಫುಟ್‌ಬಾಲೇ ಜೀವನ ವಾಗಿಬಿಟ್ಟಿತ್ತು. ಕೆಲವು ಭಾರತೀಯರಂತೂ ಕೇಳುತ್ತಿದ್ದಾರೆ - ಮುಂದಿನ ವಿಶ್ವಕಪ್ ಪಂದ್ಯಾಟದಲ್ಲಿ ಭಾರತ ಭಾಗವಹಿಸುವುದು ನಾವು ನೋಡಬಹುದೇ? ಅದೇನು ಅಸಾಧ್ಯ ಕನಸಲ್ಲ. ಅಹ್ಮದ್ ಖಾನ್, ಜರ್ನೈಲ್ ಸಿಂಗ್ ಹಾಗೂ ಪಿ.ಕೆ. ಬ್ಯಾನರ್ಜಿಯವರಂತಹ ಸದಾ ಸ್ಮರಣೀಯ ಫುಟ್‌ಬಾಲ್ ಆಟಗಾರರನ್ನು ಕೊಟ್ಟ ದೇಶವಲ್ಲವೇ ಇದು. ಈಗ ಅದು ಸಂಕಟಾವಸ್ಥೆ ಯಲ್ಲಿದ್ದರೆ ಅದಕ್ಕೆ ಕಾರಣ ಸರಕಾರೀ ನಿರ್ಲಕ್ಷ್ಯ ಮತ್ತು ರಾಜಕೀಯ ಅಲ್ಪತನ. ಕ್ರೀಡೆಗಳ ಬಗ್ಗೆ, ಅವುಗಳ ನಿರ್ವಹಣೆಯ ಬಗ್ಗೆ ಒಂದು ಗಂಭೀರ ರಾಷ್ಟ್ರೀಯ ಚರ್ಚೆ ನಡೆಯಬೇಕಾಗಿದೆ. ಸರಕಾರ ಫುಟ್‌ಬಾಲನ್ನು ಪ್ರೋತ್ಸಾಹಿಸಲು ಪ್ರಾಮಾಣಿಕ ವಾಗಿ ಮಧ್ಯಪ್ರವೇಶಿಸಿ ದರೆ ನಮ್ಮ ಕನಸು ನನಸಾಗುವುದು ಕಷ್ಟವೇನಲ್ಲ. ಇಂದು ಮಾತ್ರ ಈ ನಿರೀಕ್ಷೆಯಲ್ಲೇ ಬದುಕಿದ್ದೇವೆ.

- ಅಮಾನುಲ್ಲಾ ಖಾನ್



ಕಾಲುಗಳಲ್ಲಿ ಚೆಂಡನ್ನು ಕುಣಿಸುತ್ತಾ ಗೋಲಿನತ್ತ ಧಾವಿಸುವ ರೊನಾಲ್ಡೋ

ಉತ್ಕೃಷ್ಟತೆಯನ್ನು ಮೆರೆದ ಕ್ರೋವೇಷಿಯಾದ ಸುಕರ್



ಕಲಾತ್ಮಕ ಆಟ ಪ್ರದರ್ಶಿಸಿದ ಫ್ರಾನ್ಸಿನ ಝಿದಾನೆ



ಬಿಜೆಪಿ ಸರಕಾರದ ಮತ್ತೊಂದು ಕೋಮುವಾದಿ ಕ್ರಮ

ಭಾರತೀಯ ಇತಿಹಾಸ ಮಂಡಳಿಯಲ್ಲಿ ವಿ.ಹೆಚ್.ಪಿ. ಬೆಂಬಲಿಗರನ್ನು ತುಂಬಿ, ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ನೈತಿಕ ಶಿಕ್ಷಣದ ಹೆಸರಲ್ಲಿ ವಿಚ್ಛಿದ್ರಕಾರಿ ಹಾಗೂ ಮತಾಂಧತೆಯನ್ನು ಬೋಧಿಸಹೊರಟ ಬಿಜೆಪಿ ಚರ್ಚುಗಳಲ್ಲಿ ವೈನಿನ ಹೆಸರಲ್ಲಿ ಕೆಂಗಣ್ಣು ಹಾಕಿದ ನಂತರ ಈಗ ಪ್ರಖ್ಯಾತ ಕಲಾವಿದ ಎಂ.ಎಫ್.ಹುಸೇನರ ವಿರುದ್ಧ ಖಾಸಗೀ ಕ್ರಿಮಿನಲ್ ದೂರನ್ನು ಗಮನಕ್ಕೆ ತಗೊಂಡು ವಿಚಾರಣೆ ನಡೆಸಲು ಅನುಮತಿ ನೀಡಿದೆ. ಇದನ್ನು 'ಸಹಮತ್' ಬಲವಾಗಿ ಖಂಡಿಸಿದೆ. ಚರ್ಚ್‌ಗಳನ್ನು ಪೂಜಾಸ್ಥಳಗಳ ಪಟ್ಟಿಯಿಂದ ತೆಗೆಯುವ ದಿಲ್ಲಿ ಬಿಜೆಪಿ ಸರಕಾರ ಯೋಜನೆಯ ಸುದ್ದಿಯು ಹಿಂದೆಯೇ ಬಂದಿರುವ ಈ ಸುದ್ದಿ ಬಿಜೆಪಿಯ ಕೋಮುವಾದಿ ಅಜೆಂಡಾ ಹೇಗೆ ಪ್ರಕಟಗೊಳ್ಳುತ್ತಿದೆ ಎಂಬುದಕ್ಕೆ ಇನ್ನೊಂದು ಉದಾಹರಣೆ ಎಂದು ಅದು ಹೇಳಿದೆ. ದಿಲ್ಲಿ ಪೋಲೀಸರಿಗೆ ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಕೇಂದ್ರ ಸಂಪುಟ ಮತ್ತು ಗೃಹಮಂತ್ರಿ ಅಡ್ವಾಣಿಯವರು ಮಾತ್ರ ಅನುಮತಿ ಕೊಡಲು ಸಾಧ್ಯ ಎಂಬುದು ಸ್ಪಷ್ಟ. ಈ ನಿರ್ಧಾರ ನಿಜಕ್ಕೂ ಆಶ್ಚರ್ಯಕಾರಿ. ಏಕೆಂದರೆ ಹಲವು ಕೇಂದ್ರ ಮಂತ್ರಿಗಳು, ನಿರ್ದಿಷ್ಟವಾಗಿ ರಾಮಕೃಷ್ಣ ಹೆಗಡೆ ಸಂಘ ಪರಿವಾರದವರು ಎಂ.ಎಫ್.ಹುಸೇನರ ಮೇಲೆ ನಡೆಸಿದ ಹಲ್ಲೆಗಳನ್ನು ಬಹಿರಂಗ ವಾಗಿಯೇ ವಿರೋಧಿಸಿದ್ದರು ಎಂದು ಸಹಮತ್ ನೆನಪಿಸಿದೆ.

ಎರಡು ದಶಕಗಳಿಗೂ ಹೆಚ್ಚುಕಾಲ ಸಾರ್ವಜನಿಕವಾಗಿ ಪ್ರದರ್ಶನಗೊಂಡಿದ್ದ ಒಂದು ಕಲಾಕೃತಿಗಾಗಿ ಒಬ್ಬ ಕಲಾವಿದನ ವಿರುದ್ಧ ಕ್ರಿಮಿನಲ್ ಕ್ರಮ ಕೈಗೊಳ್ಳಲು ಅನುಮತಿ ನೀಡಿರುವ ಮೂಲಕ ಸೃಜನಶೀಲತೆಯ ಮೇಲೆ ಹಿಂದಿನಿಂದಲೇ ಜಾರಿಗೆ ಬರುವ ಒಂದು ಸೆನ್ಸಾರ್‌ಶಿಪ್‌ನ್ನು ಸಂಘ ಪರಿವಾರ ಹೇರುತ್ತಿದೆ ಎಂಬುದು ಸ್ಪಷ್ಟ. ಇದೇ ಪ್ರವೃತ್ತಿ ಮುಂದುವರೆದರೆ ನಮ್ಮ ಮ್ಯೂಸಿಯಂಗಳನ್ನೆಲ್ಲಾ ಮುಚ್ಚಬೇಕಾದೀತು, ನಮ್ಮ ಸಂಸ್ಕೃತಿಯಲ್ಲಿ ಸಂಘ ಪರಿವಾರಕ್ಕೆ ಇಷ್ಟವಾಗದ್ದೆಲ್ಲಾ ಧ್ವಂಸವಾದೀತು ಎಂದು ಖೇದ ವ್ಯಕ್ತಪಡಿಸಿರುವ ಸಹಮತ್ ಸೃಜನಶೀಲರ ಈ ಬೇಟೆ ನೈತಿಕವಾಗಿ, ಸಾಮಾಜಿಕವಾಗಿ ಹೇಯವಾದದ್ದು, ಕಾನೂನಿನ ಎದುರು ನಿಲ್ಲುವಂತಹ ಯೋಗ್ಯತೆಯಿಲ್ಲದ್ದು ಎಂದಿದೆ.

ಈ ವಿಷಯವನ್ನು ಎಲ್ಲಾ ಜಾತ್ಯಾತೀತ ಪಕ್ಷಗಳು ಸಂಸತ್ತಿನಲ್ಲಿ ಮತ್ತಿತರ ವೇದಿಕೆಯ ಇತರ ಸಾಂಸ್ಕೃತಿಕ ವ್ಯಕ್ತಿಗಳು ಹಾಗೂ ಜಾತ್ಯಾತೀತ ನಾಗರೀಕರೊಡಗೂಡಿ ಎತ್ತಬೇಕು ಎಂದೂ ಸಹಮತ್ ಮನವಿ ಮಾಡಿದೆ.

"ಬಿಜೆಪಿ ಸರಕಾರದ ಸ್ವಯಂ ಘೋಷಿತ ಜಾತ್ಯಾತೀತ ಮಿತ್ರರ ಮುಂದೆ ನಾವೊಂದು ... ಬಯಸುತ್ತೇವೆ. ಶ್ರೀಯುತ ...ಯವರು ಸಂಪುಟದಲ್ಲಿ ಈಗಲಾದರೂ ಇದನ್ನು ಎತ್ತುತ್ತಾರೆಯೇ? ಈ ಸರಕಾರ ಅನುಸರಿಸುತ್ತಿರುವ ನಗ್ನ ಕೋಮುವಾದಿ ಅಜೆಂಡಾವನ್ನು ನೋಡಿದ ನಂತರವಾದರೂ ಶ್ರೀಯುತ ಚಂದ್ರಬಾಬು ನಾಯ್ಡು ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳುತ್ತಾರೆಯೇ? ಜಾರ್ಜ್ ಫರ್ನಾಂಡೀಸ್, ನಿತಿಶ್ ಕುಮಾರ್ ಮತ್ತು ನವೀನ್ ಪಟ್ನಾಯಕ್ ಈ ನಿರ್ಣಯದಲ್ಲಿ ಪಾಲುದಾರರೇ?" ಎಂದು ಸಹಮತ್ ಹೇಳಿಕೆ ಖಾರವಾಗಿ ಪ್ರಶ್ನಿಸಿದೆ.

(ಐಎನ್‌ಎನ್)

ಸಿಟಿಬಿಟಿ ಬಗ್ಗೆ ಸರ್ಕಾರದ ನಿಲುವೇನು?

ಸ್ಪಷ್ಟೀಕರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ

ವಾಜಪೇಯಿ ಸರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ಸಮಗ್ರ ಪರೀಕ್ಷಾ ನಿಷೇಧ ಸಂಧಿ(ಸಿಟಿಬಿಟಿ)ಗೆ ಸಹಿ ಹಾಕುವ ಬಗ್ಗೆ ಮಾತುಕತೆ ನಡೆಸುತ್ತಿದೆ ಎಂದು ಅಧಿಕೃತ ಮೂಲಗಳು ಪತ್ರಿಕೆಗಳಿಗೆ ತಿಳಿಸುತ್ತಿವೆ. ಯಾವ ಶರತ್ತುಗಳ ಮೇಲೆ ಈ ಮಾತುಕತೆ ನಡೆಯುತ್ತಿದೆ ಎಂಬುದನ್ನು ಅಸ್ಪಷ್ಟವಾಗಿಡಲಾಗಿದೆ. ಸರಕಾರದ ಸ್ಪಷ್ಟ ನಿಲುವನ್ನು ತಿಳಿಸಲಾಗುತ್ತಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆ ಯೊಂದರಲ್ಲಿ ಆಪಾದಿಸಿದೆ.

ಸರಕಾರದ ಪರವಾಗಿ ಜಸ್ವಂತ್ ಸಿಂಗ್ ಅಮೆರಿಕನ್ ಉಪ ವಿದೇಶಾಂಗ ಕಾರ್ಯ ದರ್ಶಿ ಸ್ಟ್ರೋಬ್ ತಾಲ್ಬೋಟ್‌ರನ್ನು ಫ್ರಾಂಕ್‌ಫರ್ಟ್‌ನಲ್ಲಿ ಜುಲೈ 9 ರಂದು ಭೇಟಿಯಾಗಿದ್ದಾರೆ. ಈ ಮಾತುಕತೆಗಳನ್ನು ಒಂದು ಮೂರನೇ ದೇಶದಲ್ಲಿ ಸಂಸತ್ತಿಗೆ ಮತ್ತು ಭಾರತೀಯ ಜನತೆಗೆ ಹೇಳದೆ ರಹಸ್ಯಮಯ ರೀತಿಯಲ್ಲಿ ನಡೆಸಲಾಗುತ್ತಿದೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.

ಈ ಹಿಂದೆ ಸಂಯುಕ್ತ ರಂಗ ಸರ್ಕಾರ 1986 ರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸಂಪೂರ್ಣ ಬೆಂಬಲದೊಂದಿಗೆ ಸಿಟಿಬಿಟಿಗೆ ಸಹಿ ಹಾಕಲು ನಿರಾಕರಿಸಿತು. ಪಾಶ್ಚಿಮಾತ್ಯ ದೇಶಗಳು ಎಷ್ಟೇ ಒತ್ತಡ ಹೇರಿದರೂ ಒಂದು ಪಕ್ಷಪಾತಪೂರ್ಣ ಸಂಧಿಗೆ ಸಹಿ ಹಾಕುವುದಿಲ್ಲ ಎಂದು ಭಾರತ ನಿರಂತರ ವಾಗಿ ಹೇಳುತ್ತಾ ಬಂದಿದೆ ಎಂದು ನೆನಪಿಸಿರುವ ಸಿಪಿಐ(ಎಂ)ಪೊಲಿಟ್ ಬ್ಯೂರೋ ಒಂದು ಧುಸ್ಸಾಹಸವಾದಿ ಪರಮಾಣು ನೀತಿ ಆರಂಭಿಸಿರುವ ವಾಜಪೇಯಿ ಸರಕಾರ ಈಗ ಅಮೆರಿಕದ ಒತ್ತಡಗಳಿಗೆ, ನಿರ್ಬಂಧಗಳ ಬೆದರಿಕೆಗೆ ತಲೆ ಬಾಗುವಂತೆ ಕಾಣುತ್ತದೆ ಎಂದಿದೆ. ಭಾರತ ಇದುವರೆಗೆ ಸಿಟಿಬಿಟಿ ಕುರಿತಂತೆ ತಳೆದ ನಿಲುವಿಗೆ ಈಗಲೂ ತಾನು ಬದ್ಧವಾಗಿದ್ದೇನೆಯೇ. ಅಥವಾ ಈ ನಿಲುವನ್ನು ಕೈಬಿಡಲಾಗುತ್ತಿದೆಯೇ ಎಂದು ಈ ಸರಕಾರ ಜನಗಳಿಗೆ ತಿಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಿಸಿದೆ.

ವಾರದ ವ್ಯಂಗ್ಯ ಚಿತ್ರ

'ಟೈಂಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ.ಲಕ್ಷ್ಮಣ್



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27